# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI(C)

ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ ಸಂಪುಟ: 38 ಸಂಚಿಕೆ: 3 ಮೇ 2025 ಬೆಲೆ: ರೂ. 7/-




ಒಳ ಪುಟಗಳಲ್ಲಿ.............

ಚುನಾವಣೋತ್ತರ ಶ್ರೀಲಂಕಾ.........3
ಅಮೆರಿಕದ ನಾಗರಿಕರು ಹಸಿವು ಮತ್ತು ವಸತಿಹೀನತೆಯಿಂದ ಕಂಗಾಲಾಗಿದ್ದಾರೆ!.........4
ಬಾಂಗ್ಲಾದೇಶದ ಸಂವಿಧಾನದ ಸುಧಾರಣೆಗಳು ಹಾಗೂ ರಾಜಕೀಯ ಪರಿಸ್ಥಿತಿಯ ಕುರಿತು.........5
ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲದೊಂದಿಗೆ ಗಾಜಾದ ಮೇಲೆ ಮುಂದುವರೆದ ನರಮೇಧ.........6
ಮೇ ದಿನಾಚರಣೆ.........10

"ನಾನು ಈ ಸಾಲುಗಳನ್ನು ಬರೆಯುತ್ತಿರುವಾಗ, ಪ್ರಪ್ರಥಮ ಬಾರಿಗೆ ಒಂದು ಅಖಂಡ ಸೈನ್ಯವಾಗಿ, ಒಂದೇ ಗುರುತಿನ ಅಡಿಯಲ್ಲಿ ಮತ್ತು '8 ಘಂಟೆ ದುಡಿಮೆ' ಎಂದು ಕಾನೂನಾತ್ಮಕವಾಗಿ ಸ್ಥಾಪಿತವಾಗಿರುವ ಒಂದೇ ತತ್‌ಕ್ಷಣದ ಗುರಿಯೊಂದಿಗೆ ಯೂರೋಪು ಮತ್ತು ಅಮೇರಿಕದ ಕಾರ್ಮಿಕರು ತಮ್ಮ ಶಕ್ತಿಯನ್ನು ಅವಲೋಕನ ಮಾಡಿಕೊಳ್ಳುತ್ತಿದ್ದಾರೆ. ನಾವಿಂದು ಕಾಣುತ್ತಿರುವ ಮಹಾದೃಶ್ಯವು, ಎಲ್ಲಾ ದೇಶಗಳ ಕಾರ್ಮಿಕರು ನಿಜವಾದ ಅರ್ಥದಲ್ಲಿ ಇಂದು ಒಂದಾಗಿದ್ದಾರೆ ಎಂಬುದನ್ನು ವಿಶ್ವದಾದ್ಯಂತ ಎಲ್ಲಾ ಬಂಡವಾಳಗಾರರು ಮತ್ತು ಭೂಮಾಲೀಕರು ಅರಗಿಸಿಕೊಳ್ಳುವಂತೆ ಮಾಡುತ್ತಿದೆ. ತಮ್ಮ ಕಣ್ಣುಗಳಿಂದ ಇದನ್ನು ಸ್ವತ: ನೋಡಲು ನನ್ನೊಂದಿಗೆ ಇಂದು ಮಾರ್ಕ್ಸ್ ಇದ್ದಿದ್ದರೆ........." -ಕಾಮ್ರೇಡ್ ಫ್ರೆಡರಿಕ್ ಎಂಗೆಲ್ಸ್,

ಮೇ ದಿನ , 1890ರ ಮೇ 1ರಂದು ಕಮ್ಯುನಿಸ್ಟ್ ಪ್ರಣಾಳಿಕೆಯ ನಾಲ್ಕನೇ ಜರ್ಮನ್ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ......

### ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ವಿರೋಧಿಸಿ!

## ಜನಾಂದೋಲನಕ್ಕೆ ಮುಂಬನ್ನಿ-ಎಸ್‌ಯುಸಿಐ(ಕಮ್ಯುನಿಸ್ಟ್) ಕರೆ

ಇಂದಿನ ಸಮಾಜದ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಕಾಡುತ್ತಿರುವ ಹತ್ತು ಹಲವು ಸಮಸ್ಯೆಗಳಿಂದ ಜನಜೀವನ ದುರ್ಭರವಾಗಿದೆ. ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಬೆಳೆಯುತ್ತಿರುವ ಸಾಂಸ್ಕೃತಿಕ ಅಧ:ಪತನ, ಶ್ರೀಮಂತರ–ಬಡವರ ನಡುವೆ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಮಧ್ಯಮ, ಕೆಳ ಮಧ್ಯಮ ಮತ್ತು ಬಡ ವರ್ಗದ ಜನರಿಗೆ ಕಾಡುತ್ತಿರುವ ಆರ್ಥಿಕ ಅಭದ್ರತೆ, ಅಸತ್ಯ, ಅನ್ಯಾಯಗಳ ವಿರುದ್ಧ ಧ್ವನಿಯೆತ್ತಬೇಕಾದ ಯುವಪೀಳಿಗೆ ದಾರಿ ತಪ್ಪುತ್ತಿರುವ ಕೆಟ್ಟ ಬೆಳವಣಿಗೆ, ಮೊಬೈಲ್ ಮಾಯಾಜಾಲಕ್ಕೆ ಆಕರ್ಷಿತರಾಗಿ ಮಾಡಬಾರದ ಕೆಲಸ ಮಾಡಿ ಅಪರಾಧಿ ಮನೋಭಾವಕ್ಕೆ ಬಲಿಯಾಗುತ್ತಿರುವ ಹದಿಹರೆಯದ ಮಕ್ಕಳು....ಇವೆಲ್ಲವೂ ನಮ್ಮ ಮನ:ಸಾಕ್ಷಿಯನ್ನು ಕಲಕುವಂತಿವೆ. ಎನ್‌ಸಿಆರ್‌ಬಿ(National Crimes Record Bureau)–2022ರ ಪ್ರಕಾರ ದೇಶದಲ್ಲಿ ಪ್ರತಿ 11 ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ, ದಿನಕ್ಕೆ 90 ಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತಿದೆ. ಗಂಡನೇ ತನ್ನ ಜೀವನ ಸಂಗಾತಿಯನ್ನು ಕೊಂದು ತುಂಡು ತುಂಡು ಮಾಡಿ ಫ್ರಿಡ್ಜ್ ಅಥವಾ ಸೂಟ್‌ಕೇಸ್‌ನಲ್ಲಿ ತುರುಕಿದಂತಹ ಕ್ರೂರ ಘಟನೆಗಳಿಗೆ ಈ ದೇಶ ಸಾಕ್ಷಿಯಾಗಿದೆ. ನೆರೆ ರಾಜ್ಯವಾದ ಆಂಧ್ರದಲ್ಲಿ ನಾಲ್ಕು ಹಾಗೂ ಆರು ವರ್ಷದ ಇಬ್ಬರು ಮಕ್ಕಳು ಒಳ್ಳೆಯ ಅಂಕಗಳನ್ನು ಗಳಿಸಲಿಲ್ಲವೆಂದು, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ಬದುಕಲು ಅಸಾಧ್ಯವೆಂದು ಭಾವಿಸಿ ಸ್ವತ: ಅವರ ತಂದೆಯೇ ಆ ಇಬ್ಬರು ಕಂದಮ್ಮಗಳನ್ನು ನೀರಲ್ಲಿ ಮುಳುಗಿಸಿ ಸಾಯಿಸಿ ನಂತರ ತಾನು ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆ ಎಲ್ಲರನ್ನೂ ಆಘಾತಗೊಳಿಸಿದೆ! ರಾಜ್ಯದಲ್ಲಿ ಆರೋಗ್ಯ, ಶಿಕ್ಷಣ, ವಿದ್ಯುತ್ ಮುಂತಾದ ಎಲ್ಲಾ ಸೇವಾ ವಲಯಗಳು ವ್ಯಾಪಾರದ ಕೂಪಗಳಾಗಿವೆ. ಎಲ್ಲಾ ಅಗತ್ಯ ವಸ್ತುಗಳ–ಔಷಧಿಗಳ ಬೆಲೆಗಳು ದಿನೇ ದಿನೇ ಹೆಚ್ಚುತ್ತಿವೆ. ರಿಯಲ್ ಎಸ್ಟೇಟ್ ದಂಧೆಕೋರರು ಹಾಗೂ ಕಾರ್ಪೊರೇಟ್ ಮನೆತನಗಳು ಬಡವರ ಜೀವನದ ಮೇಲೆ ಪ್ರಹಾರ ಮಾಡುತ್ತಿವೆ. ಇವರಿಗೆ ಬೆನ್ನೆಲುಬಾಗಿ ನಿಂತಿವೆ ನಮ್ಮ ಸರ್ಕಾರಗಳು! ಎಲ್ಲಾ ಸರ್ಕಾರಗಳು ಜನಪರ ನೀತಿಗಳನ್ನು ಮಂಡಿಸುವ ಬದಲು, ಬಂಡವಾಳಗಾರರ ಪರ ನೀತಿಗಳನ್ನು ಜಾರಿಗೊಳಿಸುತ್ತಿವೆ. ಜನಪ್ರತಿನಿಧಿಗಳು ಮಾಲೀಕರ ಪ್ರತಿನಿಧಿಗಳಾಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯಿಂದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ಎಲ್ಲಾ ಕ್ಷೇತ್ರಗಳು ಲಾಭದ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿವೆ. ಎಲ್ಲಿಯವರೆಗೆ ಸರ್ಕಾರಗಳು ಬಂಡವಾಳಗಾರರಿಗಾಗಿ ಸೇವೆ ಮಾಡುತ್ತವೆಯೋ ಅಲ್ಲಿಯವರೆಗೂ ಶ್ರೀಸಾಮಾನ್ಯನ ಬದುಕು ಉತ್ತಮವಾಗುವುದಿಲ್ಲ. ಯಾವ ರಾಯ ಬಂದರೂ ರಾಗಿ ಬೀಸುವುದು ತಪ್ಪುವುದಿಲ್ಲ!

#### ರಾಜ್ಯದ ಪ್ರಸಕ್ತ ರಾಜಕೀಯ ಪರಿಸ್ಥಿತಿ

ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿ ಹಿಂದೆಂದೂ ಕೇಳರಿಯದಂತಹ ರೀತಿಯಲ್ಲಿ ಅಧೋಗತಿ ತಲುಪಿದೆ. ಸರ್ಕಾರ ರಚಿಸಿ ಎರಡು ವರ್ಷಗಳು ಸಮೀಪಿಸುತ್ತಾ ಬಂದರೂ, ಕಾಂಗ್ರೆಸ್ ನಾಯಕರ ಮಧ್ಯೆ ಅಧಿಕಾರದ ಪೈಪೋಟಿ ನಿಂತಿಲ್ಲ. ಬಿಜೆಪಿ, ಜೆಡಿ(ಎಸ್) ಎರಡೂ ಪಕ್ಷಗಳು ಸಹ ಆಂತರಿಕ ಕಚ್ಚಾಟಗಳಲ್ಲಿ ಮುಳುಗಿಹೋಗಿವೆ. ಕಳೆದ ಅವಧಿಯಲ್ಲಿ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನುಹತ್ತಿ ಅದನ್ನೇ ಚುನಾವಣೆಯ ವಿಷಯವನ್ನಾಗಿಸಿಕೊಂಡು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತು. ಭ್ರಷ್ಟಾಚಾರವನ್ನು ಮಟ್ಟ ಹಾಕುವ ಮಾತಿರಲಿ, ಬಿಜೆಪಿ ಅವಧಿಯ ಆಡಳಿತದಲ್ಲಿ 40 ಪರ್ಸೆಂಟ್ ಇದ್ದ ಕಮಿಷನ್ ಈಗ 60 ಪರ್ಸೆಂಟ್‌ಗೆ ಏರಿಕೆಯಾಗಿರುವ ವರದಿಗಳು ಬಂದಿವೆ! ಜನರ ಸಮಸ್ಯೆಗಳನ್ನು ಎತ್ತಿಹಿಡಿದು ಬೀದಿಯಲ್ಲಿ ಪ್ರತಿಭಟಿಸುವ ಮಟ್ಟದಲ್ಲಿ ವಿರೋಧ ಪಕ್ಷಗಳಿಲ್ಲ. ಕೆಲವು ಬಾರಿ ಪ್ರತಿಭಟನೆಗಳನ್ನು ನಡೆಸಿದರೂ, ಅದು ರಾಜಕೀಯ ದುರ್ಲಾಭಕ್ಕಾಗಿ ಮಾತ್ರ ಸೀಮಿತವಾಗಿದೆ. ಜನರ ಸಮಸ್ಯೆಗಳನ್ನು ಚರ್ಚಿಸಲು ವೇದಿಕೆಯಾಗಬೇಕಿದ್ದ ವಿಧಾನಸೌಧದ ಕಲಾಪಗಳು 'ಮಧುಬಲೆ' ಯಂತಹ ಹೀನ ಕೃತ್ಯಗಳ ಚರ್ಚೆಗಳ ಕೆಸರೆರಚಾಟದಲ್ಲಿ ಮುಳುಗಿರುವುದನ್ನು ನೋಡಿ ಅಸಹ್ಯಪಡುವಂತಾಗಿದೆ.

#### ರಾಜ್ಯದ ಜನಗಳ ಬವಣೆ ಕೇಳುವವರು ಯಾರು?

ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಗೆ ತುತ್ತಾದ ಬಡಜನರು ಸಾಲ ತೀರಿಸಲಾಗದೆ ಅವಮಾನ, ಹಿಂಸೆಗೆ ಬಲಿಯಾಗಿದ್ದಾರೆ. ಬಡ ಕುಟುಂಬಗಳ ಆಧಾರಸ್ತಂಭವಾಗಿ ಇದ್ದವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಬೆಳೆದ ಬೆಳೆಗೆ ಬೆಲೆ ಸಿಗದೆ ಅಪಾರ ಖರ್ಚು ವೆಚ್ಚಗಳನ್ನು ಮಾಡಿರುವ ರೈತರು ಕಂಗಾಲಾಗಿ ಹೋಗಿದ್ದಾರೆ. ವರ್ಷಗಟ್ಟಲೆ ನೆನೆಗುದಿಗೆ ಬಿದ್ದಿರುವ ಲಕ್ಷಾಂತರ ಬಗರ್ ಹುಕುಂ ಬಡ ಸಾಗುವಳಿದಾರರ ಸಮಸ್ಯೆ ಪರಿಹಾರ ಕಾಣದೆ ಮುಂದೂಡಲ್ಪಡುತ್ತಿದೆ. ಆಶಾ–ಅಂಗನವಾಡಿ ಮುಂತಾದ ಸ್ಕೀಮ್ ನೌಕರರು ಬಿಡಿಗಾಸಿಗೆ ಕೆಲಸ ಮಾಡುತ್ತಿದ್ದಾರೆ. ಜೀವನ ನಡೆಸುವುದು ಕಷ್ಟವೆಂದು, ಗೌರವದ ಜೀವನ ನಡೆಸಲು ಬೇಕಾದ ಕನಿಷ್ಠ ವೇತನ ಕೊಡಬೇಕೆಂದು 'ಆಶಾ'ಗಳು

2ನೇ ಪುಟಕ್ಕೆ....

### ಏಪ್ರಿಲ್24, 2025: ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪನಾ ದಿನದ ಕರೆ!

## ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿ ನೆರವೇರಿಸಲು ಸಜ್ಜಾಗಿ!



ಬೆಂಗಳೂರು: ಎಸ್‌ಯುಸಿಐ(ಸಿ) ಪಕ್ಷದ 78ನೇ ಸಂಸ್ಥಾಪನಾ ದಿನದ ಮುಖ್ಯ ಭಾಷಣಕಾರರಾಗಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾಮ್ರೇಡ್ ಸುಭಾಷ್ ದಾಸ್‌ಗುಪ್ತ ಮಾತನಾಡುತ್ತಿರುವುದು

ಇದೇ ಏಪ್ರಿಲ್24ರಂದು ಎಸ್‌ಯುಸಿಐ(ಸಿ) ಪಕ್ಷದ 78ನೇ ಸಂಸ್ಥಾಪನಾ ದಿನವನ್ನು ದೇಶದ ದುಡಿಯುವ ಜನರೆಲ್ಲರೂ ಬಹಳ ಶ್ರದ್ಧೆಯಿಂದ ಆಚರಿಸಿದ್ದಾರೆ. ಮಾರ್ಕ್ಸ್–ಎಂಗೆಲ್ಸ್–ಲೆನಿನ್–ಸ್ಟಾಲಿನ್–ಮಾವೋ ಝೆ ಡಾಂಗ್ ಅವರ ಅತ್ಯುತ್ತಮ ಅನುಯಾಯಿಯಾಗಿದ್ದು, ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರಿಂದ ಸ್ಥಾಪಿಸಲ್ಪಟ್ಟ ಭಾರತದ ನೆಲದ ನೈಜ ಕಮ್ಯುನಿಸ್ಟ್ ಪಕ್ಷವಾದ ಎಸ್‌ಯುಸಿಐ(ಸಿ)ಯ ಕೆಂಪು ಧ್ವಜ ದೇಶದೆಲ್ಲಡೆ ಹಾರಾಡುತ್ತಿದೆ. ಏಪ್ರಿಲ್ 24–ಈ ದಿನ ಕಾಮ್ರೇಡ್ ಶಿವದಾಸ್ ಘೋಷ್‌ರವರ ಹಲವಾರು ನೆನಪುಗಳ ಸರಮಾಲೆಯನ್ನೇ ಹೊತ್ತು ತರುತ್ತದೆ. ಅವರು, ಭಾರತದಲ್ಲಿ ಕಾರ್ಮಿಕವರ್ಗ ಕ್ರಾಂತಿಯನ್ನು ನೆರವೇರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು, ಕ್ರಾಂತಿಕಾರಿ ಧಾರ್ಷ್ಟ್ಯದಿಂದ ಎಲ್ಲಾ ಅಡೆತಡೆಗಳನ್ನು ಎದುರಿಸಿ, ತಮ್ಮ ಜೀವನದುದ್ದಕ್ಕೂ ರಾಜಿರಹಿತ, ಅಚಲ ಹೋರಾಟವನ್ನು ನಡೆಸಿದರು. ತನ್ಮೂಲಕ ಅವರು ಓರ್ವ ವಿರಾಟ್ ಸ್ವರೂಪದ ಕಮ್ಯುನಿಸ್ಟ್ ನಾಯಕರೂ, ಬೋಧಕರೂ ಆಗಿ ಹೊರಹೊಮ್ಮಿದರು. 1940 ಮತ್ತು 1960ರ ದಶಕಗಳಷ್ಟು ಹಿಂದೆಯೇ, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿದ್ಯಮಾನಗಳು, ಬೆಳವಣಿಗೆಗಳು ಮತ್ತು ಇವೆರಡೂ ಕ್ಷೇತ್ರಗಳಲ್ಲಿ ಬೃಹತ್ತಾಗಿ ಕಾಣಿಸಿಕೊಂಡ ಅಪಾಯಗಳನ್ನು ವಿಶ್ಲೇಷಿಸಿದ ಅವರ ಮಹತ್ವಪೂರ್ಣ ಬೋಧನೆಗಳು ಮತ್ತು ಎಚ್ಚರಿಕೆಗಳು, ಹೇಗೆ ನಂತರದ ದಿನಗಳಲ್ಲಿ ಸಾಬೀತಾದವು ಎಂಬುದನ್ನು ಈ ದಿನ ಮತ್ತೆ ಹೊಸದಾಗಿ ನಮ್ಮ ನೆನಪಿಗೆ ತರುತ್ತದೆ.

1948ರ ಏಪ್ರಿಲ್ 24ರ ಈ ದಿನದಂದು ಕೇವಲ ಬೆರಳೆಣಿಕೆಯಷ್ಟು ಕ್ರಾಂತಿಕಾರಿ

6ನೇ ಪುಟಕ್ಕೆ...

# ಮೊಬೈಲ್‌ನ ಕರಾಳ ಛಾಯೆಯಡಿ ನಲುಗುತ್ತಿರುವ ಬಾಲ್ಯ

**(ಕೊಲ್ಕತ್ತಾದ ನಾಗರಿಕರೊಬ್ಬರು ನಮ್ಮ ಪಕ್ಷದ ಇಂಗ್ಲಿಷ್ ಮುಖಪತ್ರಿಕೆ 'ಪ್ರಾಲಿಟೇರಿಯನ್ ಎರಾ' ಸಂಪಾದಕರಿಗೆ ಬರೆದ ಪತ್ರದ ಅನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.)**

**ಮಾನ್ಯರೇ,**

ಇತ್ತೀಚೆಗೆ ಭೇಟಿಯಾದ ಯುವ ತಂದೆಯೊಬ್ಬರು ಎದುರಿಸುತ್ತಿರುವ ಸಮಸ್ಯೆ ತಿಳಿದು ಮನಸ್ಸು ವಿಚಲಿತವಾಯಿತು. ಬಹಳ ಪರಿಚಯಸ್ಥರು, ಇತ್ತೀಚೆಗೆ ಅವರ ಭೇಟಿಯಾಯಿತು. ನೋಡಿದ್ದೇ ತಡ ನನ್ನ ಕೈಹಿಡಿದು ಗಳಗಳನೆ ಅಳತೊಡಗಿದರು. "ಏನಾಯಿತು?" ಎಂದು ಕೇಳಿದೆ. ಅವರು ಹೇಳಿದ್ದು ಕೇಳಿ ಮುಂದೇನು ಹೇಳಬೇಕೆಂದು ತಿಳಿಯದೆ ತಡಕಾಡುವಂತಾಯಿತು. ಅವರ ಸಮಸ್ಯೆಗೆ ಕಾರಣ 'ಮೊಬೈಲ್' ಫೋನು.

ಇತ್ತೀಚಿನ ದಿನಗಳಲ್ಲಿ ಈ ಸಾಧನ ನಮ್ಮ ಜೀವನದ, ಅದರಲ್ಲೂ ಮಧ್ಯಮ ವರ್ಗದವರ ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಮಕ್ಕಳಿಗೆ ಊಟ ಮಾಡಿಸುವುದಕ್ಕೂ ತಾಯಂದಿರು ಇದನ್ನು ಸುಲಭ ಸಾಧನವಾಗಿ ಬಳಸುತ್ತಿದ್ದಾರೆ. ಹಾಗಾಗಿ, ಅತೀ ಚಿಕ್ಕ ವಯಸ್ಸಿನಲ್ಲೇ ಕ್ರಮೇಣವಾಗಿ ಮಕ್ಕಳಿಗೆ ಮೊಬೈಲ್‌ನ ಚಟ ಹತ್ತುತ್ತಿದೆ. ಮಕ್ಕಳ ಮನಸ್ಸು ಸಹಜವಾಗಿಯೇ ಎಲ್ಲವನ್ನೂ ತಿಳಿದುಕೊಳ್ಳುವ ಹುಡುಕಾಟದಲ್ಲಿರುತ್ತದೆ. ಕಾಣದ್ದನ್ನು ಕಾಣುವ, ಅರಿಯದ್ದನ್ನು ಅರಿಯುವ ತವಕ. ತಮ್ಮ ಸುತ್ತಮುತ್ತಲಿನ ಜಗತ್ತನ್ನು ಅರ್ಥಮಾಡಿಕೊಳ್ಳುವ ಬಯಕೆ. ಇಂತಹ ವಯಸ್ಸಿನಲ್ಲಿ ಮೊಬೈಲ್ ಚಟ ಹತ್ತಿದರೆ, ಅದರ ಆಕರ್ಷಕ ಕೀಲಿಗಳು, ಐಕಾನ್‌ಗಳು, ವೆಬ್ ಸೈಟ್‌ಗಳು ಮಗುವನ್ನು ಸೆಳೆಯಲಾರಂಭಿಸುತ್ತವೆ. ವಿಡಿಯೋ ಗೇಮ್‌ಗಳು, ಕಾರ್ಟೂನುಗಳ ಮೂಲಕ ಮಕ್ಕಳು ತಮಗೆ ಅರಿವಿಲ್ಲದಂತೆಯೇ ಪೋರ್ನೋಗ್ರಫಿಯ ಸೈಟ್‌ಗಳ ಕರಾಳಲೋಕವನ್ನು ಪ್ರವೇಶಿಸುತ್ತಾರೆ. ಆರಂಭದಲ್ಲಿ ಕಿಶೋರರು ಇದರಿಂದ ಬೆರಗಾದರೂ, ನಂತರ ಕ್ರಮೇಣವಾಗಿ ಅವರದರ ವ್ಯಸನಿಗಳಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಏಳು-ಎಂಟರ ಎಳೆಯ ವಯಸ್ಸಿನ ಮಕ್ಕಳು ಪೋರ್ನೋಗ್ರಫಿಯನ್ನು ನೋಡುವ ಚಟ ಹತ್ತಿಸಿಕೊಳ್ಳುವ ಆತಂಕಕಾರಿ ಬೆಳವಣಿಗೆಯನ್ನು ಮನೋವೈದ್ಯರು ಗಮನಿಸಿದ್ದಾರೆ. ಅದರಲ್ಲೂ, ಸದಾ ಕಾರ್ಯನಿರತರಾಗಿದ್ದು, ತಮ್ಮ ಮಕ್ಕಳ ಮೇಲೆ ನಿಗಾ ಇಡಲಾಗದ ಪೋಷಕರ ಮಕ್ಕಳು ಇದಕ್ಕೆ ಅತಿ ಹೆಚ್ಚು ಬಲಿಯಾಗುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳೊಡನೆ ಅವಶ್ಯಕ ಸಮಯವನ್ನು ಕಳೆಯುತ್ತಿಲ್ಲವಾದುದರಿಂದಲೇ, ಮಕ್ಕಳು ಮೊಬೈಲ್ ಅಥವಾ ಇತರೆ ಶ್ರವಣ-ದೃಶ್ಯ ಗ್ಯಾಜೆಟ್‌ಗಳ ವ್ಯಸನಿಗಳಾಗುತ್ತಿದ್ದಾರೆ.

ಈಗ ನಾನು ನನ್ನ ಮುಂದೆ ಕಣ್ಣೀರಿಟ್ಟ ತಂದೆಯ ಕಥೆ ಹೇಳುತ್ತೇನೆ. ಆತನ ಒಂಬತ್ತು ವರ್ಷದ ಪುಟ್ಟ ಮಗಳು ಮೊಬೈಲ್ ಫೋನ್‌ನಲ್ಲಿಯ ಪೋರ್ನೋಗ್ರಫಿಯ ವ್ಯಸನಿಯಾಗಿದ್ದಾಳೆ. ತಮ್ಮ ಮಗಳು ಈ ವಿಕೃತ ಮನಸ್ಥಿತಿಯ ಚಕ್ರವ್ಯೂಹಕ್ಕೆ ಹೇಗೆ ಸಿಲುಕಿದಳು ಎಂಬುದು ಆಕೆಯ ಹೆತ್ತವರಿಗೆ ಗೊತ್ತೇ ಇಲ್ಲ. ಪಕ್ಕದ ಮನೆಯ ಹತ್ತು ವರ್ಷದ ಹುಡುಗನೊಂದಿಗೆ ಇದನ್ನು ನೋಡುತ್ತಿರುವುದನ್ನು ಕಂಡು ಆ ಹುಡುಗನ ತಾಯಿ ಇವರ ಗಮನಕ್ಕೆ ತಂದ ಮೇಲೆಯೇ ಇವರಿಗೆ ಈ ಬಗ್ಗೆ ಗೊತ್ತಾದದ್ದು. ಅಲ್ಲದೇ ಅದನ್ನು ನೋಡುತ್ತಿರುವಾಗ, ಈ ಹುಡುಗಿ ಆ ಹುಡುಗನಲ್ಲಿ ಲೈಂಗಿಕ ಬಯಕೆ ಹುಟ್ಟಿಸಲು ಅವನ ಮರ್ಮಾಂಗವನ್ನು ಮುಟ್ಟುತ್ತಿದ್ದಳಂತೆ. ಆ ತಾಯಿ ಮೊಬೈಲ್‌ಅನ್ನು ಕಸಿದು ಬೈದಿದ್ದಾರೆ. ಇವೆಲ್ಲಾ ಹೇಗೆ ಸಿಕ್ಕಿತೆಂದು ಪ್ರಶ್ನಿಸಿದಾಗ, ಮೊಬೈಲ್ ನೋಡುತ್ತಿರುವಾಗ ಈ ಪೋರ್ನೋಗ್ರಫಿ ವೆಬ್‌ಸೈಟ್‌ಗಳು ಸಿಕ್ಕು ಕ್ರಮೇಣವಾಗಿ ಚಟ ಹತ್ತಿದೆ ಎಂಬುದನ್ನು ಬಾಯಿಬಿಟ್ಟಿದ್ದಾರೆ. ಹಿಂದೆ ಈ ಪುಟ್ಟ ಹುಡುಗಿ ಹಾಡುವುದರಲ್ಲಿ ಮತ್ತು ಚಿತ್ರಕಲೆಯಲ್ಲಿ ತುಂಬಾ ಪ್ರವೀಣಳಾಗಿದ್ದಳು. ಪಶ್ಚಿಮ ಬಂಗಾಳದ ವೈದ್ಯೆ 'ಅಭಯ'ಳ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನಂತರ, ಅವಳು ಅರಿಜಿತ್ ಸಿಂಗ್ ಅವರ 'ಆರ್ ಕೋಬೆ, ಆರ್ ಕೋಬೆ' ಹಾಡನ್ನು ('ಈಗಲ್ಲದಿದ್ದರೆ ಇನ್ಯಾವಾಗ' ಎಂಬ ಹಾಡು ಆಗ 'ಅಭಯ'ಳಿಗೆ ನ್ಯಾಯ ಒದಗಿಸಿ ಎಂದು ಪ್ರತಿಭಟಿಸುತ್ತಿರುವವರಲ್ಲಿ ಬಹಳ ಸ್ಫೂರ್ತಿ ತುಂಬಿತ್ತು) ಸ್ವಯಂಪ್ರೇರಿತವಾಗಿ ಕಲಿತು ಹಾಡುತ್ತಿದ್ದಳಂತೆ. ಕ್ರಮೇಣವಾಗಿ ಅವಳು ತನ್ನೆಲ್ಲಾ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಿರುವುದನ್ನು ಕಂಡು ಅವಳ ತಂದೆ ದುಃಖಿಸುತ್ತಾ ಕೇಳಿದರು: "ನನ್ನ ಒಬ್ಬಳೇ ಮಗಳನ್ನು ನಾನು ಹೇಗೆ ಉಳಿಸಿಕೊಳ್ಳಲಿ ಎಂದು ದಯವಿಟ್ಟು ಹೇಳಿ". ನಾನು ಅವರನ್ನು ಸಮಾಧಾನಿಸಲು ಪ್ರಯತ್ನಿಸಿದೆ: "ಇದು ನಿಮ್ಮೊಬ್ಬರ ಸಮಸ್ಯೆಯಲ್ಲ, ಇದು ಸಾಮಾಜಿಕ ಅಧಃಪತನದ ಪರಿಣಾಮ. ಇದು ಯುವಕರು ಮತ್ತು ವೃದ್ಧರನ್ನಷ್ಟೇ ಅಲ್ಲದೆ ಚಿಕ್ಕ ಮಕ್ಕಳನ್ನೂ ತನ್ನ ಕೂಪಕ್ಕೆ ಎಳೆದುಕೊಳ್ಳುತ್ತಿದೆ. ನಮ್ಮ ಕುಟುಂಬದ ಸದಸ್ಯರೊಬ್ಬರು ಇದಕ್ಕೆ ಬಲಿಯಾಗಿರುವುದನ್ನು ಕಂಡಾಗ ನಾವು ಅದನ್ನು ವೈಯಕ್ತಿಕ ಸಮಸ್ಯೆ ಎಂದು ಭಾವಿಸುತ್ತೇವೆ. ಇದು ಬಹಳವೇ ತಪ್ಪು ಗ್ರಹಿಕೆ. ಬಾಲ್ಯದ ಪರಿಶುದ್ಧತೆಯನ್ನು ಕಾಪಾಡಲು ಸೃಜನಶೀಲತೆ ಹಾಗೂ ಇಂತಹ ಇತರ ವಿಷಯಗಳತ್ತ ಮಗುವಿನ ಆಸಕ್ತಿ ಬೆಳೆಸಬೇಕು, ಅವನ್ನು ಪ್ರೋತ್ಸಾಹಿಸಬೇಕು. ಮಕ್ಕಳನ್ನು ದೈಹಿಕ ವ್ಯಾಯಾಮ ಮಾಡಲು, ಹೊರಾಂಗಣ ಆಟಗಳನ್ನು ಆಡಲು, ಕಥೆಗಳನ್ನು ಕೇಳಲು ಮತ್ತು ಅವರಿಗೆ ಸರಿಹೊಂದುವ ಲೇಖನಗಳನ್ನು ಓದಲು ಪ್ರೋತ್ಸಾಹಿಸಬೇಕು. ಜೊತೆಗೆ, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಹೋರಾಟಗಾರರು ಮತ್ತು ನವೋದಯ ಚಿಂತಕರ ಅಮೂಲ್ಯ ಜೀವನ ಮತ್ತು ಹೋರಾಟದ ಬಗ್ಗೆ ತಿಳಿದುಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಭವಿಷ್ಯದ ಪೀಳಿಗೆಯನ್ನು ಈ ಅವನತಿಯಿಂದ ರಕ್ಷಿಸುವಂತೆ ಪದೇ ಪದೇ ಜನರಲ್ಲಿ ಮನವಿ ಮಾಡುತ್ತಿದ್ದಾರೆ. ಬರೀ ನೀವು ಮಾತ್ರವಲ್ಲ, ಸಾವಿರಾರು ಪೋಷಕರು ಇಂತಹ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ನಿಮ್ಮ ಮಗಳು, ಈ ಕೂಡಲೇ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಿ. ಜೊತೆಗೆ, ವಾರಕ್ಕೊಮ್ಮೆ ಅಥವಾ ಸಾಧ್ಯವಾದರೆ ಪ್ರತಿದಿನ, ಅವಳು ಹೊರಾಂಗಣ ಆಟಗಳು ಮತ್ತು ಇತರೆ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳಿ." ಎಂದು ಅವರಿಗೆ ಕೆಲವು ಸಲಹೆಗಳನ್ನು ನೀಡಿದೆ.

ಕೆಲವು ವಾರಗಳ ತರುವಾಯ ಆ ಪುಟ್ಟ ಹುಡುಗಿ ಇತ್ತೀಚೆಗೆ ಸುಧಾರಣೆಯ ಲಕ್ಷಣಗಳನ್ನು ತೋರಿಸುತ್ತಿದ್ದಾಳೆ ಎಂಬುದು ನನ್ನ ಗಮನಕ್ಕೆ ಬಂದು ಮನಸ್ಸು ಹಗುರಾಯಿತು.



ಹೃತ್ಪೂರ್ವಕ ನಮನಗಳೊಂದಿಗೆ,
ದೇಬಾಶಿಸ್ ರಾಯ್
ಹೌರಾ, ಕೊಲ್ಕತ್ತಾ

---

( 1ನೇ ಪುಟದಿಂದ... )

## ಜನಾಂದೋಲನಕ್ಕೆ ಮುಂಬನ್ನಿ-ಎಸ್‌ಯುಸಿಐ(ಕಮ್ಯುನಿಸ್ಟ್) ಕರೆ

ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ಬಂದು ಹಗಲು-ರಾತ್ರಿ ಹೋರಾಟ ಮಾಡಿದರೂ ಸರ್ಕಾರದಿಂದ ಸಿಕ್ಕಿದ ಆಶ್ವಾಸನೆ ಇನ್ನೂ ಈಡೇರಿಲ್ಲ! ರಾಜ್ಯದ ಅತ್ಯಂತ ಕೆಳಸ್ತರದ ಬಡ ಜನರು ತಮ್ಮ ಮಕ್ಕಳ ಶಿಕ್ಷಣಕ್ಕೆ ಅವಲಂಬಿಸಿರುವ 6,000ಕ್ಕೂ ಹೆಚ್ಚು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಲು ವಿರೋಧ ಪಕ್ಷಗಳ ಸಹಕಾರದೊಂದಿಗೆ ಸರ್ಕಾರ ನಿರ್ಧಾರ ಮಾಡಿದೆ!

ಉದ್ಯೋಗ ಸೃಷ್ಟಿಸುವ ಮತ್ತು ನಿರುದ್ಯೋಗ ಭತ್ಯೆ ನೀಡುವ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದರೂ, ರಾಜ್ಯ ಸರ್ಕಾರ ಆ ದಿಕ್ಕಿನಲ್ಲಿ ಒಂದು ಹೆಜ್ಜೆಯೂ ಮುನ್ನಡೆ ಇಟ್ಟಿಲ್ಲ. ಬದಲಾಗಿ ನೇಮಕಾತಿ ಮಾಡಿಕೊಳ್ಳಬೇಕಾಗಿದ್ದ ಕೆಪಿಎಸ್‌ಸಿ ಭ್ರಷ್ಟಾಚಾರದ ಕರ್ಮಕಾಂಡದಲ್ಲಿ ಮುಳುಗಿಹೋಗಿದೆ. ಸರ್ಕಾರಿ ಇಲಾಖೆಗಳ ಖಾಲಿ ಹುದ್ದೆಗಳು ಹಾಗೆಯೇ ಕೊಳೆಯುತ್ತಿವೆ. ಸಾವಿರಾರು ಐಟಿ ಉದ್ಯೋಗಿಗಳನ್ನು ಮನೆಗೆ ಕಳಿಸಲಾಗಿದೆ. ಕೃತಕ ಬುದ್ಧಿಮತ್ತೆಯ ಪರಿಣಾಮವಾಗಿ ಲಕ್ಷಾಂತರ ಜನ ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ. ಬಡಜನರಿಗೆ ಆಶ್ರಯವಾಗಿರಬೇಕಿದ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಕನಿಷ್ಠ ಸೌಲಭ್ಯಗಳು, ಅವಶ್ಯಕ ವೈದ್ಯರು, ದಾದಿಯರ ಕೊರತೆಯಿಂದ, ಅದರಲ್ಲೂ ಮುಖ್ಯವಾಗಿ ಕಳಪೆ ಔಷಧಿಗಳಿಂದ ಹಲವಾರು ಹಸುಗೂಸುಗಳು ಹಾಗೂ ಬಾಣಂತಿಯರು ಇತ್ತೀಚೆಗೆ ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ 3,350 ಬಾಣಂತಿಯರು ಪ್ರಾಣ ಕಳೆದುಕೊಂಡಿದ್ದನ್ನು ಗಮನಿಸಿದ ರಾಜ್ಯದ ಜನತೆ ಕಂಗಾಲಾಗಿದ್ದಾರೆ.

ಇವುಗಳ ಮಧ್ಯೆ ರಾಜ್ಯ ಸರ್ಕಾರ ನೀರು, ಹಾಲು, ಸಾರಿಗೆ, ವಿದ್ಯುತ್, ಟೋಲ್ ದರಗಳನ್ನು ಹಾಗೂ ಕಸದ ಸುಂಕವನ್ನು ವಿಪರೀತ ಹೆಚ್ಚಿಸಿದೆ. ದಿನನಿತ್ಯ ಬಳಸುವ ಆಹಾರ ಧಾನ್ಯಗಳ ಬೆಲೆಗಳು ಆಕಾಶಕ್ಕೆ ಜಿಗಿಯುತ್ತಿವೆ. ಉಚಿತ ವಿದ್ಯುತ್ ಯೋಜನೆಯ ಬಗ್ಗೆ ಸರ್ಕಾರ ಅಬ್ಬರದ ಪ್ರಚಾರ ಮಾಡುತ್ತಿದೆ. ಆದರೆ, ಸಣ್ಣ ವ್ಯಾಪಾರಿಗಳು, ಮಧ್ಯಮವರ್ಗದವರು ಅನುಭವಿಸುತ್ತಿರುವ ವಿದ್ಯುತ್ ದರ ಏರಿಕೆ ಮತ್ತು ಸ್ಮಾರ್ಟ್ ಮೀಟರ್ ಸಮಸ್ಯೆ ಸುದ್ದಿಯಾಗುತ್ತಿಲ್ಲ! ಅಧಿಕಾರಕ್ಕೆ ಬಂದ ಅಲ್ಪಾವಧಿಯಲ್ಲಿ ಈ ದುಬಾರಿ 'ಕೊಡುಗೆ'ಳನ್ನು ನೀಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ತಾನು ಅತ್ಯಂತ ಕಡು ಜನ ವಿರೋಧಿ ಎಂದು ಸಾಬೀತುಪಡಿಸಿದೆ. ಕೇಂದ್ರ ಸರ್ಕಾರವು ಕೂಡ ಡಿಸೇಲ್, ಪೆಟ್ರೋಲ್ ದರಗಳನ್ನು ಹಾಗೂ ಎಲ್‌ಪಿಜಿ ಸಿಲಿಂಡರ್ ಬೆಲೆ ರೂ.50 ಹೆಚ್ಚಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಇನ್ನೊಂದೆಡೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನಡೆಗಳು ರಾಜ್ಯದ ಪಾಲಿಗೆ ದುಃಸ್ವಪ್ನವಾಗಿವೆ. ನ್ಯಾಯಯುತವಾಗಿ ರಾಜ್ಯದ ಪಾಲಿಗೆ ಸಂದಾಯವಾಗಬೇಕಿದ್ದ ಅನುದಾನಗಳು ಕಡಿತವಾಗಿವೆ. ರಾಜ್ಯದ ಜನರಿಂದ ಸುಮಾರು ರೂ.4,50,000 ಕೋಟಿ ತೆರಿಗೆ ಸಂಗ್ರಹವಾಗುತ್ತಿದ್ದರೂ, ಕೇವಲ ರೂ.50,000 ಕೋಟಿಗಳು ಮಾತ್ರ ರಾಜ್ಯಕ್ಕೆ ಸಂದಾಯವಾಗುತ್ತಿವೆ. ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ ಯಾವ ಹಣವನ್ನೂ ಬಿಡುಗಡೆಗೊಳಿಸಿಲ್ಲ ಎಂದು ರಾಜ್ಯದ ಆರ್ಥಿಕ ಇಲಾಖೆ ದೂರುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ಕೆಲಸ ಮಾಡುತ್ತಿರುವ ಗ್ರಾಮೀಣ ಕೃಷಿ ಕೂಲಿಕಾರರಿಗೆ ಸಂದಾಯವಾಗಬೇಕಿದ್ದ ರೂ. 900 ಕೋಟಿಗಳಷ್ಟು ಹಣವನ್ನು ಬಿಡುಗಡೆಗೊಳಿಸದೆ ಸತಾಯಿಸಲಾಗುತ್ತಿದೆ. ಕೆಲಸ ಮಾಡಿದ ಕೂಲಿ ಕಾರ್ಮಿಕರು ವೇತನಕ್ಕಾಗಿ ಪರದಾಡುತ್ತಿದ್ದಾರೆ. ಬೆಂಗಳೂರಿನ ಮೆಟ್ರೋ ದರಗಳನ್ನು ರಾಜ್ಯ ಸರ್ಕಾರದ ಸಹಮತದೊಂದಿಗೆ ಹಿಗ್ಗಾಮುಗ್ಗಾ ಏರಿಸಿ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಹೊರೆಯಾಗಿಸಲಾಗಿದೆ. ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಜಾರಿಗೊಳಿಸಬೇಕಾಗಿದ್ದ ರೈಲ್ವೆ ಯೋಜನೆಗಳನ್ನು ನನೆಗುದಿಯಲ್ಲಿ ಇಡಲಾಗಿದೆ. ಉದ್ಯೋಗ ಸೃಷ್ಟಿಯಲ್ಲಿ ಕಳಪೆ ಸಾಧನೆ ಮಾಡಿರುವ ಕೇಂದ್ರ ಸರ್ಕಾರ ತನ್ನ ಕಡು ಜನ ವಿರೋಧಿ ಧೋರಣೆಯನ್ನು ತೋರಿಸುತ್ತಿದೆ. ಆದರೆ, ತನ್ನ ಚುನಾವಣಾ ದಾಳವನ್ನಾಗಿ ಧರ್ಮವನ್ನು ರಾಜಕೀಯದಲ್ಲಿ ಬೆರೆಸಿ ಕೋಮು ಸಾಮರಸ್ಯವನ್ನು ಹಾಳು ಮಾಡಿದ ಅಪಕೀರ್ತಿಯಲ್ಲಿ ಮಾತ್ರ ಮುಂಚೂಣಿಯಲ್ಲಿದೆ! ಈ ಮಧ್ಯೆ ಪೈಪೋಟಿಗೆ ಬಿದ್ದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿ, ಪ್ರಧಾನಮಂತ್ರಿಗಳ ವೇತನ, ಭತ್ಯೆಗಳನ್ನು ವಿರೋಧ ಪಕ್ಷಗಳ ಬೆಂಬಲದಿಂದ ದುಪ್ಪಟ್ಟುಗೊಳಿಸಿಕೊಂಡಿವೆ.

### ಹೆಚ್ಚುತ್ತಿರುವ ಬಂಡವಾಳಗಾರರ ಆಸ್ತಿ!

ಭಾರತದ ಶತಕೋಟ್ಯಾಧೀಶರ ಸಂಖ್ಯೆ 334ಕ್ಕೆ ಏರಿಕೆಯಾಗಿದ್ದು, ಗೌತಮ್ ಅದಾನಿಯವರ ಸಂಪತ್ತು 11,61,800 ಕೋಟಿ ರೂಪಾಯಿಗೆ, ಮುಖೇಶ್ ಅಂಬಾನಿಯ ಸಂಪತ್ತು 10,14,000 ಕೋಟಿ ರೂಪಾಯಿಗೆ ಏರಿಕೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಶ್ರೀಮಂತ ಉದ್ಯಮಿಗಳ 16.35 ಲಕ್ಷ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಲಾಗಿದೆ. ಕರ್ನಾಟಕದ ಎಲ್ಲಾ ಶಾಸಕರ ಆಸ್ತಿಯ ಮೌಲ್ಯ 14,179 ಕೋಟಿ ರೂಪಾಯಿಗಳು. ಅಂದರೆ ಜನ ಪ್ರತಿನಿಧಿಗಳ ಆದಾಯ, ಉದ್ಯಮಿಗಳ ಆದಾಯ ಮುಗಿಲು ಮುಟ್ಟಿರುವ ಸಂದರ್ಭದಲ್ಲಿ ದೇಶದ-ರಾಜ್ಯದ ಸಾಲದ ಹೊರೆಯೂ ಅರ್ಥಾತ್ ಜನಸಾಮಾನ್ಯರ ಮೇಲಿನ ತಲಾವಾರು ಸಾಲದ ಹೊರೆಯೂ ಹೆಚ್ಚಾಗುತ್ತಿದೆ! ದೇಶ ಮತ್ತು ರಾಜ್ಯ 'ಅಭಿವೃದ್ಧಿ' ಪಥದಲ್ಲಿ ಮುಂದುವರೆಯುತ್ತಿವೆ ಎಂದು ಆಳ್ವಿಕರ ಪರವಾಗಿರುವ ಬಾಲಬಡುಕ ಮಾಧ್ಯಮಗಳು ಪುಂಖಾನುಪುಂಖವಾಗಿ ಪ್ರಚಾರ ಮಾಡುವುದನ್ನು, ಸರಳವಾಗಿ ಅದು ಕೆಲವೇ ಜನ ಬಂಡವಾಳಗಾರರ, ರಾಜಕಾರಣಿಗಳ ಅಭಿವೃದ್ಧಿ ಮಾತ್ರ ಎಂದು ಅರ್ಥ ಮಾಡಿಕೊಳ್ಳಬೇಕು. ದುಡಿಯುವ ಜನಸಾಮಾನ್ಯರು ಸಾಲದ ಹೊರೆ ಹೊತ್ತು ಜೀವನ ನಿರ್ವಹಿಸಲು ನರಕಯಾತನೆ ಅನುಭವಿಸುತ್ತಿದ್ದಾರೆ.

### ಹೋರಾಟದ ಮುಂಚೂಣಿಯಲ್ಲಿ ಎಸ್‌ಯುಸಿಐ(ಕಮ್ಯುನಿಸ್ಟ್)

ನಮ್ಮ ಪಕ್ಷ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್), ಮಹಾನ್ ಮಾರ್ಕ್ಸ್‌ವಾದಿ ಚಿಂತಕರಲ್ಲಿ ಒಬ್ಬರಾದ ಹಾಗೂ ಎಸ್‌ಯುಸಿಐ(ಸಿ)ನ ಸಂಸ್ಥಾಪಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರ ಚಿಂತನೆಗಳನ್ನು ಆಧರಿಸಿ ದೇಶದಲ್ಲಿ ಸತತವಾಗಿ ಜನಹೋರಾಟಗಳನ್ನು ಬೆಳೆಸುತ್ತಿದೆ. ಸ್ವಾತಂತ್ರ್ಯಾ ನಂತರದಲ್ಲಿ ದೇಶದಲ್ಲಿ ಸ್ಥಾಪಿತಗೊಂಡ ಈ ಬಂಡವಾಳಶಾಹಿ ವ್ಯವಸ್ಥೆಯೇ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ ಎಂದು ಸಾರುತ್ತಾ ಬಂದಿದೆ. ಈ ವ್ಯವಸ್ಥೆ ಕಿತ್ತೊಗೆದು ಸಮಾಜವಾದಿ ಸಮಾಜ ನಿರ್ಮಾಣ ಮಾಡುವುದೇ ಅಂತಿಮ ಗುರಿ ಎಂದು ನಮ್ಮ ಪಕ್ಷ ನಂಬಿದೆ. ಅದರ ಭಾಗವಾಗಿ ಜನತೆಯ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಮರಶೀಲ ಹೋರಾಟ ಬೆಳೆಸುವುದು ಈ ಘಳಿಗೆಯ ಅವಶ್ಯಕತೆಯಾಗಿದೆ. ರಾಜ್ಯದಲ್ಲಿಯೂ ರೈತ-ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ ಯುವಜನರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುವ ನಮ್ಮ ಪಕ್ಷವು ಹಲವು ಯಶಸ್ವಿ ಹೋರಾಟಗಳನ್ನು ಮುನ್ನಡೆಸಿದೆ. ಕೇಂದ್ರ-ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ವಿರೋಧಿಸಿ ರಾಜ್ಯಮಟ್ಟದ ಬೃಹತ್ ಹೋರಾಟವನ್ನು ಬೆಂಗಳೂರಿನಲ್ಲಿ ಮೇ 14, 2025 ರಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದು, ಈ ಕೆಳಕಂಡ ಹಕ್ಕೊತ್ತಾಯಗಳನ್ನು ಸರ್ಕಾರಗಳ ಮುಂದಿಟ್ಟಿದೆ.

### ಹಕ್ಕೊತ್ತಾಯಗಳು

1. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜೀವನಾವಶ್ಯಕ ವಸ್ತುಗಳ ಮೇಲೆ ಹೆಚ್ಚಿಸಿರುವ ಎಲ್ಲಾ ಬೆಲೆಗಳನ್ನು ಈ ಕೂಡಲೇ ಹಿಂತೆಗೆದುಕೊಳ್ಳಿ.
2. ಎಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ. ಜೊತೆಗೆ ಅವಶ್ಯಕ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿ.
3. ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಗ್ರಾಮೀಣ ಕೃಷಿ ಕಾರ್ಮಿಕರಿಗೆ ಕೆಲಸದ ದಿನಗಳನ್ನು 200 ಕ್ಕೆ ಹೆಚ್ಚಿಸಿ. ಅವರ ಕೂಲಿಯನ್ನು ರೂ. 600ಕ್ಕೆ ನಿಗದಿಗೊಳಿಸಿ.
4. ಬೆಲೆಕುಸಿತದಿಂದ ಕಂಗಾಲಾಗಿರುವ ರೈತ ಸಮುದಾಯಕ್ಕೆ ಸರಕಾರದಿಂದ ನೆರವು ನೀಡಿ ಮತ್ತು ರೈತರ ಬೆಳೆದ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸಿ.
5. ವಿದ್ಯುತ್ ಮಸೂದೆ-2022 (ತಿದ್ದುಪಡಿ)ನ್ನು ಹಿಂತೆಗೆದುಕೊಳ್ಳಿ. ಸ್ಮಾರ್ಟ್ ಮೀಟರ್ ಅಳವಡಿಕೆ ನಿಲ್ಲಿಸಿ.
6. 6000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ಕೂಡಲೇ ಕೈಬಿಡಿ ಹಾಗೂ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು, ಶಿಕ್ಷಕ ಸಿಬ್ಬಂದಿಯನ್ನು ಒದಗಿಸಿ.
7. ನಿರುದ್ಯೋಗದಿಂದ ತತ್ತರಿಸಿರುವ ಯುವಜನರಿಗೆ ಉದ್ಯೋಗ ನೀಡಲು ತಕ್ಷಣವೇ ಸರಕಾರಿ ಇಲಾಖೆಗಳ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ಕೆಪಿಎಸ್‌ಸಿ ಸೇರಿದಂತೆ ನೇಮಕಾತಿಯಲ್ಲಿ ನಡೆಯುವ ಎಲ್ಲಾ ಹಂತದ ಭ್ರಷ್ಟಾಚಾರವನ್ನು ಮಟ್ಟ ಹಾಕಿ.
8. ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಘೋಷಿಸಿ. ಅಲ್ಲಿಯವರೆಗೆ ಕನಿಷ್ಠ ವೇತನ ಪಾವತಿಸಿ. ಎಲ್ಲಾ ಇಲಾಖೆಗಳಲ್ಲಿರುವ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಿ.
9. ಈ ಕೂಡಲೇ ಹೆಚ್ಚಿಸಿರುವ ದುಬಾರಿ ಬೆಂಗಳೂರು ಮೆಟ್ರೋ ದರಗಳನ್ನು ಹಿಂತೆಗೆದುಕೊಳ್ಳಿ.
10. ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಶೀಘ್ರವೇ ಪಟ್ಟಾ ಒದಗಿಸಿ.
11. ಮಕ್ಕಳ ಮಾನಸಿಕ ಆರೋಗ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆಯನ್ನು ಕಾಪಾಡಲು ಎಲ್ಲಾ ಆನ್‌ಲೈನ್ ಅಶ್ಲೀಲ ಕಾರ್ಯಕ್ರಮಗಳನ್ನು ಈ ಕೂಡಲೇ ನಿಲ್ಲಿಸಿ.

# ಚುನಾವಣೋತ್ತರ ಶ್ರೀಲಂಕಾ




## ಸಮಸ್ಯೆಗಳಿಂದ ಪರಿಹಾರ ನೀಡಲು ಸರ್ಕಾರಕ್ಕೆ ಇಚ್ಛೆ ಇರಬೇಕು ಅಷ್ಟೇ!

ದ್ವೀಪ ರಾಷ್ಟ್ರ ಶ್ರೀಲಂಕಾ ಹಲವು ದಶಕಗಳಿಂದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿದೆ. ದೀರ್ಘಕಾಲ ಅಲ್ಲಿನ ಎರಡು ಪ್ರಮುಖ ಸಮುದಾಯಗಳಾದ ಸಿಂಹಳೀಯರು ಮತ್ತು ತಮಿಳರ ನಡುವೆ ನಿರಂತರ ಕಲಹಗಳಿದ್ದವು. ಸಿಲೋನ್ ಎಂದು ಕರೆಯಲ್ಪಡುತ್ತಿದ್ದ ಆ ದೇಶವು 1948ರ ಫೆ.4ರಂದು ಸ್ವಾತಂತ್ರ್ಯ ಪಡೆದು ಡೊಮಿನಿಯನ್ ಆಫ್ ಸಿಲೋನ್ ಎಂದು ಬ್ರಿಟಿಷರ ಅಧೀನದಲ್ಲಿರುವ ಪ್ರದೇಶವಾಗಿದ್ದದ್ದು, ನಂತರ 1972ರ ಮೇ 22ರಂದು ಗಣರಾಜ್ಯವಾಯಿತು. ಅಂದರೆ, ಒಂದು ಸ್ವತಂತ್ರ ಬಂಡವಾಳಶಾಹಿ ರಾಷ್ಟ್ರವಾಗಿ ರೂಪುಗೊಂಡಿತು.

### ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ನಂತರ...

ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಿಂಹಳೀಯರು ಮತ್ತು ತಮಿಳರು ಒಂದಾಗಿ ಹೋರಾಡಿದರು. ಆದರೆ ಸ್ವಾತಂತ್ರ್ಯಾ ನಂತರ ಅಧಿಕಾರಕ್ಕೇರಿದ ಬಂಡವಾಳಶಾಹಿ ಸರ್ಕಾರಗಳು ಎರಡೂ ಸಮುದಾಯಗಳನ್ನು ಒಡೆದು ಆಳುವ ನೀತಿಯನ್ನು ಅನುಸರಿಸಿದವು. ಸಿಂಹಳಕ್ಕೆ ಏಕಮಾತ್ರ ಅಧಿಕೃತ ಭಾಷೆಯ ಸ್ಥಾನವನ್ನು ನೀಡಿ, ತಮಿಳು ಭಾಷೆಯನ್ನು ಕಡೆಗಣಿಸಿದವು. ಎರಡೂ ಸಮುದಾಯಗಳ ನಡುವೆ ಜನಾಂಗೀಯ ಕಲಹಗಳು ನಡೆದು ನಂತರ ತಮಿಳು ನಿರಾಶ್ರಿತರನ್ನು ದೇಶದ ಉತ್ತರಭಾಗಕ್ಕೆ ಬಲವಂತವಾಗಿ ಸ್ಥಳಾಂತರಿಸಲಾಯಿತು. ಬಹುಸಂಖ್ಯಾತ ಸಿಂಹಳೀಯರು ಅನುಸರಿಸುತ್ತಿದ್ದ ಬೌದ್ಧ ಧರ್ಮಕ್ಕೆ ವಿಶೇಷ ಸ್ಥಾನಮಾನ ದೊರೆಯಿತು. ತಮಿಳು ಅಲ್ಪಸಂಖ್ಯಾತರು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಂದ ವಂಚಿಸಲ್ಪಟ್ಟರು. ತಮಿಳರಲ್ಲಿ ಮಡುಗಟ್ಟಿದ್ದ ಅಸಮಾಧಾನ, ಅತೃಪ್ತಿಗಳು ಅಂತಿಮವಾಗಿ, ಉಗ್ರಗಾಮಿ ಪ್ರತ್ಯೇಕತಾವಾದಿ ಚಳವಳಿ ಬೆಳೆಯಲು ಸಹಕಾರಿಯಾಯಿತು. ಮುಂದೆ, ಶ್ರೀಲಂಕಾದ ಸೇನೆಯು ಅದನ್ನು ಮಟ್ಟ ಹಾಕಿತು. ಆದರೂ, ಜನರ ಕಷ್ಟಗಳು ಹೆಚ್ಚಾಗುತ್ತಲೇ ಸಾಗಿದವು. ಶೇ.50ನ್ನು ಮೀರಿದ ಹಣದುಬ್ಬರ ಪ್ರಮಾಣವು ಶೇ.70ರಷ್ಟು ಕುಟುಂಬಗಳ ಅನ್ನಕ್ಕೂ ಕಲ್ಲು ಹಾಕಿತು. ಆ ಜನರ ಆಹಾರ ಸೇವನೆಯ ಪ್ರಮಾಣವೇ ಗಣನೀಯವಾಗಿ ಕುಗ್ಗಿತು. ಆಹಾರ, ಅಡುಗೆ ಅನಿಲ ಮತ್ತು ಔಷಧಿ ಸೇರಿದಂತೆ ದೇಶವನ್ನಾವರಿಸಿದ ತೀವ್ರ ಅಭಾವವು ಜನತೆಯ ಆಕ್ರೋಶವನ್ನು ವ್ಯಾಪಕವಾಗಿ ಹೆಚ್ಚಿಸಿತು. ಶೇ.25ರಷ್ಟು ಬಡತನ ಹೆಚ್ಚಾಯಿತು. ನಿರುದ್ಯೋಗ ದರದಲ್ಲಿ ಶೇ.20ರಷ್ಟು ಏರಿಕೆಯಾಯಿತು. ಅದಕ್ಷ ಆಡಳಿತ ಮತ್ತು ಸಂಪನ್ಮೂಲ ಲೂಟಿ ದಿನವಹಿ ನಡೆದವು. ಒಟ್ಟಾರೆಯಾಗಿ ಸಮಾಜದ ಎಲ್ಲ ವಿಭಾಗದ ಜನರು ಹೈರಾಣಾಗಿದ್ದರು.

ಶ್ರೀಲಂಕಾದ ಆರ್ಥಿಕತೆಯು ಮುಗ್ಗರಿಸಿತ್ತು. ಶ್ರೀಲಂಕಾದ ಸರ್ಕಾರಗಳು ಐಎಂಎಫ್ ಮತ್ತು ಇತರೆ ದೇಶಗಳಿಂದ ಹೇರಳ ಪ್ರಮಾಣದ ಸಾಲವನ್ನು ತೆಗೆದುಕೊಂಡವು. 2022ರ ಏಪ್ರಿಲ್ ಮಧ್ಯಭಾಗದ ನಂತರ ಶ್ರೀಲಂಕಾದ ಆರ್ಥಿಕತೆಯು ಪ್ರಪ್ರಥಮ ಬಾರಿಗೆ ಆಘಾತಕರವಾದ ಸ್ಥಗಿತವನ್ನು ಕಂಡಿತು. ಪೆಟ್ರೋಲ್, ಅಡುಗೆ ಅನಿಲ ಮತ್ತು ಇತರ ಅವಶ್ಯಕತೆಗಳ ಅಭಾವ ಉಂಟಾಯಿತು. ದಿನಗಳಗಟ್ಟಲೆ ವಾಹನಗಳು ಇಂಧನಕ್ಕಾಗಿ ಉದ್ದುದ್ದ ಸಾಲುಗಳಲ್ಲಿ ಕಾಯುತ್ತಾ ನಿಲ್ಲುವುದು ಸಹಜ ಚಿತ್ರಣವಾಯಿತು.

### ಸಿಡಿದೆದ್ದ ಜನರು – ಸರ್ಕಾರದ ಬದಲಾವಣೆಗೆ ಆಗ್ರಹ

ಜನರು ಮತ್ತೆಮತ್ತೆ ಪ್ರತಿಭಟನೆ ನಡೆಸಿದರು. 2022ರಲ್ಲಿ ದೇಶದಲ್ಲಿ ಯಾವ ಪ್ರಮಾಣದ ಸ್ವಜನ ಪಕ್ಷಪಾತ ಮತ್ತು ವ್ಯಾಪಕ ಭ್ರಷ್ಟಾಚಾರವಿತ್ತೆಂದರೆ, ದೇಶದ ರಾಷ್ಟ್ರಾಧ್ಯಕ್ಷ, ಪ್ರಧಾನಿ, ನೀರಾವರಿ ಮಂತ್ರಿ, ಯುವಜನ ಮತ್ತು ಕ್ರೀಡಾ ಮಂತ್ರಿ ಹೀಗೆ ಎಲ್ಲ ಸ್ಥಾನಗಳನ್ನು ರಾಜಪಕ್ಷೆ ಕುಟುಂಬಸ್ಥರೇ ಹಿಡಿದುಕೊಂಡು ಸಂಪತ್ತಿನ ಕಬಳಿಕೆಗೆ ನಿಂತಿದ್ದರು. ಆಗ, ಇಡೀ ರಾಜಪಕ್ಷೆ ಕುಟುಂಬದ ಸದಸ್ಯರು ರಾಜೀನಾಮೆ ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಅಂತಿಮವಾಗಿ ರಾಜಪಕ್ಷೆ ಸರ್ಕಾರವು ಪತನವಾಯಿತು. 2022ರ ಜುಲೈ 9ರಂದು ಜನರು ರಾಷ್ಟ್ರಪತಿ ನಿವಾಸಕ್ಕೆ ಲಗ್ಗೆ ಇಟ್ಟರು, ರಾಷ್ಟ್ರಾಧ್ಯಕ್ಷ ಗೊಟಬಯಾ ರಾಜಪಕ್ಷೆ ದೇಶದಿಂದ ಪಲಾಯನಗೈಯ್ಯಬೇಕಾಯಿತು. ಯಾವುದೇ ಜನಾಂಗ, ಧರ್ಮ, ಲಿಂಗ ಮತ್ತು ಭಾಷೆಗಳ ಭೇದವಿಲ್ಲದೆ ರಾಜಪಕ್ಷೆ ಸರ್ಕಾರದ ವಿರುದ್ಧ ಜನರು ದನಿ ಎತ್ತಿದರು. ಸೇನೆ ಮಧ್ಯಪ್ರವೇಶ ಮಾಡುವ ಧೈರ್ಯವನ್ನು ತೋರಲಿಲ್ಲ. ಜನತೆಯ ಬಂಡಾಯವು ಪ್ರತ್ಯೇಕತಾವಾದಿ ಚಳವಳಿಗಿಂತ ಹಲವು ಪಟ್ಟು ಶಕ್ತಿಶಾಲಿ ಎಂಬುದನ್ನು ಈ ಘಟನಾವಳಿಗಳು ತೋರಿಸುತ್ತವೆ. ಆ ಐತಿಹಾಸಿಕ ಜನಬಂಡಾಯವು ನಡೆದ 2 ವರ್ಷಗಳ ನಂತರ ಜನ ಹೊಸ ರಾಷ್ಟ್ರಪತಿಗಾಗಿ ಮತವನ್ನು ಚಲಾಯಿಸಿದರು. 2024ರ ಸೆಪ್ಟೆಂಬರ್‌ನಲ್ಲಿ ಅನುರ ಕುಮಾರ ದಿಸನಾಯಕೆ ದೇಶದ 10ನೇ ರಾಷ್ಟ್ರಪತಿಯಾಗಿ ಅಧಿಕಾರಕ್ಕೆ ಏರಿದರು. ದಿಸನಾಯಕೆ ಎಡವಾದಿ ರಾಜಕೀಯ ಮೈತ್ರಿಕೂಟವಾದ ಎನ್‌ಪಿಪಿ(ನ್ಯಾಷನಲ್ ಪೀಪಲ್ಸ್ ಪವರ್)ಯ ನಾಯಕ.

ಆ ದೇಶದಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಪರ್ಯಾಯವೊಂದನ್ನು ಒದಗಿಸಲು ಎಡವಾದಿ ಶಕ್ತಿಗಳು ಮತ್ತು ಪ್ರಗತಿಪರ ಪಕ್ಷಗಳ ಐಕ್ಯತೆಯೊಂದಿಗೆ ಎನ್‌ಪಿಪಿಯನ್ನು ಸ್ಥಾಪಿಸಲಾಗಿತ್ತು. ಎನ್‌ಪಿಪಿಯು ವಿವಿಧ ರಾಜಕೀಯ ಪಕ್ಷಗಳು, ಯುವಜನ ಸಂಘಟನೆಗಳು, ಮಹಿಳಾ ಗುಂಪುಗಳು, ಕಾರ್ಮಿಕ ಸಂಘಟನೆಗಳು ಮತ್ತು ನಾಗರಿಕ ಸಂಘಗಳು ಸೇರಿದಂತೆ 21 ವಿಭಿನ್ನ ಸಮೂಹಗಳನ್ನು ಒಳಗೊಂಡಿರುವ ಒಂದು ರಾಜಕೀಯ ಚಳುವಳಿಯಾಗಿದೆ. ಎನ್‌ಪಿಪಿಯು ಎಡವಾದಿ ಧೋರಣೆಯನ್ನು ಹೊಂದಿದ್ದ ಜನತಾ ವಿಮುಕ್ತಿ ಪೆರಮುನ (ಜೆವಿಪಿ)ಯಿಂದ ರಚನೆಯಾಗಿದೆ. ಜೆವಿಪಿ ಸಂಸ್ಥಾಪಕ ರೋಹನ ವಿಜಯವೀರಾ 1989ರಲ್ಲಿ ಸರ್ಕಾರದಿಂದ ಹತ್ಯೆಯಾಗಿದ್ದರು. 1971 ಮತ್ತು 1987ರಲ್ಲಿ ಅದು ಎರಡು ಬಾರಿ ವಿಫಲ ಬಂಡಾಯ ಪ್ರಯತ್ನಗಳನ್ನು ಮಾಡಿತ್ತು. ಅನಂತರ, ಒಂದು ರಾಜಕೀಯ ಪಕ್ಷವಾಗಿ ಕಾರ್ಯವನ್ನು ಆರಂಭಿಸಿದ ಜೆವಿಪಿ ನಂತರ ಎನ್‌ಪಿಪಿಗೆ ಜನ್ಮನೀಡಿತು. 2019ರಲ್ಲಿ ಈ ಒಕ್ಕೂಟವು ಸಂಸತ್ತಿನಲ್ಲಿ ಕೇವಲ 3 ಸ್ಥಾನಗಳನ್ನು ಗಳಿಸಿತ್ತು.

ರಾಷ್ಟ್ರಪತಿಯಾದ ನಂತರ ದಿಸನಾಯಕೆ ಅವರು ಪಾರ್ಲಿಮೆಂಟ್ ಅನ್ನು ವಿಸರ್ಜಿಸಿ ಹೊಸ ಸರ್ಕಾರವನ್ನು ರಚಿಸಲು ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿದರು. 2024ರ ನವಂಬರ್ 14ರಂದು ನಡೆದ ಚುನಾವಣೆಯಲ್ಲಿ ಶ್ರೀಲಂಕನ್ನರು ಎಡವಾದಿ ಎನ್‌ಪಿಪಿಗೆ ಬೆಂಬಲವನ್ನು ಸೂಚಿಸಿ, ಆ ಒಕ್ಕೂಟಕ್ಕೆ 225 ಸ್ಥಾನಗಳ ಪೈಕಿ 159 ಸ್ಥಾನಗಳನ್ನು ನೀಡಿದರು. ತೀವ್ರವಾದ ಬಿಕ್ಕಟ್ಟು ಮತ್ತು ವಿಪರೀತ ಸಾಲದ ಸುಳಿಯಲ್ಲಿ ಸಿಲುಕಿರುವ ಶ್ರೀಲಂಕಾದಲ್ಲಿ ಸುಸ್ಥಿರವಾದ ಮತ್ತು ನ್ಯಾಯಬದ್ಧವಾಗಿರುವ ವ್ಯವಸ್ಥೆಯನ್ನು ಎನ್‌ಪಿಪಿ ತರುವುದೆಂಬ ಭರವಸೆಯನ್ನು ಜನರು ಈಗ ಹೊಂದಿದ್ದಾರೆ.

### ಅಲ್ಪಸ್ವಲ್ಪ ಪರಿಹಾರ ಸಾಧ್ಯ

ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಚುನಾವಣೆಯಿಂದ ಮೂಲಭೂತ ಬದಲಾವಣೆಯನ್ನು ತರುವುದು ಸಾಧ್ಯವಿಲ್ಲ. ಒಂದು ಸರ್ಕಾರವನ್ನು ಬದಲಾಯಿಸಬಹುದಷ್ಟೇ! ನೀತಿಗಳು ಬದಲಾಗುವುದಿಲ್ಲ. ಆದರೂ ಸಹ, ಬಂಡವಾಳಶಾಹಿ ವ್ಯವಸ್ಥೆಯ ಒಳಗಡೆಯೇ ಒಂದು ಎಡವಾದಿ ಶಕ್ತಿಯು ಸರ್ಕಾರವನ್ನು ರಚಿಸುವ ಅವಕಾಶವನ್ನು ಪಡೆದರೆ ಕೆಲವು ಜನಪರ ನೀತಿಗಳನ್ನು ಜಾರಿಗೊಳಿಸಿ ಜನತೆಗೆ ಅಲ್ಪಸ್ವಲ್ಪ ಪರಿಹಾರವನ್ನು ನೀಡಬಹುದು. ಅಗತ್ಯ ವಸ್ತುಗಳ ಬೆಲೆ ಇಳಿಸಬಹುದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬಹುದು, ಸಾರ್ವತ್ರಿಕ ಶಿಕ್ಷಣವನ್ನು ಜಾರಿಗೊಳಿಸಬಹುದು, ಜನರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಭದ್ರತೆ ಒದಗಿಸಬಹುದು, ಕೃಷಿವಸ್ತುಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬಹುದು, ಔಷಧಿಗಳ, ಅದರಲ್ಲೂ ಜೀವರಕ್ಷಕ ಔಷಧಿಗಳ ಬೆಲೆಗಳನ್ನು ಕಡಿತಗೊಳಿಸಬಹುದು, ಆಡಳಿತ ಮಟ್ಟದಲ್ಲಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಕ್ಕೆ ಅಂಕುಶ ಹಾಕಬಹುದು ಇತ್ಯಾದಿ.

ಎನ್‌ಪಿಪಿ ಸರ್ಕಾರವು ಆಡಳಿತವನ್ನು ಸದೃಢಗೊಳಿಸುವ, ಐಕ್ಯತೆಯನ್ನು ಪಸರಿಸುವ ಮತ್ತು ಆರ್ಥಿಕ ಬೆಳವಣಿಗೆಯನ್ನು ವೃದ್ಧಿಸುವ ಉದ್ದೇಶದೊಂದಿಗೆ ಕೆಲವು ಪ್ರಮುಖ ಯೋಜನೆಗಳನ್ನು ಹಾಕಿಕೊಂಡಿದೆ. ರಾಷ್ಟ್ರೀಯ ಸಾಮರಸ್ಯವನ್ನು ಕಾಪಾಡುವುದು, ಉಗ್ರವಾದವನ್ನು ತಿರಸ್ಕರಿಸುವುದು ಮತ್ತು ಜನತೆ ಹಾಗೂ ಸಂಸತ್ತಿನ ನಡುವೆ ನಿಕಟ ಸಂಪರ್ಕ ಏರ್ಪಡಿಸುವುದು – ಇವುಗಳಿಗೆ ಸರ್ಕಾರವು ಪ್ರಾಮುಖ್ಯತೆಯನ್ನು ನೀಡಿದೆ. ಸರ್ಕಾರದ ದಕ್ಷತೆಯನ್ನು ಹೆಚ್ಚಿಸುವ ಬದ್ಧತೆ, ನ್ಯಾಯ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಪುನ:ಸ್ಥಾಪಿಸುವುದು ಮತ್ತು ಭ್ರಷ್ಟಾಚಾರವನ್ನು ಕೊನೆಗಾಣಿಸುವುದು ಅದರ ಮುಖ್ಯ ಅಜೆಂಡಾ ಆಗಿದೆ. ಆರ್ಥಿಕ ಬೆಳವಣಿಗೆಗಾಗಿ ಕೊಲಂಬೊ ಆಚೆಗೆ ಉತ್ಪಾದನಾ ವಲಯವನ್ನು ವಿಸ್ತರಿಸುವುದು, ನಿಷ್ಪಕ್ಷಪಾತವಾಗಿ ಸಂಪತ್ತಿನ ಹಂಚಿಕೆ ಮಾಡುವುದು, ಪ್ರವಾಸೋದ್ಯಮ, ಐಟಿ ಮತ್ತು ಕೃಷಿ, ಇತ್ಯಾದಿ ಕ್ಷೇತ್ರಗಳಲ್ಲಿ ಸರ್ಕಾರದ ಸಹಭಾಗಿತ್ವದ ಪ್ರಮಾಣವನ್ನು ಹೆಚ್ಚಿಸುವುದೂ ಸೇರಿದಂತೆ ಅನೇಕ ಹೊಸ ಯೋಜನೆಗಳನ್ನು ಎನ್‌ಪಿಪಿ ರೂಪಿಸಿದೆ. ಶಿಕ್ಷಣಕ್ಕೆ ಬೆಂಬಲ, ಸಣ್ಣ ಹೂಡಿಕೆಗಳ ಸಬಲೀಕರಣ ಮತ್ತು ಡಿಜಿಟಲ್ ಅನ್ವೇಷಣೆಗೆ ಉತ್ತೇಜನ ನೀಡುವುದರ ಮೂಲಕ ಅವರು ಬಡತನವನ್ನು ಅಲ್ಪಮಟ್ಟಿಗೆ ನಿವಾರಿಸಲು ಒತ್ತು ನೀಡುತ್ತಿದ್ದಾರೆ.

ಈ ಪ್ರಯತ್ನಗಳನ್ನು ಸಾಕಾರಗೊಳಿಸಲು ಸದ್ಯಕ್ಕೆ ಎನ್‌ಪಿಪಿ 2025ರ ನಾಲ್ಕು ತಿಂಗಳ ಅವಧಿಗೆ ಮಧ್ಯಂತರ ಆಯವ್ಯಯವನ್ನು ಮಂಡಿಸಿದೆ. ಸಾರ್ವಜನಿಕ ಉದ್ದಿಮೆಗಳಿಂದ ಹೂಡಿಕೆ ಹಿಂತೆಗೆತವನ್ನು ಎನ್‌ಪಿಪಿ ವಿರೋಧಿಸಿದೆ ಮಾತ್ರವಲ್ಲ, ಅವುಗಳ ಆರ್ಥಿಕ ಸವಾಲುಗಳನ್ನು ಪರಿಹರಿಸಲು ಸುಧಾರಣೆಗಳನ್ನು ಜಾರಿಗೆ ತರಲು ಯೋಜಿಸಿದೆ. ಸಬ್ಸಿಡಿಗಳನ್ನು ಕಡಿತಗೊಳಿಸಿ ಶಿಕ್ಷಣವನ್ನು ಖಾಸಗೀಕರಣಗೊಳಿಸುವ ಹಿಂದಿನ ಸರ್ಕಾರದ ನಿರ್ಧಾರಗಳನ್ನು ಬದಲಿಸಲು ಎನ್‌ಪಿಪಿ ಸರ್ಕಾರವು ನಿರ್ಧರಿಸಿದೆ. ಪ್ರಜಾಶಕ್ತಿ ಯೋಜನೆಯಡಿ ಕಡಿಮೆ ಆದಾಯ ಹೊಂದಿರುವ ಗುಂಪುಗಳ ಕಲ್ಯಾಣ ಮತ್ತು ಬಡತನ ನಿವಾರಣೆಗೆ ಎನ್‌ಪಿಪಿ ಸರ್ಕಾರವು ಯೋಜನೆ ರೂಪಿಸಿದೆ. ಆರೋಗ್ಯ ಕ್ಷೇತ್ರಕ್ಕೆ ಅನುದಾನವನ್ನು ಜಿಡಿಪಿಯ ಶೇ.3ಕ್ಕೆ ಹೆಚ್ಚಿಸುವುದು, ಪಾರದರ್ಶಕತೆಯನ್ನು ಹೆಚ್ಚಿಸುವುದು ಸೇರಿದಂತೆ ಅನೇಕ ಸಂಕಲ್ಪಗಳನ್ನು ಎನ್‌ಪಿಪಿ ಸರ್ಕಾರವು ಕೈಗೊಂಡಿದೆ.

### ಬೂರ್ಜ್ವಾ ವ್ಯವಸ್ಥೆಯ ಒಳಗೆ ಒಂದು ಎಡವಾದಿ ಸರ್ಕಾರವು ರಚನೆಯಾದರೆ...

ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ಒಂದು ನೈಜ ಎಡವಾದಿ ಸರ್ಕಾರದ ದೃಷ್ಟಿಕೋನ ಏನಾಗಿರಬೇಕು ಎಂಬುದರ ಬಗ್ಗೆ ಲೆನಿನ್, ಸ್ಟಾಲಿನ್ ಮತ್ತು ಮಾವೋ ಜೆಡಾಂಗ್ ಏನನ್ನೂ ಹೇಳಿಲ್ಲ. ಏಕೆಂದರೆ, ಅಂತಹ ಪರಿಸ್ಥಿತಿಯನ್ನು ಅವರು ಎದುರಿಸಲಿಲ್ಲ. ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯುನಿಸ್ಟ್) ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು, ಈ ಯುಗದ ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ಮಾರ್ಕ್ಸ್– ಎಂಗೆಲ್ಸ್ –ಲೆನಿನ್– ಸ್ಟಾಲಿನ್–ಮಾವೋ ಜೆಡಾಂಗ್‌ರವರಲ್ಲರ ಯೋಗ್ಯ ಅನುಯಾಯಿಯಾದ ಕಾಮ್ರೇಡ್ ಶಿವದಾಸ್ ಘೋಷ್, ಮೊಟ್ಟಮೊದಲ ಬಾರಿಗೆ ಈ ಕುರಿತು ವಿಶ್ಲೇಷಣೆಯನ್ನು ಮಾಡಿದರು.

1967ರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗವು ಅಧಿಕಾರಕ್ಕೇರಿದಾಗ ನಮ್ಮ ಪಕ್ಷ ಎಸ್‌ಯುಸಿಐ(ಸಿ) ಕೂಡ ಆ ಸರ್ಕಾರದ ಭಾಗವಾಗಿತ್ತು. ಅದು ಮಾನವನ ಇತಿಹಾಸವು ಹಿಂದೆಂದೂ ಕಂಡರಿಯದ ಸಂದರ್ಭ. ಏಕೆಂದರೆ, ಅಲ್ಲಿಯವರೆಗೂ ಯಾವುದೇ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವು ಒಂದು ಬಂಡವಾಳಶಾಹಿ ವ್ಯವಸ್ಥೆಯೊಳಗಡೆ ಸರ್ಕಾರದ ಭಾಗವಾಗಿ ಇರಲಿಲ್ಲ. ಆಗ, ವಿಶ್ವದ ಕಾರ್ಮಿಕವರ್ಗಕ್ಕೆ ಕಾಮ್ರೇಡ್ ಶಿವದಾಸ್ ಘೋಷರು ಈ ಕುರಿತು ಅದ್ಭುತವಾದ ತಿಳುವಳಿಕೆಯನ್ನು ನೀಡಿದರು: "...ಈ ಸರ್ಕಾರವು, ತಾನು ಬಯಸಿದ್ದರೂ, ಕಾನೂನು ಸುಧಾರಣೆಗಳ ಮೂಲಕ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೇ? ಅದು ಸಾಧ್ಯವಿಲ್ಲ, ............ ಆದರೆ, ಕಾರ್ಮಿಕರ ಹಿತಾಸಕ್ತಿಗಾಗಿ, ಈ ಸರ್ಕಾರವನ್ನು ರಚಿಸುವುದರಲ್ಲಿ ಯಾವುದೇ ಅರ್ಥವಿಲ್ಲವೇ? ನನ್ನ ಅಭಿಪ್ರಾಯದಲ್ಲಿ ಖಂಡಿತವಾಗಿಯೂ ಇದೆ. ಬಂಡವಾಳಶಾಹಿ ಸಂವಿಧಾನ ಮತ್ತು ಕಾನೂನುಗಳ ರಕ್ಷಣೆಯಲ್ಲಿರುವ ಬಂಡವಾಳಶಾಹಿಗಳ ಶೋಷಣೆ ಮತ್ತು ದಬ್ಬಾಳಿಕೆ ವಿರುದ್ಧದ ಕಾರ್ಮಿಕ ವರ್ಗದ ಹೋರಾಟಕ್ಕೆ ಶಕ್ತಿ ತುಂಬುವ ನಿಟ್ಟಿನಲ್ಲಿ ಪ್ರಜಾತಾಂತ್ರಿಕ ಜನಹೋರಾಟಗಳನ್ನು ಪ್ರೋತ್ಸಾಹಿಸುವ ನೀತಿಯನ್ನು ಒಂದು ವೇಳೆ ಸರ್ಕಾರವು ದೃಢ ನಿಶ್ಚಯದೊಂದಿಗೆ ಜಾರಿಗೊಳಿಸಿದರೆ, ಶೋಷಣೆಯಿಂದ ವಿಮುಕ್ತಿ ನೀಡಲು ಅದರಿಂದ ಸಾಧ್ಯವಾಗದಿದ್ದರೂ ಸಹ, ವಿಮುಕ್ತಿಗಾಗಿ ನಡೆಯುವ ಹೋರಾಟದಲ್ಲಿ ಅಂತಹ ಸರ್ಕಾರವು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ."

ಒಂದು ವೇಳೆ ಜೆವಿಪಿ ಅಥವಾ ಎನ್‌ಪಿಪಿ ಭಾಗವಾಗಿರುವ ಯಾವುದೇ ಪಕ್ಷವು ನೈಜ ಎಡವಾದಿ ದೃಷ್ಟಿಕೋನದಿಂದ ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡಲು ಬಯಸಿದರೆ, ಈ ತಿಳುವಳಿಕೆಯ ತಿರುಳನ್ನು ಅರಿತು ಅಳವಡಿಸಿಕೊಳ್ಳಬೇಕು. ಜನಕಲ್ಯಾಣಕ್ಕಾಗಿ ಅನೇಕ ಸೂಕ್ತ ಯೋಜನೆಗಳನ್ನು ಜಾರಿಗೊಳಿಸುವುದರೊಂದಿಗೆ, ಆ ಸರ್ಕಾರವು, ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು ಹಾಗೂ ಮಹಿಳೆಯರು ಸೇರಿದಂತೆ ಶೋಷಿತ ಸಮುದಾಯದ ಎಲ್ಲರ ನ್ಯಾಯ ಸಮ್ಮತವಾದ ಪ್ರಜಾತಾಂತ್ರಿಕ ಹೋರಾಟಗಳನ್ನು ಬೆಳೆಸಲು ಉತ್ತೇಜನ ನೀಡಬೇಕು ಮತ್ತು ಅದಕ್ಕೆ, ಪೊಲೀಸ್ ಹಾಗೂ ಆಡಳಿತದಿಂದ ಯಾವುದೇ ರೀತಿ ಅಡಚಣೆ ಉಂಟಾಗದಂತೆ ಈ ಹೋರಾಟಗಳನ್ನು ರಕ್ಷಿಸಬೇಕು. ಆ ರೀತಿಯಾದಾಗ ಯಾವುದೇ ಅಡೆತಡೆಯಿಲ್ಲದೆ ವರ್ಗ ಮತ್ತು ಸಮೂಹ ಚಳುವಳಿ ಬೆಳೆಯುತ್ತವೆ. ಆಗ, ಪಶ್ಚಿಮ ಬಂಗಾಳದ ಎಡರಂಗದ ಸರ್ಕಾರದೊಂದಿಗೆ 1967ರಲ್ಲಿ ನಡೆದಂತೆಯೇ, ಬಂಡವಾಳಶಾಹಿಗಳು ಸರ್ಕಾರವನ್ನು ಉರುಳಿಸಲು ಯತ್ನಿಸಬಹುದು. ಅಂತಹ ಸಂದರ್ಭದಲ್ಲಿ, ಸರ್ಕಾರದ ಬದಲಾವಣೆಯಿಂದ ಮಾತ್ರವೇ ಶೋಷಕ ವ್ಯವಸ್ಥೆಯನ್ನು ಬದಲಿಸಲು ಸಾಧ್ಯವಿಲ್ಲ ಎಂಬುದು ಜನರಿಗೆ ಅರಿವಾಗುತ್ತದೆ. ಆದ್ದರಿಂದ, ಬಂಡವಾಳಶಾಹಿ ವ್ಯವಸ್ಥೆಯು ಅಸ್ತಿತ್ವದಲ್ಲಿರುವವರೆಗೂ, ಜನರ ಯಾವುದೇ ಮೂಲಭೂತ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅಷ್ಟೇ ಅಲ್ಲದೆ, ಒಂದು ವೇಳೆ ಯಾವುದಾದರೂ ಜನಪರ ಸರ್ಕಾರವು ಬೂರ್ಜ್ವಾ ವರ್ಗಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವಂತೆ ಜನಪರ ನೀತಿಗಳನ್ನು ಜಾರಿಗೊಳಿಸಿದಲ್ಲಿ, ಆ ಸರ್ಕಾರವೇ ಪತನಗೊಳ್ಳುತ್ತದೆ. ಒಂದು ಬಾರಿ ಜನರು ಈ ಸತ್ಯವನ್ನು ಅರಿತುಕೊಂಡರೆ, ಒಂದು ನೈಜ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷದ ಮಾರ್ಗದರ್ಶನವೂ ಅವರಿಗೆ ದೊರೆತರೆ, ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶ ಮಾಡುವ ಕ್ರಾಂತಿಕಾರಿ ಚಳುವಳಿಯನ್ನು ಬೆಳೆಸಲು ಜನರು ಮುಂದಾಗುತ್ತಾರೆ. ಮುಂದಿನ ದಿನಗಳಲ್ಲಿ, ಶ್ರೀಲಂಕಾದ ಪರಿಸ್ಥಿತಿಯು ಯಾವ ರೀತಿಯಲ್ಲಿ ಬದಲಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

# ಅಧ್ಯಕ್ಷ ಟ್ರಂಪ್ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರೆ, ಅಮೆರಿಕದ ನಾಗರಿಕರು ಹಸಿವು ಮತ್ತು ವಸತಿಹೀನತೆಯಿಂದ ಕಂಗಾಲಾಗಿದ್ದಾರೆ!

ಅಮೆರಿಕದ ಆಡಳಿತಗಾರರು ತಮ್ಮ ದೇಶದ ಶ್ರೀಮಂತಿಕೆ, ನಾವೀನ್ಯತೆ ಮತ್ತು ಅವಕಾಶಗಳ ಸಮಾನತೆಗಳ ಬಗ್ಗೆ ಬೀಗುತ್ತಿರುವಾಗಲೇ ದೇಶವನ್ನು ಹಸಿವಿನ ಭೂತವು ಕಾಡುತ್ತಿದೆ. ಲಕ್ಷಾಂತರ ಅಮೆರಿಕನ್ನರಿಗೆ ಆಳುವ ಬಂಡವಾಳಶಾಹಿ ವರ್ಗ ಮತ್ತು ಅದರ ದಾಸರು ಕೊಚ್ಚಿಕೊಂಡ ಜೀವನ ಆದರ್ಶ, ಸ್ವಾತಂತ್ರ್ಯ ಮತ್ತು ಸಂತೋಷಗಳು ಪೊಳ್ಳು ಭರವಸೆಗಳಾಗಿ ಬಯಲುಗೊಂಡಿವೆ. ಅಭಿವೃದ್ಧಿ ಹೊಂದಿದ ದೇಶಗಳ ನಡುವೆ ಅಮೆರಿಕ ಅತ್ಯಂತ ವ್ಯಾಪಕವಾದ ಹಸಿವಿನ ಬಿಕ್ಕಟ್ಟನ್ನೂ ಹೊಂದಿರುವುದು ವಿರೋಧಾಭಾಸವೂ ಆಗಿದೆ. ಈ ಬಿಕ್ಕಟ್ಟು ಅದರ ಸಾಮಾಜಿಕ-ಆರ್ಥಿಕ ರಚನೆಯಲ್ಲಿ ಆಳವಾಗಿ ಹುದುಗಿರುವ ಅಸಮಾನತೆಯನ್ನು ಮೌನವಾಗಿ ಬಹಿರಂಗಪಡಿಸಿದೆ.

## ಹಸಿವಿನಿಂದ ನರಳುತ್ತಿರುವವರ ಸಂಖ್ಯೆ ಹೆಚ್ಚಳ ತೀವ್ರ ಅಸಮಾನತೆ ಬಹಿರಂಗ

ಪ್ರಕಟಿತ ವರದಿಗಳ ಪ್ರಕಾರ, 9 ಮಿಲಿಯನ್ ಮಕ್ಕಳು ಸೇರಿದಂತೆ 34 ಮಿಲಿಯನ್ ಅಮೆರಿಕನ್ನರು ತೀವ್ರ ಹಸಿವಿನಿಂದ ಬಳಲುತ್ತಿದ್ದಾರೆ. ಇದು ಕೇವಲ ಸಂಖ್ಯೆಗಳಲ್ಲ; ಇದು ದುಃಖಿತ, ಅಸ್ತವ್ಯಸ್ತಗೊಂಡ ಜೀವನವನ್ನು ಪ್ರತಿನಿಧಿಸುತ್ತದೆ, ಇದು ಅನಿಷ್ಟ ಭವಿಷ್ಯವನ್ನು ಸೂಚಿಸುತ್ತದೆ. ಒಟ್ಟು ಜನಸಂಖ್ಯೆಯ ಶೇಕಡ 13ರಷ್ಟಿರುವ ಆಫ್ರಿಕನ್-ಅಮೆರಿಕನ್ನರು, ಆಹಾರದ ಅಭದ್ರತೆ ಎದುರಿಸುತ್ತಿರುವ ಕುಟುಂಬಗಳ ಸರಾಸರಿಯಲ್ಲಿ ಸುಮಾರು ಶೇಕಡ 22 ರಷ್ಟಿದ್ದಾರೆ. ಈ ಸಂಖ್ಯೆ ಆಫ್ರಿಕನ್-ಅಮೆರಿಕನ್ ಪೀಳಿಗೆಗಳು ವ್ಯವಸ್ಥಿತವಾಗಿ ಜನಾಂಗೀಯತೆಗೆ ಒಳಗಾಗಿರುವುದನ್ನು ಮತ್ತು ಅವರ ಆರ್ಥಿಕ ಹಕ್ಕಿನ ನಿರಾಕರಣೆಯನ್ನು ಪ್ರತಿಬಿಂಬಿಸುತ್ತದೆ. ಅದೇ ರೀತಿ ಕೃಷಿ ಮತ್ತು ಸೇವಾಕ್ಷೇತ್ರಕ್ಕೆ ಅನಿವಾರ್ಯವಾಗಿರುವ ಲ್ಯಾಟಿನೋ ಕುಟುಂಬಗಳು ಅಸಮಾನ ಆಹಾರದ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಆಹಾರದ ಅಭದ್ರತೆ ಎದುರಿಸುತ್ತಿರುವ ಕುಟುಂಬಗಳಲ್ಲಿ ಸುಮಾರು ಮೂರನೇ ಒಂದು ಭಾಗ ಲ್ಯಾಟಿನೋಗಳು. ಸಾರ್ವತ್ರಿಕವಾಗಿ ಶ್ರೀಮಂತರೆಂದು ತಪ್ಪಾಗಿ ಗ್ರಹಿಸಲ್ಪಟ್ಟ ಏಷ್ಯನ್ ಅಮೆರಿಕನ್ನರು ಈ ಬಿಕ್ಕಟ್ಟಿನಿಂದ ಮುಕ್ತರಲ್ಲ. ಹ್ಮಾಂಗ್, ಕಾಂಬೋಡಿಯನ್ ಮತ್ತು ಲಾವೋಟಿಯನ್ ಸಮುದಾಯಗಳಂತಹ ಉಪಗುಂಪುಗಳು ಶೇಕಡ 25ಕ್ಕಿಂತ ಹೆಚ್ಚಿನ ಹಸಿವಿನ ಪ್ರಮಾಣವನ್ನು ಅನುಭವಿಸುತ್ತಿವೆ. ಆದರೆ ಅವರ ಹೋರಾಟಗಳು ಮುಖ್ಯವಾಹಿನಿಯ ನಿರೂಪಣೆಗಳಲ್ಲಿ ಮಾಯವಾಗಿರುವುದು ಶೋಚನೀಯ.

ಮಕ್ಕಳ ಕುರಿತ ಅಂಕಿ-ಅಂಶ ಇನ್ನೂ ಕಠೋರವಾಗಿದೆ. ಒಟ್ಟಾರೆ ಮಕ್ಕಳಲ್ಲಿ ಸುಮಾರು ಶೇಕಡ 20 ರಷ್ಟು ಆಹಾರದ ಅಭದ್ರತೆಯಿರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಅವರಲ್ಲಿ ಲ್ಯಾಟಿನೋ ಮಕ್ಕಳೇ ಬಹುತೇಕ. ಬಿಳಿಯ ಮಕ್ಕಳಿಗಿಂತ ಎರಡು ಪಟ್ಟು ಹೆಚ್ಚು ಆಫ್ರಿಕನ್-ಅಮೆರಿಕನ್ ಮಕ್ಕಳು ದೀರ್ಘಕಾಲದ ಹಸಿವನ್ನು ಅನುಭವಿಸುತ್ತಾರೆ. ಈ ಅಂಕಿಅಂಶಗಳು ಮಿಸ್ಸಿಸ್ಸಿಪ್ಪಿ ಮತ್ತು ಅರ್ಕಾನ್ಸಾಸ್‌ನಂತಹ ರಾಜ್ಯಗಳಲ್ಲಿ ಅತಿ ಹೆಚ್ಚಾಗಿದ್ದು, ಬಡತನವು ಭೀಕರವಾಗಿ ಉಲ್ಬಣಗೊಳ್ಳುತ್ತಿದೆ.

ವೃದ್ಧರು ಸಹ ಮೌನವಾಗಿ ಈ ಹೊರೆಯನ್ನು ಹೊರುತ್ತಿದ್ದಾರೆ. ಕಳೆದ ದಶಕದಲ್ಲಿ ಹಿರಿಯ ನಾಗರಿಕರಲ್ಲಿ ಆಹಾರ ಅಭದ್ರತೆ ಶೇಕಡ 50ಕ್ಕಿಂತ ಹೆಚ್ಚಾಗಿದೆ. ಆಫ್ರಿಕನ್-ಅಮೆರಿಕನ್ ಮತ್ತು ಲ್ಯಾಟಿನೋ ಹಿರಿಯ ನಾಗರಿಕರಿಗೆ, ಜೀವಿತಾವಧಿಯ ವೇತನ ಅಂತರಗಳು, ಅಸಮರ್ಪಕ ಆರೋಗ್ಯ ವ್ಯವಸ್ಥೆ ಮತ್ತು ವ್ಯವಸ್ಥೆಯ ಅಸಮಾನತೆಗಳಿಂದಾಗಿ ಇತರರೊಡನೆ ಹೋಲಿಸಿದರೆ, ಅಹಾರ ಅಭದ್ರತೆಯ ಅನುಪಾತವು ಅಸಮಾನವಾಗಿ ಹೆಚ್ಚಾಗಿದೆ.

## ಮನುಷ್ಯಜೀವನವನ್ನು ಕೊರತೆಯಿಂದ ವ್ಯಾಖ್ಯಾನಿಸಬಹುದು

ಈ ಅಂಕಿಅಂಶಗಳ ಹಿಂದೆ ಹೃದಯ ವಿದ್ರಾವಕ ಕಥೆಗಳಿವೆ. ಷಿಕಾಗೋ ನಗರದಲ್ಲಿ, ಮೂರು ಮಕ್ಕಳನ್ನು ಹೊಂದಿದ್ದ ಕಪ್ಪು ವರ್ಣದ ಒಂಟಿ ತಾಯಿಯು ಕಡಿಮೆ ಸಂಬಳದ ಕೆಲಸಗಳನ್ನು ಮಾಡುತ್ತಾ, ಆಕೆಯ ಮಕ್ಕಳ ಪೌಷ್ಟಿಕಾಂಶಕ್ಕೆ ಶಾಲೆಯ ಉಚಿತ ಊಟವನ್ನು ಅವಲಂಬಿಸಿದ್ದಾಳೆ. ಲಾಸ್ ಏಂಜಲೀಸ್‌ನಲ್ಲಿ, ಎರಡನೇ ತಲೆಮಾರಿನ ಮೆಕ್ಸಿಕನ್-ಅಮೆರಿಕನ್ ಮಾರಿಯಾ, ತನ್ನ ಮಕ್ಕಳಿಗೆ ಸಾಕಾಗುವಷ್ಟು ಆಹಾರ ಒದಗಿಸಲು ತಾನು ಊಟದ ಮಿತಿ ಹಾಕಿಕೊಂಡಿರುವ ಕಟುವಾದ ಕಥೆಯನ್ನು ಹಂಚಿಕೊಳ್ಳುತ್ತಾಳೆ.

ಮಿನ್ನೇಸೋಟದಲ್ಲಿ ಏಷ್ಯನ್-ಅಮೆರಿಕನ್ ಆದ ಕಾಂಬೋಡಿಯನ್ ವಲಸೆ ಕಾರ್ಮಿಕ ಲಿನ್ ನಂತಹವರಿಗೆ ಸಾಂಸ್ಕೃತಿಕ ಅಡೆತಡೆಗಳು ಹಸಿವಿನ ಅವಮಾನಗಳನ್ನು ಹೆಚ್ಚಿಸುತ್ತವೆ. ಆಹಾರ ಮಳಿಗೆಗಳು ಸಾಮಾನ್ಯವಾಗಿ ಬೇರೆ ಪ್ರಾಂತ್ಯದ ಸೂಕ್ತವಾದ ಪ್ರಧಾನ ಆಹಾರಗಳನ್ನು ಹೊಂದಿರುವುದಿಲ್ಲ. ಇಂತಹ ಕುಟುಂಬಗಳು ಲಭ್ಯವಿರುವ ಆಹಾರವನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ.

ಗ್ರಾಮೀಣ ಅಮೆರಿಕದಾದ್ಯಂತ ಇಂತಹ ಕಥೆಗಳು ಪ್ರತಿಧ್ವನಿಸುತ್ತವೆ. ದೇಶದ ಬೆಳೆಯನ್ನು ಕೊಯ್ಲು ಮಾಡುವ ಕೃಷಿ-ಕಾರ್ಮಿಕರು ಅತ್ಯಧಿಕ ಹಸಿವನ್ನು ಎದುರಿಸುತ್ತಾರೆ. ಇವು ಕುಸಿದು ಬಿದ್ದಿರುವ ವ್ಯವಸ್ಥೆಯ ಮೌನ ದುರಂತಗಳು, ಅಲ್ಲಿ ದುಡಿಯುವ ಕುಟುಂಬಗಳು ಬದುಕಿಗಾಗಿ ಒದ್ದಾಡುತ್ತಿವೆ.

## ವಸತಿಹೀನತೆ – ಮತ್ತೊಂದು ಅಪಾಯ

ಹಸಿವಿನ ಜೊತೆಗೆ, ಅಮೆರಿಕದಲ್ಲಿ ವಸತಿಹೀನತೆಯ ಪ್ರಮಾಣ ಎಷ್ಟರ ಮಟ್ಟಿಗೆ ಬೆಳೆದಿದೆಯೆಂದರೆ, ಯಾವುದೇ ರಾತ್ರಿಯಲ್ಲಿ ಅರ್ಧ ಮಿಲಿಯನ್‌ಗಿಂತಲೂ ಹೆಚ್ಚು ಜನರು ಆಶ್ರಯಧಾಮಗಳು, ಕಾರುಗಳು ಮತ್ತು ಬೀದಿಗಳಲ್ಲಿ ಮಲಗುತ್ತಿದ್ದಾರೆ. ಈ ಅಂಕಿ ಅಂಶವು ಪೂರ್ಣವಲ್ಲ, ಏಕೆಂದರೆ ಇದು ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ ತಾತ್ಕಾಲಿಕವಾಗಿ ವಾಸಿಸುವ ಜನರನ್ನು ಒಳಗೊಂಡಿಲ್ಲ. ಅಮೆರಿಕದಲ್ಲಿ ಆಶ್ರಯವಿಲ್ಲದ ನಿರಾಶ್ರಿತರ ಮಟ್ಟ ಇತರ ಶ್ರೀಮಂತ ಬಂಡವಾಳಶಾಹಿ ದೇಶಗಳಿಗಿಂತ ಹೆಚ್ಚಿನದಾಗಿದೆ. ಕೈಗೆಟುಕುವ ದರಕ್ಕೆ ವಸತಿ ಸಿಗದೆ, ಆ ವೆಚ್ಚವನ್ನು ಭರಿಸಲು ಹೆಣಗಾಡುತ್ತಿರುವುದರಿಂದ ವಸತಿ ಹೀನತೆಯನ್ನು ಅನುಭವಿಸುತ್ತಿರುವ ಜನರ ಸಂಖ್ಯೆ ಹೆಚ್ಚುತ್ತಲೇ ಇದೆ.

ಮಕ್ಕಳಿರುವ ಕುಟುಂಬಗಳಲ್ಲಿ ವಸತಿಹೀನತೆಯು ಹೆಚ್ಚಳವಾಗಿದೆ ಎಂದು ಅಮೆರಿಕದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ವರದಿ ಮಾಡಿದೆ. 2023 ಮತ್ತು 2024ರ ನಡುವೆ, ಮಕ್ಕಳಿರುವ ಕುಟುಂಬಗಳಲ್ಲಿ ಶೇ.39ರಷ್ಟು ಹೆಚ್ಚಿನ ಜನರು ವಸತಿಹೀನತೆಯನ್ನು ಅನುಭವಿಸಿದರೆ, ಅದರಲ್ಲಿ ಶೇ.19ರಷ್ಟು ಜನರು 18 ವರ್ಷದೊಳಗಿನ ಮಕ್ಕಳೊಂದಿಗೆ ಇದ್ದಾರೆ. ಸಮೀಕ್ಷೆಯ ರಾತ್ರಿ ಸುಮಾರು 150,000 ಜನರು ನಿರಾಶ್ರಿತರಾಗಿದ್ದರು, ಇದು 2023ಕ್ಕಿಂತ ಶೇ.33ರಷ್ಟು ಹೆಚ್ಚಾಗಿದೆ. ವಸತಿಹೀನತೆಯ ಪರಿಣಾಮವು ಮಕ್ಕಳಲ್ಲಿ ಮಾನಸಿಕ ಕಾಯಿಲೆ ಹೆಚ್ಚಿಸಲು ಕಾರಣವಾಗಿದೆ.

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ವರದಿ 2024ರ ಪ್ರಕಾರ, 2024ರಲ್ಲಿ ಒಂದೇ ರಾತ್ರಿಯಲ್ಲಿ ವಸತಿಹೀನರಾಗಿರುವ ಪ್ರತಿ ಐದು ಜನರಲ್ಲಿ ಒಬ್ಬರು 55 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದರು. ವಸತಿಹೀನರಾಗಿರುವ 104,000ಕ್ಕೂ ಹೆಚ್ಚು ಜನರು 55 ರಿಂದ 64 ವರ್ಷ ವಯಸ್ಸಿನವರು ಮತ್ತು 42,150ಕ್ಕೂ ಹೆಚ್ಚು ಜನರು 64 ವರ್ಷಕ್ಕಿಂತ ಮೇಲ್ಪಟ್ಟವರು. 55 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ವಯಸ್ಕರಲ್ಲಿ ಅರ್ಧದಷ್ಟು (46%) ಮನುಷ್ಯಯೋಗ್ಯ ಸ್ಥಳವಿಲ್ಲದೆ ವಸತಿಹೀನರಾಗಿದ್ದಾರೆ. ವಸತಿಹೀನತೆಯ ಮತ್ತೊಂದು ಗಂಭೀರ ಪರಿಣಾಮವೆಂದರೆ ಅವರು ಬಡತನದಲ್ಲಿ ವಾಸಿಸುವವರಿಗಿಂತ ಶೇಕಡ 60ರಷ್ಟು ಬೇಗ ಸಾವನ್ನಪ್ಪುತ್ತಾರೆ ಮತ್ತು ಅವರ ಜೀವಿತಾವಧಿ ಸಾಮಾನ್ಯ ಜನರಿಗಿಂತ 26 ವರ್ಷಗಳು ಕಡಿಮೆ. ಯುರೋಪಿನಲ್ಲಿ, ವಸತಿಹೀನರಾಗಿರುವ ಜನರ ಸರಾಸರಿ ಜೀವಿತಾವಧಿಯು 30ವರ್ಷಗಳು ಕಡಿಮೆಯಾಗಿದೆ. ಅವರು ಸಾಂಕ್ರಾಮಿಕ ರೋಗ ಮತ್ತು ಮಾನಸಿಕ ಅಸ್ವಸ್ಥತೆಯನ್ನು ಹೆಚ್ಚು ಅನುಭವಿಸುತ್ತಾರೆ, ಕಾರಣ ಪ್ರಾಥಮಿಕ ಆರೋಗ್ಯ ಸೇವೆಗೆ ಪ್ರವೇಶ ಸಿಗದಿರುವುದು ಮತ್ತು ದುಬಾರಿ ಆರೋಗ್ಯ ಸೇವೆ. ವಸತಿಹೀನತೆಯು ಹಲವಾರು ವ್ಯಸನಗಳು, ಮಾನಸಿಕ ಅಸ್ವಸ್ಥತೆಗಳು, ಹೆಚ್‌ಐವಿ/ಏಡ್ಸ್ ಮತ್ತು ದೀರ್ಘಕಾಲೀನ, ಸ್ಥಿರವಾದ ಆರೈಕೆಯ ಅಗತ್ಯವಿರುವ ಹಲವಾರು ಆರೋಗ್ಯ ಸಮಸ್ಯೆಗಳನ್ನೂ ಸಹ ಉಂಟುಮಾಡುತ್ತದೆ. ಇತ್ತೀಚಿನ ವಿಶ್ಲೇಷಣೆಯ ಪ್ರಕಾರ ಸುಮಾರು ಮೂರನೇ ಎರಡರಷ್ಟು ವಯಸ್ಕ ನಿರಾಶ್ರಿತರು ಒಂದಲ್ಲ ಒಂದು ರೀತಿಯ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಎಂದು ತಿಳಿದುಬಂದಿದೆ.

ಈ ವಿಷಯದಲ್ಲೂ ಸಹ, ಆಫ್ರಿಕನ್-ಅಮೆರಿಕನ್ನರು ಮತ್ತು ಲ್ಯಾಟಿನೋಗಳು ಅತೀವವಾಗಿ ಬಳಲುತ್ತಿದ್ದಾರೆ. ಅಮೆರಿಕದ ಒಟ್ಟು ಜನಸಂಖ್ಯೆಯಲ್ಲಿ ಶೇ 12ರಷ್ಟು ಜನ ಆಫ್ರಿಕನ್ ಅಮೆರಿಕನ್ನರು, ಅದರಲ್ಲಿ ಶೇ.21ರಷ್ಟು ಜನ ನಿರ್ಗತಿಕರಾಗಿದ್ದಾರೆ, ಶೇ.32ರಷ್ಟು ಜನರು ನಿರಾಶ್ರಿತತೆಯನ್ನು ಅನುಭವಿಸುತ್ತಿದ್ದಾರೆ ಎಂದು ವಸತಿ ಮತ್ತು ನಗರಾಭಿವೃದ್ಧಿ ವರದಿ ತೋರಿಸುತ್ತದೆ. ಅದೇ ವರದಿಯು ಲ್ಯಾಟಿನೋಗಳು, ಅಮೆರಿಕನ್-ಇಂಡಿಯನ್ನರು, ಅಲಾಸ್ಕಾ ಸ್ಥಳೀಯರು ಮತ್ತು ಸ್ಥಳೀಯ ಜನಸಂಖ್ಯೆಯಲ್ಲಿ 31% ಜನರು ನಿರಾಶ್ರಿತರಾಗಿದ್ದಾರೆ ಎಂದು ಹೇಳಿದೆ. ಈ ವರದಿಯು ಆಶ್ರಯ ಪಡೆದ ಜನಸಂಖ್ಯೆಯ ಬಗ್ಗೆಯೂ ಹೆಚ್ಚಿನ ಒಳನೋಟವನ್ನು ನೀಡುತ್ತದೆ. ವಸತಿರಹಿತ ಮಹಿಳೆಯರು ಮತ್ತು ಹುಡುಗಿಯರಲ್ಲಿ ಸುಮಾರು 72% ರಷ್ಟು ಜನರು ಸರ್ಕಾರಿ ಆಶ್ರಯ ಪಡೆದಿದ್ದಾರೆ, ಆದರೆ ಸುಮಾರು 70% ಪುರುಷರು ಈ ಆಶ್ರಯ ಪಡೆಯದೆ ಇದ್ದಾರೆ.

## ಬಂಡವಾಳಶಾಹಿ ವ್ಯವಸ್ಥೆ ಎಲ್ಲಾ ಸಂಕಷ್ಟಗಳಿಗೆ ಮೂಲ

ಅಮೆರಿಕದಲ್ಲಿ ಹಸಿವು ಅಥವಾ ನಿರಾಶ್ರಿತತೆ ಪ್ರತ್ಯೇಕ ವಿದ್ಯಮಾನವೇನಲ್ಲ. ಅದು ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ದೇಶಗಳಲ್ಲಿ ಬೆಳೆಯುತ್ತಿರುವ ಅಸಮಾನತೆ ಮತ್ತು ಅನ್ಯಾಯವನ್ನು ಆಧರಿಸಿದ ಅನಿವಾರ್ಯತೆಯಾಗಿದೆ. ಶೇಕಡ 1ರಷ್ಟು ಶ್ರೀಮಂತ ಅಮೆರಿಕನ್ನರು ದೇಶದ ಶೇಕಡ 40ರಷ್ಟು ಸಂಪತ್ತಿನ ಮೇಲೆ ನಿಯಂತ್ರಣ ಹೊಂದಿದ್ದಾರೆ, ಆದರೆ ಆರ್ಥಿಕ ಏಣಿಯ ಕೆಳಭಾಗದಲ್ಲಿರುವ ಲಕ್ಷಾಂತರ ಜನರು ಪೌಷ್ಟಿಕ ಆಹಾರವಿರಲಿ ಮೂಲಭೂತ ಅವಶ್ಯಕತೆಗಳನ್ನು ಪಡೆಯಲು ಹೆಣಗಾಡುತ್ತಿದ್ದಾರೆ. ಹಸಿವು, ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ವ್ಯವಸ್ಥೆಯ ಪರಿಣಾಮವಾಗಿದೆ. ಇದು ಬಡ ದುಡಿಯುವ ಲಕ್ಷಾಂತರ ಜನರ ಬರಿಯ ಜೀವನಾಧಾರಕ್ಕಿಂತ, ಬೆರಳೆಣಿಕೆಯಷ್ಟು ಏಕಸ್ವಾಮ್ಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಗರಿಷ್ಠ ಲಾಭ ಗಳಿಸಲು ಆದ್ಯತೆ ನೀಡುತ್ತದೆ ಎಂಬುದನ್ನು ತೋರಿಸುತ್ತದೆ. ಕೆಲವರ ಕೈಯಲ್ಲಿರುವ ಸಂಪತ್ತು ಮತ್ತು ಅಧಿಕಾರದ ಅಸಮಾನ ಕ್ರೋಢೀಕರಣವು ಲಕ್ಷಾಂತರ ಜನರ ವ್ಯವಸ್ಥಿತವಾದ ಅಭಾವಕ್ಕೆ ಕಾರಣವಾಗುತ್ತದೆ. 2022ರಲ್ಲಿ, ಅಮೆರಿಕದ ಆರ್ಥಿಕತೆಯ ಒಟ್ಟು ದೇಶೀಯ ಉತ್ಪನ್ನ(ಜಿಡಿಪಿ) $25 ಟ್ರಿಲಿಯನ್‌ಗಿಂತ ಹೆಚ್ಚಿತ್ತು. ಆದರೂ 34 ಮಿಲಿಯನ್ ಜನರು ಆಹಾರ ಅಭದ್ರತೆಯನ್ನು ಎದುರಿಸಿದರು.

ಸಮೃದ್ಧಿಯ ಜೊತೆಗೆ ಅಭಾವ, ಎಂತಹ ವಿರೋಧಾಭಾಸ! ಅಂದರೆ ಒಂದೆಡೆ, ಬೆರಳೆಣಿಕೆಯಷ್ಟು ಉಳ್ಳವರ ಕೈಯಲ್ಲಿ ಸಂಪತ್ತು ಶೇಖರಣೆಯಾಗುತ್ತಿದೆ. ಇನ್ನೊಂದೆಡೆ, ಅಸಂಖ್ಯಾತ ಕಾರ್ಮಿಕ ವರ್ಗ ಬಡತನದ ಕೂಪಕ್ಕೆ ತಳ್ಳಲ್ಪಟ್ಟಿದೆ. ಇದೇ ಈ ಶೋಷಕ ವ್ಯವಸ್ಥೆಯ ನೈಜ ಮುಖ! "ಆಹಾರದ ಮರುಭೂಮಿಗಳು", ಕಡಿಮೆ ಆದಾಯದ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಇವು ವರ್ಗ ಶೋಷಣೆಯ ಭೌಗೋಳಿಕ ಸೂಚಕಗಳಾಗಿವೆ! ಪ್ರಧಾನವಾಗಿ ಕಪ್ಪು ಜನಾಂಗ ಮತ್ತು ಲ್ಯಾಟಿನೊ ಜನಸಂಖ್ಯೆಯಿಂದ ನಿಬಿಡವಾಗಿರುವ ಪ್ರದೇಶಗಳಲ್ಲಿ ನಾವು ಇದನ್ನು ನೋಡುತ್ತೇವೆ. ಇಲ್ಲಿ ಹಸಿವು ಶಾಶ್ವತವಾಗಿದೆ; ವಸತಿ, ಉದ್ಯೋಗ ಮತ್ತು ನಗರ ಯೋಜನೆಗಳಲ್ಲಿ ವ್ಯವಸ್ಥಿತವಾದ ಅಸಮಾನತೆಗಳು ಕಣ್ಣಿಗೆ ರಾಚುತ್ತವೆ. 'ರಚನಾತ್ಮಕ ವರ್ಣಭೇದ' (ಸ್ಟ್ರಕ್ಚರಲ್ ರೇಸಿಸಂ) ವು, ಈ ಅಸಮಾನತೆಗಳನ್ನು ಮತ್ತು ದಾರಿದ್ರ್ಯದ ಚಕ್ರವನ್ನು ಬಲಪಡಿಸಿ ಬಲಪಡಿಸಿದೆ. ದಶಕಗಳಿಂದ ನಿವೇಶನ ನೀಡುವಲ್ಲಿನ ವ್ಯವಸ್ಥಿತವಾದ ತಾರತಮ್ಯ ನೀತಿ, ವೇತನಗಳ ಕುಸಿತ, ಹಾಗೂ ಆರೋಗ್ಯ ಸೇವೆ ಮತ್ತು ಶಿಕ್ಷಣದಿಂದ ವಂಚಿತರಾದವರು, ವಿಶೇಷವಾಗಿ ಆಫ್ರಿಕನ್ ಅಮೆರಿಕನ್ ಮತ್ತು ಲ್ಯಾಟಿನೊ ಸಮುದಾಯಗಳ ಜನರು.

ಬಂಡವಾಳಶಾಹಿಗಳಿಗೆ ಆಧಾರವಾಗಿರುವ ಆರ್ಥಿಕ ರಚನೆಗಳು ಅಂತರ್ಗತವಾಗಿ ಅಸಮಾನತೆ, ಶೋಷಣೆ ಮತ್ತು ವ್ಯವಸ್ಥಿತವಾದ ಬಿಕ್ಕಟ್ಟುಗಳನ್ನು ಉಂಟುಮಾಡುತ್ತವೆ ಎಂದು 175 ವರ್ಷಗಳ ಹಿಂದೆ ಮಹಾನ್ ಕಾರ್ಲ್ ಮಾರ್ಕ್ಸ್ ಹೇಳಿದ್ದನ್ನು ಅಮೆರಿಕದ ಈ ಉದಾಹರಣೆ ಮತ್ತೊಮ್ಮೆ ದೃಢಪಡಿಸುತ್ತದೆ. ವರ್ಗ-ವಿಭಜಿತ ಬಂಡವಾಳಶಾಹಿ ಸಮಾಜದಲ್ಲಿ ದೀನದಲಿತರ ಹಸಿವು ಬೆಳೆಯುತ್ತಿರುವುದು ಆಹಾರದ ಕೊರತೆಯಿಂದಲ್ಲ, ಬದಲಾಗಿ ವೇಗವಾಗಿ ಬೆಳೆಯುತ್ತಿರುವ ಬಡತನದಿಂದಾಗಿ. ಇದು ಲಾಭದಾಹಿ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ತಿಮಿಂಗಿಲಗಳು ಮತ್ತು ಅವರ ಬಾಲಬಡುಕರು ನಿಗದಿಪಡಿಸಿದ ಬೆಲೆಗೆ ಕನಿಷ್ಠ ಮೂಲಭೂತ ಆಹಾರ ಪದಾರ್ಥಗಳನ್ನು ಖರೀದಿಸಲು ಸಾಧ್ಯವಾಗದಂತೆ ಮಾಡುತ್ತದೆ. ಅಮೆರಿಕಾದಲ್ಲಿ ಹಸಿವಿನ ಈ ಸಮಸ್ಯೆಯು ಬಂಡವಾಳಶಾಹಿ ಸಮಾಜದ ತೀವ್ರ ಅಸಮಾನತೆಯನ್ನು ಬಹಿರಂಗಪಡಿಸುತ್ತದೆ. ಬಳಲುತ್ತಿರುವ ಕಾರ್ಮಿಕ ವರ್ಗ ಮಾತ್ರವಲ್ಲ ಅಮೆರಿಕದ ಸಾಮಾಜಿಕ ಸಂರಚನೆ ಅಪಾಯದಲ್ಲಿದೆ. ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿರುವ ಮತ್ತು ಮನೆಗಳನ್ನು ಕಳೆದುಕೊಳ್ಳುತ್ತಿರುವ ಸಮಾಜದಲ್ಲಿ, ಕೋಟ್ಯಾಧಿಪತಿಗಳು ಬಾಹ್ಯಾಕಾಶವನ್ನೇ ವಸಾಹತುವನ್ನಾಗಿ ಮಾಡಲು ಯತ್ನಿಸುತ್ತಿರುವುದು, ಆ ಸಮಾಜವು ಮೂಲಭೂತವಾಗಿ ತನ್ನ ನೈತಿಕ ದಿಕ್ಸೂಚಿಯನ್ನು ಕಳೆದುಕೊಂಡಿದೆ ಎಂಬುದನ್ನು ಸಾರುತ್ತಿದೆ.

## ವಕ್ಫ್ ಕಾಯ್ದೆಗೆ ಮಾಡಿರುವ ತಿದ್ದುಪಡಿಯನ್ನು ಈ ಕೂಡಲೇ ಹಿಂತೆಗೆದುಕೊಳ್ಳಿ! -ಎಸ್‌ಯುಸಿಐ(ಸಿ) ಆಗ್ರಹ!

ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ 10.04.2025 ರಂದು ನೀಡಿರುವ ಹೇಳಿಕೆ:

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಭ್ರಷ್ಟಾಚಾರವನ್ನು ತಡೆಗಟ್ಟುವ ನೆಪವೊಡ್ಡಿ, ವಕ್ಫ್ ಕಾಯ್ದೆಗೆ ಮಾಡಿರುವ ತಿದ್ದುಪಡಿಯನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ. ಇದು, ಸರ್ಕಾರ, ವಕ್ಫ್ ಆಸ್ತಿಗಳ ಮೇಲೆ ಹತೋಟಿ ಸಾಧಿಸುತ್ತಾ, ಅಂತಿಮವಾಗಿ ಹಿಂಬಾಗಿಲಿನಿಂದ ಅವನ್ನು ತನ್ನ ವಶ ಪಡಿಸಿಕೊಳ್ಳುವಂತೆ ಕಾಣುತ್ತಿದೆ. ಹಿಂದೂ ದೇಗುಲಗಳನ್ನು, ಮತ್ತವುಗಳ ಧರ್ಮದರ್ಶಿಗಳಿಗೆ ಸಂಬಂಧಿಸಿದಂತೆ, ಅವುಗಳ ಮಂಡಳಿಗಳಲ್ಲಿ ಹಿಂದೂಯೇತರರರನ್ನು ಸೇರಿಸಿಕೊಳ್ಳುವುದೂ ಸೇರಿದಂತೆ, ಬಿಜೆಪಿ ಸರ್ಕಾರ ಇದೇ ನೀತಿಯನ್ನು ಅನ್ವಯಿಸುವುದೇ? ಇದು, ಹಿಂದೂ ಮತಾಂಧತೆಯನ್ನು ಇನ್ನಷ್ಟು ಕೆರಳಿಸಿ, ಧಾರ್ಮಿಕ ಒಡಕನ್ನು ಉಲ್ಬಣಗೊಳಿಸುವ ಮತ್ತು ಅಲ್ಪಸಂಖ್ಯಾತ ಜನರನ್ನು ಬೆದರಿಸುವ, ಕೋಮುವಾದಿ ಘರ್ಷಣೆಯ ಬೆಂಕಿಗೆ ತುಪ್ಪ ಸುರಿಯುವ ಹೀನ ವಿನ್ಯಾಸವಾಗಿದೆ; ಈ ಮೂಲಕ ಬಂಡವಾಳಶಾಹಿ ಶೋಷಣೆಯ ವಿರುದ್ಧ ದಮನಿತ ಜನರ ವರ್ಗ ಹೋರಾಟಗಳು ಮತ್ತು ಪ್ರಜಾತಾಂತ್ರಿಕ ಐಕ್ಯ ಹೋರಾಟಗಳಿಗೆ ತಡೆ ಒಡ್ಡಿ ಜನರ ಮನಸ್ಸನ್ನು ತಮ್ಮ ಜೀವನದ ಜ್ವಲಂತ ಸಮಸ್ಯೆಗಳಿಂದ ದಿಕ್ಚ್ಯುತಗೊಳಿಸುವ ದುರುದ್ದೇಶ ಇದರಲ್ಲಿ ಅಡಗಿದೆ.

ಯಾವುದೇ ಸ್ವಾಯತ್ತ ಧಾರ್ಮಿಕ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಲ್ಲಿ ಸರ್ಕಾರ ಮಧ್ಯ ಪ್ರವೇಶಿಸಬಾರದು ಎಂಬುದು ನಮ್ಮ ದೃಢ ಅಭಿಪ್ರಾಯ. ಈ ತೀವ್ರ ಕೋಮುವಾದಿ ವಿನ್ಯಾಸದ ವಿರುದ್ಧ ಒಂದು ಪ್ರಬಲ ಹೋರಾಟ ಕಟ್ಟುವ ಮೂಲಕ ಬಿಜೆಪಿ ಸರ್ಕಾರ ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ಮಾಡಲು ಅದರ ಮೇಲೆ ಒತ್ತಡ ಹೇರುವಂತೆ ನಾವು ದೇಶದ ಜನರಿಗೆ ಕರೆ ನೀಡುತ್ತೇವೆ.

# ಬಾಂಗ್ಲಾದೇಶದ ಸಂವಿಧಾನದ ಸುಧಾರಣೆಗಳು ಹಾಗೂ ರಾಜಕೀಯ ಪರಿಸ್ಥಿತಿಯ ಕುರಿತು

## ಬಸಾದ್ (ಮಾರ್ಕ್ಸಿಸ್ಟ್) ಪಕ್ಷದ ಅಭಿಪ್ರಾಯಗಳು

ಕಳೆದ ಆಗಸ್ಟ್ ತಿಂಗಳಿನಲ್ಲಿ ಒಂದು ಜನ ಬಂಡಾಯದ ಮೂಲಕ ಬಾಂಗ್ಲಾದೇಶದಲ್ಲಿ ಅಧಿಕಾರದಲ್ಲಿದ್ದ ಶೇಖ್ ಹಸೀನಾ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು. ನಂತರ ಅಧಿಕಾರಕ್ಕೆ ಬಂದ ಹಂಗಾಮಿ ಸರ್ಕಾರವು ಸಂವಿಧಾನವನ್ನು ಬದಲಾಯಿಸಲು ಕ್ರಮಗಳನ್ನು ಕೈಗೊಂಡಿದೆ. ಹೊಸ ಸಂವಿಧಾನವನ್ನು ಅಳವಡಿಸುವುದರ ಕುರಿತು ಘೋಷಣೆ ಮಾಡಿರುವ ಬಾಂಗ್ಲಾದೇಶದ ಉಸ್ತುವಾರಿ ಸರ್ಕಾರವು ಹಿಂದಿನ ಸಂವಿಧಾನಕ್ಕೆ ಕೆಲವು ಅನುಚ್ಛೇದಗಳನ್ನು ಸೇರಿಸುವ ಕುರಿತು ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳೊಂದಿಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದೆ. ಇದರ ಕುರಿತು ಬಸಾದ್ (ಮಾರ್ಕ್ಸಿಸ್ಟ್) (ಬಾಂಗ್ಲಾದೇಶ ಸಮಾಜವಾದಿ ಪಕ್ಷ – ಮಾರ್ಕ್ಸ್‌ವಾದಿ) ಪಕ್ಷದ ಅಭಿಪ್ರಾಯವು ಇಂತಿದೆ:

ಸರ್ಕಾರವು ಜನವರಿ 16ರಂದು ಸರ್ವಪಕ್ಷದ ಸಭೆಯನ್ನು ಕರೆದಿತ್ತು. ನಮ್ಮ ಪಕ್ಷವನ್ನೂ ಆಹ್ವಾನಿಸಲಾಗಿತ್ತು. ಅಲ್ಲಿ ದೇಶದ ಸಾರ್ವಭೌಮತ್ವದ ಕುರಿತಾದ ಮತ್ತೊಂದು ಘೋಷಣೆಯನ್ನು ಪ್ರಸ್ತಾಪಿಸಲಾಯಿತು. ಈ ಎರಡೂ ಘೋಷಣೆಗಳ ಜೊತೆಗೆ ನಮಗೆ ಪ್ರಮುಖವಾಗಿ ಸಹಮತವಿದ್ದರೂ, ಕೆಲವು ಮೂಲಭೂತ ಅಂಶಗಳ ಕುರಿತು ಕೆಲವೊಂದು ವಿಷಯಗಳನ್ನು ಮುಂದಿನ ಪರಿಗಣನೆಗಾಗಿ ಮಂಡಿಸುತ್ತೇವೆ.

### ಬಾಂಗ್ಲಾದೇಶದ ರಾಜಕೀಯ ಇತಿಹಾಸ

ಬ್ರಿಟಿಷ್ ಆಳ್ವಿಕೆಯಡಿಯಲ್ಲಿದ್ದ ಅವಿಭಜಿತ ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಆಗಸ್ಟ್ 14ರಂದು ಪಾಕಿಸ್ತಾನವು ಒಂದು ದೇಶವಾಗಿ ಹೊರಹೊಮ್ಮಿತು. ಆದರೆ ಪೂರ್ವ ಪಾಕಿಸ್ತಾನವನ್ನು ಪಶ್ಚಿಮ ಪಾಕಿಸ್ತಾನದ ಬಂಡವಾಳಶಾಹಿ ಆಳ್ವಿಕರು ಕಚ್ಚಾ ವಸ್ತುಗಳನ್ನು ಬಾಚಿಕೊಳ್ಳಲು ಒಂದು ವಸಾಹತುವಾಗಿ ಪರಿಗಣಿಸಿ, ಅಲ್ಲಿಯ ಜನರನ್ನು ನಿರ್ದಯವಾಗಿ ಶೋಷಿಸಿ ತಮ್ಮ ಬಂಡವಾಳ ಹೆಚ್ಚಿಸಿಕೊಂಡರು. ಪಾಕಿಸ್ತಾನದ ಶೇಕಡ 60ರಷ್ಟು ಜನಸಂಖ್ಯೆ ಪೂರ್ವ ಪಾಕಿಸ್ತಾನಕ್ಕೆ ಸೇರಿದ್ದರೂ ಅವರ ಬೆಳವಣಿಗೆಗೆ ಬಜೆಟಿನ ಶೇಕಡ 20ರಷ್ಟು ಮಾತ್ರ ಒದಗಿಸಲಾಗುತ್ತಿತ್ತು.

ಪೂರ್ವ ಪಾಕಿಸ್ತಾನದ ನಿರ್ದಯ ಶೋಷಣೆಯೊಂದಿಗೆ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದ ನಡುವೆ ಭಾಷಾ ಮತ್ತು ಸಾಂಸ್ಕೃತಿಕ ಕಂದರವೂ ಸಹ ಬಹಳ ದೊಡ್ಡದು. ಆದ್ದರಿಂದಲೇ ಪೂರ್ವ ಪಾಕಿಸ್ತಾನದ ಜನರು ಪಶ್ಚಿಮ ಪಾಕಿಸ್ತಾನದ ಶೋಷಣೆ, ದಬ್ಬಾಳಿಕೆ, ದಮನ ಮತ್ತು ದೌರ್ಜನ್ಯಗಳ ವಿರುದ್ಧ ಸಿಡಿದೆದ್ದರು. 1952ರಲ್ಲಿ ಸಲಾಮ್, ಬರ್ಕತ್, ರಫೀಕ್, ಜಬ್ಬರ್, ಶಾಫರ್ ಮತ್ತಿತರರು ಹುತಾತ್ಮರಾದ ರಕ್ತ ಹೆಪ್ಪುಗಟ್ಟಿಸುವಂತಹ ಭಾಷಾ ಚಳುವಳಿಯು ಮತ್ತು ಮೌಲಾನಾ ವಸಾನಿಯ ನಾಯಕತ್ವದಲ್ಲಿ 1954ರಲ್ಲಿ ಒಕ್ಕೂಟ ರಂಗವು ಪಡೆದ ಚುನಾವಣಾ ಗೆಲುವು ಜನರ ನಡುವೆ ಸ್ವಾಯತ್ತತಾ ಬೇಡಿಕೆಯನ್ನು ಬಲಪಡಿಸಿತು. ಒಕ್ಕೂಟ ರಂಗದ 21 ಅಂಶಗಳ ಚುನಾವಣಾ ಕಾರ್ಯಕ್ರಮದಲ್ಲಿ, ಪೂರ್ವ ಪಾಕಿಸ್ತಾನದ ಸ್ವಾಯತ್ತತಾ ಪರಿಕಲ್ಪನೆಯನ್ನು ವಿವರಿಸಲಾಗಿತ್ತು. ಮೌಲಾನಾ ವಸಾನಿಯವರು ಅತ್ಯಂತ ಜನಪ್ರಿಯ ನಾಯಕರಾಗಿದ್ದು, ಒಂದಾದ ನಂತರ ಮತ್ತೊಂದು ಜನ ಚಳುವಳಿಯನ್ನು ಸಂಘಟಿಸಿದರು, ಇದು ಸಮರಶೀಲ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಕ್ತಾಯವಾಯಿತು. ಆದರೆ ಚರಿತ್ರೆಯ ಈ ಭಾಗವನ್ನು ಗುರುತಿಸಲಾಗಿಲ್ಲ. 1970 ರ ನವೆಂಬರ್ 23 ರಂದು ಪಲ್ಟಾನ್ ಎಂಬ ಜಾಗದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ವಸಾನಿಯವರು 'ಸ್ವತಂತ್ರ ಪೂರ್ವ ಪಾಕಿಸ್ತಾನ್ ಚಿರಾಯುವಾಗಲಿ' ಎಂಬ ಘೋಷಣೆ ಎತ್ತಿದರು. ನವೆಂಬರ್ 30ರಂದು 'ಜನತೆಗೆ ಮೌಲಾನಾ ವಸನಿಯವರ ಕರೆ' ಎಂಬ ಕರಪತ್ರದಲ್ಲಿ ಪೂರ್ವಪಾಕಿಸ್ತಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ಮನಃಪೂರ್ವಕವಾಗಿ ಧುಮುಕಲು ಕರೆ ನೀಡಿದರು. ನಂತರ ನಡೆದ ಇನ್ನೂ ಅನೇಕ ಚಳುವಳಿಗಳ ನಂತರ 1971ರಲ್ಲಿ ಸಮರಶೀಲ ಸ್ವಾತಂತ್ರ್ಯ ಹೋರಾಟ ಜರುಗಿತು. ಆದರೆ ಇದರ ಎಲ್ಲಾ ಕೀರ್ತಿ ಅವಾಮಿ ಲೀಗ್‌ಗೆ ದೊರೆತದ್ದು ಅನೇಕ ಜನರಲ್ಲಿ ಪ್ರಶ್ನೆ ಮೂಡಿಸಿತು. ಶೋಷಿತ ಜನರ ಭವ್ಯ ಹೋರಾಟದ ಪರಿಣಾಮವಾಗಿ ಸ್ವತಂತ್ರವಾದ ಬಾಂಗ್ಲಾದೇಶ ಜನ್ಮ ತಾಳಿತು. ಆದರೆ ಬಾಂಗ್ಲಾದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಸ್ಥಾಪನೆಯಾದ ಕಾರಣ ಶೇಖ್ ಮುಜಿಬುರ್ ರೆಹಮಾನ್‌ನ ದಮನಕಾರಿ ಆಡಳಿತವು 1971ರಿಂದ 75ರವರೆಗೆ ಅನೇಕ ಜನವಿರೋಧಿ ನೀತಿಗಳನ್ನು ಅನುಸರಿಸಿತು. ವಿವಿಧ ಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಹತ್ಯೆಗೈಯ್ಯಲಾಯಿತು. ಮಾಧ್ಯಮದ ಧ್ವನಿಯನ್ನು ಹತ್ತಿಕ್ಕಲಾಯಿತು. ಅಂತಿಮವಾಗಿ 1972ರಲ್ಲಿ ರಚನೆಯಾದ ಸಂವಿಧಾನವನ್ನು ಕಿಂಚಿತ್ತೂ ಲೆಕ್ಕಿಸದೆ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. 1975ರ ಜನವರಿಯಲ್ಲಿ ಸಂವಿಧಾನಕ್ಕೆ 4ನೇ ತಿದ್ದುಪಡಿಯನ್ನು ತಂದು ಏಕಪಕ್ಷ ಆಡಳಿತವನ್ನು ಜಾರಿಗೆ ತರಲು ಅನುವು ಮಾಡಿಕೊಡಲಾಯಿತು. 'ಬಕ್ಸಾಲ್' ಎಂಬ ಪಕ್ಷದ ರಚನೆಯಾಯಿತು, ಅದನ್ನು ಬಿಟ್ಟು ಇನ್ನಿತರ ಪಕ್ಷಗಳನ್ನು ನಿಷೇಧಿಸಲಾಯಿತು.



ಜನ ಬಂಡಾಯ

1975ರಲ್ಲಿ ಶೇಖ್ ಮುಜಿಬುರ್ ರೆಹಮಾನ್ ರವರ ಹತ್ಯೆಯ ನಂತರ ಅನೇಕ ದಂಗೆ–ಪ್ರತಿದಂಗೆಗಳೆದ್ದವು, ಅಂತಿಮವಾಗಿ ಮಿಲಿಟರಿ ಆಡಳಿತಗಾರ ಇರ್ಷಾದ್‌ನನ್ನು ಪದಚ್ಯುತಗೊಳಿಸಲಾಯಿತು. ನಂತರ 2009ರಿಂದ–2024ರವರೆಗೆ ಅವಾಮಿ ಲೀಗ್ ಅಧಿಕಾರದಲ್ಲಿತ್ತು. ಅವಾಮಿ ಲೀಗ್ ಅಥವಾ ಇನ್ನಿತರ ಪಕ್ಷಗಳು ಸತತವಾಗಿ ಜನವಿರೋಧಿ ನೀತಿಗಳನ್ನು ಜಾರಿಗೊಳಿಸಿದ್ದವು. ಹಾಗೂ ಜನತೆಯ ಪ್ರಜಾತಾಂತ್ರಿಕ ಹಕ್ಕುಗಳ ಮೇಲೆ ಆಕ್ರಮಣ ಮಾಡಿದ್ದವು. 2014, 2018 ಹಾಗೂ 2024ರ ರಾಷ್ಟ್ರೀಯ ಚುನಾವಣೆಗಳನ್ನು ಒಂದು ಪ್ರಹಸನ ಮಾಡಿದ್ದರಿಂದ ಅವಾಮಿ ಲೀಗ್ ತನ್ನ ದುರಾಡಳಿತದ ವಿರುದ್ಧ ಜನರ ಆಕ್ರೋಶ ಸ್ಫೋಟವಾಗುವುದಕ್ಕೆ ಎಡೆಮಾಡಿಕೊಟ್ಟಿತು.

### 1972ರ ಸಂವಿಧಾನದ ಕುರಿತು

ಪ್ರಜಾತಂತ್ರ, ಧರ್ಮ ನಿರಪೇಕ್ಷತೆ, ಸಮಾಜವಾದ, ರಾಜಕೀಯ, ಆರ್ಥಿಕ, ಸಾಮಾಜಿಕ ಸಮಾನತೆ, ಮೂಲಭೂತ ಮಾನವ ಹಕ್ಕುಗಳು, ಸ್ವಾತಂತ್ರ್ಯ, ನ್ಯಾಯ ಇತ್ಯಾದಿ ಪದಗಳು ಲಕ್ಷಾಂತರ–ಕೋಟ್ಯಾಂತರ ಜನರ ಅಭಿಲಾಷೆಯನ್ನು ವ್ಯಕ್ತಪಡಿಸುವುದರಿಂದ, ಅವಾಮಿ ಲೀಗ್ ಇವುಗಳನ್ನು ತೋರಿಕೆಗಾದರೂ ಸಂವಿಧಾನದಲ್ಲಿ ಸೇರಿಸಬೇಕಾಯಿತು. ನೈಜವಾಗಿ ಅನುಷ್ಠಾನಕ್ಕೆ ತರುವುದರಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ. ಬಂಡವಾಳಶಾಹಿ ವರ್ಗವು ಪ್ರಗತಿಪರವಾಗಿದ್ದಾಗ ಫ್ರೆಂಚ್ ಮಹಾಕ್ರಾಂತಿಯ ಮೂಲಕ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಮುಂತಾದ ಪರಿಕಲ್ಪನೆಗಳನ್ನು ಮುಂಚೂಣಿಗೆ ತಂದಿತು. ಇದೀಗ ಸಾಮ್ರಾಜ್ಯವಾದ ಮತ್ತು ಕಾರ್ಮಿಕ ವರ್ಗದ ಕ್ರಾಂತಿಯ ಯುಗದಲ್ಲಿ ವಿಶ್ವದಾದ್ಯಂತ ಅದು ಅತ್ಯಂತ ಪ್ರತಿಗಾಮಿಯಾಗಿರುವಾಗ, ಈ ಮಹಾನ್ ಆದರ್ಶಗಳು ಸಂವಿಧಾನದ ಹಾಳೆಯಲ್ಲಿ ಮಾತ್ರ ಉಳಿದಿವೆ. ಅನುಷ್ಠಾನದಲ್ಲಿ ಅವುಗಳನ್ನು ಹೂತುಹಾಕಲಾಗಿದೆ. ರಷ್ಯಾದಲ್ಲಿ ಸಮಾಜವಾದದ ಸ್ಥಾಪನೆಯಾದ ನಂತರ ವಿಶ್ವದೆಲ್ಲೆಡೆ ಸಮಾಜವಾದದ ಬಗ್ಗೆ ಅಪಾರವಾದ ಆಕರ್ಷಣೆಯಿತ್ತು. ಈ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಲ್ಲಿಯೂ ಸಹ ಸಂವಿಧಾನದ ರಚನೆಯ ಸಂದರ್ಭದಲ್ಲಿ ಸಮಾಜವಾದಿ ವಿಚಾರಗಳನ್ನು ಪ್ರಸ್ತಾಪಿಸುವ ಬಯಕೆಯಿತ್ತು. ಆದರೆ ಕಾಲಕ್ರಮೇಣ ವಿವಿಧ ಆಡಳಿತ ಪಕ್ಷಗಳು 1972ರ ಸಂವಿಧಾನಕ್ಕೆ 17 ತಿದ್ದುಪಡಿಗಳನ್ನು ಮಾಡಿವೆ. ಇವುಗಳು ಜನರ ಹಕ್ಕನ್ನು ಒಂದಲ್ಲ ಒಂದು ರೀತಿಯಲ್ಲಿ ಕಸಿದುಕೊಂಡಿವೆ. ನಮ್ಮ ಪಕ್ಷದ ಅಭಿಪ್ರಾಯವೆಂದರೆ, ಸಂವಿಧಾನದಲ್ಲಿರುವ ಪ್ರಗತಿಪರ ಹಾಗೂ ಸಕಾರಾತ್ಮಕ ಅಂಶಗಳನ್ನು ಉಳಿಸಿಕೊಂಡು, ಸಂವಿಧಾನಕ್ಕೆ ಸುಧಾರಣೆ ತರಬೇಕು. ಜೊತೆಗೆ 6 ಮೂಲಭೂತ ಹಕ್ಕುಗಳನ್ನು– ಆಹಾರ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಸೇರಿಸಿ, ಇವುಗಳನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಬೇಕು.

### ದೇಶದ ಸಾರ್ವಭೌಮತ್ವದ ಕುರಿತು

ದೇಶದ ಸಾರ್ವಭೌಮತ್ವದ ಕುರಿತು ಜುಲೈ ಘೋಷಣೆಯಲ್ಲಿ ಸ್ಪಷ್ಟವಾಗಿ ಹೇಳಬೇಕಿತ್ತು. ಬಾಂಗ್ಲಾದೇಶವು ಸ್ವತಂತ್ರ ಹಾಗೂ ಸಾರ್ವಭೌಮ ರಾಷ್ಟ್ರವಾದಾಗಿನಿಂದಲೂ ಭಾರತ, ಅಮೇರಿಕಾ, ಯೂರೋಪ್ ರಾಷ್ಟ್ರಗಳು, ಜಪಾನ್ ಹಾಗೂ ಸಮಾಜವಾದ ಪತನಗೊಂಡ ನಂತರ ಸಾಮ್ರಾಜ್ಯಶಾಹಿ ರಾಷ್ಟ್ರಗಳಾಗಿರುವ ಚೀನಾ ಮತ್ತು ರಷ್ಯಾ, ಬಾಂಗ್ಲಾದೇಶದ ಮಾರುಕಟ್ಟೆಯನ್ನು ಕಬಳಿಸಲು ಅದರ ಆಂತರಿಕ ವ್ಯವಹಾರಗಳಲ್ಲಿ ಅನೇಕ ಬಾರಿ ಮೂಗುತೂರಿಸಿವೆ. ಇದೀಗ ಸರ್ಕಾರವು ಇದ್ಯಾವುದಕ್ಕೂ ಆಸ್ಪದ ನೀಡದೆ ಸಾರ್ವಭೌಮತ್ವವನ್ನು ಕಾಪಾಡಬೇಕೆಂದು ಬಸಾದ್(ಎಂ) ಆಗ್ರಹಿಸುತ್ತದೆ.

### ಹೊಸ ಗಣರಾಜ್ಯದ ಕುರಿತು

2024 ರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶೋಷಿತ ಜನರು ಹೋರಾಟದಲ್ಲಿ ಪಾಲ್ಗೊಂಡಿದ್ದರಿಂದ, ಅತ್ಯಂತ ದಮನಕಾರಿಯಾದ ಸರ್ಕಾರವನ್ನು ಕಿತ್ತೊಗೆದು, ಮಿಲಿಟರಿ ಸಹಾಯದಿಂದ ತಾತ್ಕಾಲಿಕ ಸರ್ಕಾರವನ್ನು ಪ್ರಸ್ತುತ ಸಂವಿಧಾನದ ಆಧಾರದ ಮೇಲೆ ರಚಿಸಲಾಗಿದೆ. ಆದ್ದರಿಂದ ಇದು ಹೊಸ ಗಣತಂತ್ರವೆಂದು ಹೇಳಿದರೆ ಸುಳ್ಳಾಗುತ್ತದೆ.

### ಸಾಮೂಹಿಕ ಬಂಡಾಯದ ಕುರಿತು

ಅವಾಮಿ ಲೀಗ್‌ನ ಫ್ಯಾಸಿಸ್ಟ್ ಆಳ್ವಿಕೆಯ ವಿರುದ್ಧದ 2024ರ ಸಾಮೂಹಿಕ ಬಂಡಾಯವು ನಿಜಕ್ಕೂ ಅಭೂತಪೂರ್ವವಾದುದು. 1500ಕ್ಕೂ ಹೆಚ್ಚು ಜನ ತಮ್ಮ ಜೀವಗಳನ್ನು ಬಲಿದಾನ ಮಾಡಿದ್ದಾರೆ. 25,000ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಎಷ್ಟೋ ಜನ ದೃಷ್ಟಿ ಕಳೆದುಕೊಂಡಿದ್ದಾರೆ. ಫ್ಯಾಸೀವಾದವನ್ನು ನಾಶಪಡಿಸಬೇಕೆಂಬುದು ಈ ಹೋರಾಟದ ಘೋಷಣೆಯಾಗಿದೆ. ಆದರೆ ಅವಾಮಿ ಲೀಗ್‌ನ ಪತನವನ್ನು ಫ್ಯಾಸೀವಾದದ ಪತನವೆಂದು ಪರಿಗಣಿಸಲಾಗದು. ಒಂದು ಪಕ್ಷದಿಂದ ಫ್ಯಾಸೀವಾದವನ್ನು ತರಲಾಗಿಲ್ಲ, ಅದನ್ನು ಒಂದು ಶೋಷಣೆ ಆಧಾರಿತ ಸಾಮಾಜಿಕ ವ್ಯವಸ್ಥೆಯಿಂದ ತರಲಾಗಿದೆ. ಜನರ ಸಮಸ್ಯೆಗಳನ್ನು ಬಗೆಹರಿಸಲಾಗದ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳು, ಜನ ಹೋರಾಟವನ್ನು ಹತ್ತಿಕ್ಕಲು ಫ್ಯಾಸಿಸಂಗೆ ಮೊರೆಹೋಗುತ್ತಿವೆ.

ಇಂದಿನ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಸಾಮ್ರಾಜ್ಯಶಾಹಿ ಪ್ರೇರಿತ ಯುದ್ಧಗಳಲ್ಲಿ ಸಾವಿರಾರು ಮುಗ್ಧ ಜನರ, ಮಕ್ಕಳ ಸಾವು ಇತ್ಯಾದಿ ಸಮಸ್ಯೆಗಳ ವಿರುದ್ಧ ಹೋರಾಡಲು, ಸಮಾಜದ ಬೆಳವಣಿಗೆಯ ಈ ಹಂತದಲ್ಲಿ ಧಾರ್ಮಿಕ ಅಥವಾ ಮಾನವತಾವಾದಿ ಮೌಲ್ಯಗಳು ಪ್ರಬಲ ಅಸ್ತ್ರಗಳಾಗುವುದಿಲ್ಲ. ಕೇವಲ ಮಾರ್ಕ್ಸ್‌ವಾದ–ಲೆನಿನ್‌ವಾದ ಮಾತ್ರವೇ ಮಾನವ ಸಮಾಜವನ್ನು ಕಾಪಾಡಬಲ್ಲದು, ಕ್ರಾಂತಿಯ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜವಾದವನ್ನು ಸ್ಥಾಪಿಸುವುದರ ಮೂಲಕ ಮಾತ್ರವೇ ಸಮಾಜದ ವಿಮುಕ್ತಿಯಾಗಬಲ್ಲದು. ಇದನ್ನು ನೈಜ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷದ ನಾಯಕತ್ವದಲ್ಲಿ ನಡೆಸಬೇಕು. ಇತ್ತೀಚಿನ ಬಂಡಾಯದಿಂದ ಫ್ಯಾಸೀವಾದದ ತಾತ್ಕಾಲಿಕ ಹಿನ್ನಡೆಯನ್ನು ಮಾತ್ರ ಸಾಧಿಸಲಾಗಿದೆ. ಅವಾಮಿ ಲೀಗ್‌ನ 16 ವರ್ಷಗಳ ಆಡಳಿತಾವಧಿಯಲ್ಲಿ ಪ್ರಭುತ್ವದ ವಿವಿಧ ಅಂಗಗಳು ಕುಸಿದುಬಿದ್ದಿವೆ. ಪ್ರಜಾಸತ್ತಾತ್ಮಕ ರೂಢಿ ಆಚರಣೆಗಳನ್ನು ತರಲು ಸುಧಾರಣೆಗಳು ಅವಶ್ಯಕ. ಆದರೆ, ಅಧಿಕಾರಸ್ಥ ಬಂಡವಾಳಶಾಹಿ ವರ್ಗಕ್ಕೆ ಅಧೀನವಾಗಿರುವ ಪಕ್ಷಗಳ ನೇತೃತ್ವದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿನ ಹೋರಾಟಗಳು ನಡೆದರೆ, ಅವರ ಹಕ್ಕುಗಳು ಮತ್ತಷ್ಟು ಕಡಿತಗೊಳ್ಳುತ್ತವೆ. ಮತ್ತೆ ದಮನಕಾರಿ ರಾಜಕೀಯ ಶಕ್ತಿ ಮೇಲುಗೈ ಪಡೆಯುತ್ತದೆ. ಆದ್ದರಿಂದಲೇ ಫ್ಯಾಸೀವಾದದ ವಿರುದ್ಧ ಹೇಗೆ ಹೋರಾಟವನ್ನು ಕಟ್ಟಬೇಕೆಂದು ನಿರ್ಧಾರಿತವಾಗಬೇಕು. 1952, 1969, 1971, 1990, 2024 ರ ಹೋರಾಟಗಳಿಂದ ನಾವು ಈ ರಾಜಕೀಯ ಪಾಠವನ್ನು ಕಲಿಯಬೇಕು.

ನಾವು ನಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದೇವೆ. ಎಲ್ಲಾ ರಾಜಕೀಯ ಪಕ್ಷಗಳ, ವಿದ್ಯಾರ್ಥಿ ಸಂಘಟನೆಗಳ, ಬಂಡಾಯದಲ್ಲಿ ಭಾಗವಹಿಸಿದ್ದ ವರ್ಗ ಹಾಗೂ ಸಮೂಹ ಸಂಘಟನೆಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಒಮ್ಮತಕ್ಕೆ ಬರಬೇಕೆಂದು ನಮ್ಮ ಅಭಿಮತ.

ಸಾಮೂಹಿಕ ಬಂಡಾಯದ ನಂತರ 2024ರ ಆಗಸ್ಟ್ 5ರಂದು ಶೇಖ್ ಹಸೀನಾರ ಆಳ್ವಿಕೆ ಅಂತ್ಯವಾಯಿತು. ಆಗಸ್ಟ್ 8ರಂದು ಹಂಗಾಮಿ ಸರ್ಕಾರವು ಅಧಿಕಾರಕ್ಕೆ ಬಂದಿತು. ನಾವು ಈ ಹೋರಾಟದ ಭಾಗವಾಗಿದ್ದರಿಂದ ಈ ಸರ್ಕಾರದಿಂದ ಬಹಳಷ್ಟು ನಿರೀಕ್ಷಿಸಿದ್ದೆವು. ಆದರೆ ಈ ಹಂಗಾಮಿ ಸರ್ಕಾರದಿಂದ ಜನರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರವು ಈ ಮೇಲೆ ತಿಳಿಸಿದ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವುದೆಂದು ಆಶಿಸುತ್ತೇವೆ.

# ಪ್ರೊಗ್ರೆಸ್ಸಿವ್ ಕಲ್ಚರಲ್ ಅಸೋಸಿಯೇಷನ್ ಆಫ್ ಇಂಡಿಯಾ(PCAI)ದಿಂದ ಕಲಾವಿದರು ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಅಖಿಲ ಭಾರತ ಶಿಬಿರ

ನಮ್ಮ ದೇಶದ ಕ್ರಾಂತಿಕಾರಿ ಹೋರಾಟಕ್ಕೆ ಪೂರಕವಾಗಿ ಸಾಂಸ್ಕೃತಿಕ ಚಳುವಳಿಯೊಂದನ್ನು ಆರಂಭಿಸಲಾಗಿದ್ದು, ಅದರ ಪ್ರಮುಖ ಭಾಗವಾಗಿ ಪ್ರೊಗ್ರೆಸ್ಸಿವ್ ಕಲ್ಚರಲ್ ಅಸೋಸಿಯೇಷನ್ ಆಫ್ ಇಂಡಿಯಾದ(ಪಿಸಿಎಐ) ರಚನೆಯಾಗಿದೆ. ಈ ಸಂಘಟನೆಯ ಚಟುವಟಿಕೆಗಳು ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿವೆ. ನಟರು, ಗಾಯಕರು, ಕಲಾವಿದರು ಮತ್ತು ಚಲನಚಿತ್ರ ನಿರ್ದೇಶಕರ ಗುಂಪುಗಳು ಅನೇಕ ಪ್ರದೇಶಗಳಲ್ಲಿ ರೂಪುಗೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ, ಸಾಂಸ್ಕೃತಿಕ ಆಂದೋಳನದಲ್ಲಿ ನಿರತರಾಗಿರುವ ದೇಶದ ವಿವಿಧ ಭಾಗಗಳ ಕಲಾವಿದರ ನಡುವೆ ಪರಸ್ಪರ ಸಂವಾದ, ಚಿಂತನೆಗಳ ವಿನಿಮಯ ಮತ್ತು ಪರಸ್ಪರ ಅನುಭವಗಳಿಂದ ಕಲಿಯುವ ಅಗತ್ಯ ಉಂಟಾಗಿತ್ತು. ಈ ಉದ್ದೇಶದೊಂದಿಗೆ, ಪಿಸಿಎಐ, ಜನಸಾಮಾನ್ಯರ ಚಳುವಳಿಗಳು ಮತ್ತು ಸಮೃದ್ಧ ಸಾಂಸ್ಕೃತಿಕ ಪರಂಪರೆಯ ತವರೂರಾದ ಕೊಲ್ಕತ್ತೆಯ ಜಯನಗರದಲ್ಲಿ 2025ರ ಮಾರ್ಚ್ 15 ರಿಂದ 17 ರವರೆಗೆ ರಾಷ್ಟ್ರಮಟ್ಟದ ಸಾಂಸ್ಕೃತಿಕ ಶಿಬಿರವನ್ನು ಆಯೋಜಿಸಿತ್ತು. ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾ. ಸೌಮೇನ್ ಬಸುರವರು ಮತ್ತು ಪಿಸಿಎಐ ಸಂಚಾಲಕರಾದ ಕಾ. ಪ್ರತಾಪ್ ಸಾಮಲ್‌ರವರು ಮಾತನಾಡಿದರು. ದೇಶದ ವಿವಿಧ ಭಾಗಗಳಿಂದ ಸುಮಾರು ಇನ್ನೂರು ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಿಬಿರದಲ್ಲಿ ನಾಲ್ಕು ಪ್ರತ್ಯೇಕ ಕಾರ್ಯಾಗಾರಗಳು ನಡೆದವು, ಪ್ರತಿಯೊಂದೂ, ಕಲೆಯ ನಾಲ್ಕು ಕ್ಷೇತ್ರಗಳಾದ ಸಂಗೀತ, ನಾಟಕ, ದೃಶ್ಯ ಕಲೆ ಮತ್ತು ಚಿತ್ರ ನಿರ್ಮಾಣದ ಮೇಲೆ ಕೇಂದ್ರೀಕರಿಸಿತ್ತು. ಕಾರ್ಯಾಗಾರಗಳು ವಿವಿಧ ಕಲಾ ಪ್ರಕಾರಗಳ ಪರಿಶೀಲನೆ, ಕಲಿಕೆ, ಅಭ್ಯಾಸ ಮತ್ತು ವಿವಿಧ ತಾಂತ್ರಿಕ ಅಂಶಗಳ ಕುರಿತು ಚರ್ಚೆಗಳನ್ನು ಒಳಗೊಂಡಿದ್ದವು. ಶಿಬಿರಾರ್ಥಿಗಳು ಪ್ರತಿದಿನ ಬೆಳಗ್ಗೆ 5 ಗಂಟೆಗೆ ಎದ್ದು, ತಮ್ಮ ದೈನಂದಿನ ಕಾರ್ಯಗಳನ್ನು ಪೂರ್ಣಗೊಳಿಸಿ ನಂತರ, ಒಂದು ಗಂಟೆ ಕಾಲ ಗಾಯಕರು ಗಾಯನ ಅಭ್ಯಾಸ, ನಟರು ದೈಹಿಕ ಚಟುವಟಿಕೆಗಳು, ದೃಶ್ಯ ಕಲಾವಿದರು ಸ್ಥಳೀಯ ಸಮುದಾಯದಿಂದ ಚಿತ್ರಗಳಿಗೆ ವಿಷಯವಸ್ತು ಸಂಗ್ರಹಿಸುವುದು ಮತ್ತು ಚಲನಚಿತ್ರ ಕಲಾವಿದರು ಛಾಯಾಚಿತ್ರಗಳನ್ನು ತೆಗೆಯುವುದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ಇದರ ಜೊತೆಗೆ ಜನಸಾಮಾನ್ಯರು ಅನುಭವಿಸುತ್ತಿರುವ ಸಂಘರ್ಷದ ಜೀವನವನ್ನು ಆಧರಿಸಿ ಉತ್ತಮ ಗುಣಮಟ್ಟದ ಕಲೆಯನ್ನು ಹೇಗೆ ಸೃಷ್ಟಿಸಬೇಕು, ಕಲೆಯ ಮೂಲಕ ಪ್ರೇಕ್ಷಕರ ಭಾವನಾತ್ಮಕ ಸೂಕ್ಷ್ಮತೆಯನ್ನು ಹೇಗೆ ಪ್ರಚೋದಿಸಬೇಕು ಮತ್ತು ಉನ್ನತ ಅಭಿರುಚಿಯನ್ನು ಹೇಗೆ ಬೆಳೆಸಬೇಕು ಎಂಬುದರ ಕುರಿತು ಚರ್ಚೆಗಳು ನಡೆದವು. ಕಾರ್ಯಾಗಾರಗಳ ಅಂತಿಮ ಅಧಿವೇಶನದಲ್ಲಿ, ಎಸ್‌ಯುಸಿಐ(ಸಿ) ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿಗಳಾದ ಕಾ. ಚಂಡಿದಾಸ್ ಭಟ್ಟಾಚಾರ್ಯ ಅವರು ಸಾಂಸ್ಕೃತಿಕ ಚಳುವಳಿಯ ವಿವಿಧ ಅಂಶಗಳು ಮತ್ತು ಕಾರ್ಮಿಕ ವರ್ಗದ ಮಹಾನ್ ನಾಯಕರು ಹಾಗೂ ಮಾರ್ಗದರ್ಶಕರು ಆದ ಕಾಮ್ರೇಡ್ ಶಿವದಾಸ್ ಘೋಷ್ ಅವರ ಬೋಧನೆಗಳ ಕುರಿತು ಮಾತನಾಡಿದರು.

ಅಂತಿಮ ದಿನವಾದ ಮಾರ್ಚ್ 17 ರಂದು, ಜಯನಗರದ ಶಿವನಾಥ ಶಾಸ್ತ್ರಿ ಸದನದಲ್ಲಿ ಸಾರ್ವಜನಿಕರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು. ಕೇರಳದ ಕಾ. ಸುಧೀರ್ ಕುಮಾರ್ ಈ ಕಲಾ ಪ್ರದರ್ಶನವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಜಯನಗರದವರೇ ಆದ, ಭಾರತದ ನವೋದಯದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದ ಶಿವನಾಥ ಶಾಸ್ತ್ರಿ ಅವರ ಛಾಯಾಚಿತ್ರಕ್ಕೆ ಕಾ. ಪ್ರತಾಪ್ ಸಾಮಲ್ ಪುಷ್ಪಗುಚ್ಛವನ್ನು ಅರ್ಪಿಸುವ ಮೂಲಕ ಗೌರವ ಸೂಚಿಸಿದರು. ನಂತರ, ಕಾ. ಪ್ರತಾಪ್ ಸಾಮಲ್ ಅವರು ಪಿಸಿಎಐನ ಧ್ಯೇಯೋದ್ದೇಶಗಳು ಮತ್ತು ಕಾರ್ಯಾಗಾರದ ಉದ್ದೇಶವನ್ನು ವಿವರಿಸುವುದರೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸಿದ್ದರೂ, ಅನಾರೋಗ್ಯದ ಕಾರಣದಿಂದ ಅದು ಸಾಧ್ಯವಾಗಲಿಲ್ಲ. ಹಾಗಾಗಿ, ಅವರ ಲಿಖಿತ ಸಂದೇಶವನ್ನು ಕಾ. ಸೌಮಲ್ ಓದಿದರು.

ಪ್ರಸಿದ್ಧ ಕಲಾವಿದ ಶ್ರೀ ಗಣೇಶ್ ಹಾಲೋಯ್ ಅವರು ಸಹ ವೃದ್ಧಾಪ್ಯ ಮತ್ತು ಅನಾರೋಗ್ಯದ ಕಾರಣದಿಂದಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವರ ವೀಡಿಯೊ ಸಂದೇಶವನ್ನು ಪ್ರದರ್ಶಿಸಲಾಯಿತು. ತದನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಒಡಿಶಾ, ತಮಿಳುನಾಡು, ಆಂಧ್ರ ಪ್ರದೇಶ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಕರ್ನಾಟಕ, ಅಸ್ಸಾಂ ಮತ್ತು ಕೇರಳದ ಕಲಾವಿದರಿಂದ ನಾಟಕ ಮತ್ತು ಸಂಗೀತ ಕಾರ್ಯಕ್ರಮಗಳು ನಡೆದವು. ಉನ್ನತ ಗುಣಮಟ್ಟದಿಂದ ಕೂಡಿದ ಈ ಪ್ರದರ್ಶನಗಳನ್ನು ಪ್ರೇಕ್ಷಕರು ಮೆಚ್ಚಿಕೊಂಡರು. ಪ್ರಸಿದ್ಧ ಸಂಗೀತಗಾರ ಶ್ರೀ ರಂಜನ್ ಪ್ರಸಾದ್ ಅವರು ಜಾನಪದ ಸಂಗೀತದ ಬಗ್ಗೆ ಮಾತನಾಡಿ, ನಂತರ ಒಂದು ಹಾಡನ್ನು ಪ್ರಸ್ತುತ ಪಡಿಸಿದರು. ಚಲನಚಿತ್ರ ಕಾರ್ಯಾಗಾರದ ಸದಸ್ಯರು ಕಾರ್ಯಾಗಾರದ ಬಗ್ಗೆ ಒಂದು ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಿದರು.

ವಿವಿಧ ರಾಜ್ಯಗಳಲ್ಲಿ ಸಾಂಸ್ಕೃತಿಕ ಚಳುವಳಿಯನ್ನು ಕಟ್ಟುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಈ ಶಿಬಿರದ ಪ್ರತಿನಿಧಿಗಳು, ಉನ್ನತ ಅಭಿರುಚಿ ಮತ್ತು ನೀತಿ–ನೈತಿಕ ಮೌಲ್ಯಗಳ ಆಧಾರದ ಮೇಲೆ ಒಂದು ಶಕ್ತಿಶಾಲಿ ಮತ್ತು ವಿಶಾಲ ಸಾಂಸ್ಕೃತಿಕ ಚಳುವಳಿಯನ್ನು ಕಟ್ಟುವ ಸಂಕಲ್ಪದೊಂದಿಗೆ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿದರು. ಈ ಅಖಿಲ ಭಾರತ ಮಟ್ಟದ ಶಿಬಿರವು ನಮ್ಮ ದೇಶದಲ್ಲಿ ಸಾಂಸ್ಕೃತಿಕ ಚಳುವಳಿಯನ್ನು ಆರಂಭಿಸುವ ದಿಶೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿ ಗುರುತಿಸಲ್ಪಡುತ್ತದೆ ಎಂದು ನಿರೀಕ್ಷಿಸಲಾಗಿದೆ.

# ಪಹಲ್‌ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕ ದಾಳಿ: ಎಸ್‌ಯುಸಿಐ(ಸಿ) ಖಂಡನೆ!

ಏಪ್ರಿಲ್ 22, 2025 ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರವಾಸಿಗರನ್ನು ಗುಂಡಿಕ್ಕಿ ಕೊಂದಿರುವುದನ್ನು ತೀವ್ರವಾಗಿ ಖಂಡಿಸಿ ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ಅವರು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

"ಜಮ್ಮು ಮತ್ತು ಕಾಶ್ಮೀರದಲ್ಲಿನ ಆರೋಪಿತ 'ಜನಸಂಖ್ಯಾ ಬದಲಾವಣೆ'ಗೆ ಪ್ರತೀಕಾರವಾಗಿ ಕಾಶ್ಮೀರದ ಪಹಲ್‌ಗಾಮ್ ಬಳಿ ನಿಷೇಧಿತ ಲಷ್ಕರ್–ಎ–ತೊಯ್ಬಾ (ಎಲ್‌ಇಟಿ) ದ ಛಾಯಾ ಸಂಘಟನೆಯಾದ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್), 26 ಪ್ರವಾಸಿಗರನ್ನು ಹತ್ಯೆ ಮಾಡಿ, ಹತ್ತಾರು ಜನರನ್ನು ಗಾಯಗೊಳಿಸಿರುವುದಕ್ಕೆ ದೇಶದ ಸಮಸ್ತ ಜನರೊಂದಿಗೆ, ನಾವು ಕೂಡ ತೀವ್ರ ಆಘಾತಕ್ಕೊಳಗಾಗಿದ್ದೇವೆ. ಈ ಹೇಯ ಕೃತ್ಯವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಭಾರೀ ಪ್ರಮಾಣದ ಮಿಲಿಟರಿ ಸನ್ನದ್ಧತೆ ಮತ್ತು ಭದ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಹೇಳಿಕೊಂಡರೂ, ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕ ಜನಸಾಮಾನ್ಯರ ರಕ್ಷಣೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯವನ್ನು ಇದು ಸಾಬೀತುಪಡಿಸುತ್ತದೆ.

ಎಲ್ಲಾ ಮೃತರ ಕುಟುಂಬಗಳು ಮತ್ತು ಗಾಯಗೊಂಡವರಿಗೆ ಸರ್ಕಾರವು ಸೂಕ್ತ ಪರಿಹಾರವನ್ನು ನೀಡಬೇಕು ಮತ್ತು ಸಂತ್ರಸ್ತ ಕುಟುಂಬಗಳ ಸರಿಯಾದ ಪುನರ್ವಸತಿಯನ್ನು ನೋಡಿಕೊಳ್ಳಬೇಕು ಎಂದು ನಾವು ಒತ್ತಾಯಿಸುತ್ತೇವೆ. ಇದರೊಂದಿಗೆ, ಈ ಭೀಕರ ಕುಕೃತ್ಯದ ಎಲ್ಲಾ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ನಾವು ಆಗ್ರಹಿಸುತ್ತೇವೆ. ಜಮ್ಮು ಮತ್ತು ಕಾಶ್ಮೀರ ಮತ್ತು ದೇಶದ ಎಲ್ಲಾ ವರ್ಗದ ಜನರು ಈ ಭಯಾನಕ ಹತ್ಯೆಯ ವಿರುದ್ಧ ತಮ್ಮ ಬಲವಾದ ಪ್ರತಿಭಟನೆಯ ಧ್ವನಿಯನ್ನು ಎತ್ತಬೇಕೆಂದು ನಾವು ಕರೆ ನೀಡುತ್ತೇವೆ."

# ಏಪ್ರಿಲ್24, 2025: ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪನಾ ದಿನದ ಕರೆ!

( 1ನೇ ಪುಟದಿಂದ... )

ಸಂಗಾತಿಗಳೊಂದಿಗೆ ತಮ್ಮ ಪಯಣನ್ನು ಪ್ರಾರಂಭಿಸಿದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಅಮೋಘ ಸೃಷ್ಟಿಯಾದ ನಮ್ಮ ಪಕ್ಷವು ಈಗ ಒಂದು ಗಮನಾರ್ಹ ಶಕ್ತಿಯಾಗಿ ಮಾರ್ಪಟ್ಟಿರುವುದರಲ್ಲಿ ಆಶ್ಚರ್ಯವೇನಿಲ್ಲ. ದುಡಿಯುವ ಜನರನ್ನು ಹೆಚ್ಚೆಚ್ಚು ಆಕರ್ಷಿಸುತ್ತಿರುವ ವರ್ಗ ಮತ್ತು ಜನ ಹೋರಾಟಗಳನ್ನು ಸಂಘಟಿಸುತ್ತಿರುವ ಮತ್ತು ತೀವ್ರಗೊಳಿಸುತ್ತಿರುವ ಪ್ರಬಲ ಶಕ್ತಿಯಾಗಿ ಅದು ದಾಪುಗಾಲನ್ನಿಡುತ್ತಿದೆ. ದೇಶದ ಕ್ರಾಂತಿಕಾರಿ ಶ್ರಮಜೀವಿಗಳ ಮುಂಚೂಣಿ ಪಡೆಯಾಗಿರುವ ಎಸ್‌ಯುಸಿಐ(ಸಿ) ಪಕ್ಷವು, ಎಲ್ಲವನ್ನೂ ನಿರ್ಧರಿಸುವುದು, ಸರಿಯಾದ ಕ್ರಾಂತಿಕಾರಿ ರಾಜಕೀಯ ಸಿದ್ಧಾಂತದೆಡೆಗಿನ ಬದ್ಧತೆಯೇ ಎಂಬ ಮಾರ್ಕ್ಸ್‌ವಾದ–ಲೆನಿನ್‌ವಾದದ ಅಮೂಲ್ಯ ಚಿಂತನೆಗಳ ಸಾಕಾರ ರೂಪವೇ ಆಗಿದೆ. ಸಮಕಾಲೀನ ವಿಶ್ವದ ಪ್ರಸಕ್ತ ಪರಿಸ್ಥಿತಿಯಲ್ಲಿ ಕಾಮ್ರೇಡ್ ಶಿವದಾಸ್ ಘೋಷ್ ಚಿಂತನೆಯು ಮಾರ್ಕ್ಸ್‌ವಾದ–ಲೆನಿನ್‌ವಾದದ ವಿಸ್ತೃತ, ಅಭಿವೃದ್ಧಿ ಹೊಂದಿದ, ಸಮೃದ್ಧ ತಿಳುವಳಿಕೆಯನ್ನು ಪ್ರತಿಬಿಂಬಿಸುತ್ತಾ ದೇಶದ ಗಡಿ ದಾಟಿ, ವಿದೇಶದಲ್ಲಿಯೂ ಕಮ್ಯುನಿಸ್ಟ್ ಕ್ರಾಂತಿಕಾರಿಗಳನ್ನು ಪ್ರೇರೇಪಿಸುತ್ತಿದೆ. ಇದಕ್ಕೆ ತದ್ವಿರುದ್ಧವಾಗಿ, ಈ ನೆಲದ ಎಲ್ಲಾ ಇತರ ಪಕ್ಷಗಳು, ದೊಡ್ಡವು ಅಥವಾ ಚಿಕ್ಕವು, ಅವು ಯಾವುದೇ ಬಣ್ಣ ಮತ್ತು ವರ್ಣದ್ದಾಗಿರಲಿ, ಕಮ್ಯುನಿಸ್ಟ್‌ನಿಂದ ಮಾರ್ಕ್ಸ್‌ವಾದಿ–ಲೆನಿನ್‌ವಾದಿ, ಹೀಗೆ ಯಾವುದೇ ಹೆಸರಿನ ತಥಾಕಥಿತ ಎಡಪಂಥೀಯ ಪಕ್ಷಗಳಿರಲಿ, ತಮ್ಮ ಹುಟ್ಟಿನಿಂದಲೇ ಅವು ಪಾಲಿಸುತ್ತಿರುವ ತಪ್ಪು ರಾಜಕೀಯ ಸಿದ್ಧಾಂತದಿಂದಾಗಿ ಮತ್ತೆಮತ್ತೆ ಹೋಳಾಗುತ್ತಿವೆ, ಜನರಿಂದ ದೂರಾಗುತ್ತಿವೆ.

ಪರಿಷ್ಕರಣಾವಾದದ ದೀರ್ಘಕಾಲದ ಅನುಷ್ಠಾನದಿಂದಾಗಿ ಮತ್ತು ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ಶಕ್ತಿಗಳ ಪ್ರಚೋದನೆಗೆ ಒಳಗಾಗಿ ಸೋವಿಯತ್ ಒಕ್ಕೂಟದಲ್ಲಿ ಮತ್ತು ನಂತರ ಚೀನಾದಲ್ಲಿ ಪ್ರತಿಕ್ರಾಂತಿ ನಡೆದು ಸಮಾಜವಾದ ಪತನವಾದ ನಂತರ, ಪ್ರಬಲ ಸಮಾಜವಾದಿ ಶಿಬಿರ ಕುಸಿತಗೊಂಡಿದೆ; ಇದು ಒಂದು ಕಾಲದಲ್ಲಿ ವೈಭವದ ಉತ್ತುಂಗದಲ್ಲಿದ್ದು, ದಿಟ್ಟ ಮುನ್ನಡೆಗಳನ್ನು ಇಡುತ್ತಿದ್ದ ವಿಶ್ವ ಕಮ್ಯುನಿಸ್ಟ್ ಚಳುವಳಿಗೆ ಎಂತಹ ಹೊಡೆತ ನೀಡಿದೆಯೆಂದರೆ, ಅದಿನ್ನೂ ಈ ಹಿನ್ನಡೆಯಿಂದ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಈ ಬೆಳವಣಿಗೆಗಳು ಸಮಾಜವಾದದ ಸುಸ್ಥಿರತೆಯ ಬಗ್ಗೆ ಅನೇಕರಲ್ಲಿ ಪ್ರಶ್ನೆಯನ್ನು ಹುಟ್ಟುಹಾಕಿದೆ, ಅನೇಕ ಎಡಪಂಥೀಯ ಮತ್ತು ಕಮ್ಯುನಿಸ್ಟ್ ಪಕ್ಷಗಳು ಹತಾಶೆಗೆ ಒಳಗಾಗಿವೆ. ಆದರೆ, ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಯಿಂದ ನಿರ್ದೇಶಿಸಲ್ಪಟ್ಟ ನಮ್ಮ ಪಕ್ಷವು ಈ ಹಿನ್ನಡೆಯಿಂದ ಆಘಾತಕ್ಕೊಳಗಾಗಿದ್ದರೂ ಆಶ್ಚರ್ಯಪಡಲಿಲ್ಲ. ಏಕೆಂದರೆ, ಪರಿಷ್ಕರಣಾವಾದದ ಲಕ್ಷಣಗಳನ್ನು ಕಾಮ್ರೇಡ್ ಶಿವದಾಸ್ ಘೋಷ್‌ರವರು ಬಹಳ ಹಿಂದೆಯೇ ಸರಿಯಾಗಿ ಗ್ರಹಿಸಿದ್ದರು, ಅದರ ಪರಿಹಾರೋಪಾಯಗಳ ಬಗ್ಗೆಯೂ ತಿಳಿಸಿಕೊಟ್ಟಿದ್ದರು. ನಮ್ಮ ಪಕ್ಷ ಈ ದಾರಿಯಲ್ಲೇ ಸಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಏಪ್ರಿಲ್ 24 ಅತ್ಯಂತ ಮಹತ್ವದ್ದಾಗಿದೆ. ಇದು ಮನುಷ್ಯನಿಂದ ಮನುಷ್ಯನ ಶೋಷಣೆಯನ್ನು ನಿರ್ಮೂಲನೆ ಮಾಡುವ ಸಂದೇಶವನ್ನು ಹೊಂದಿದೆ. ಜನರು ಹೆಚ್ಚೆಚ್ಚಾಗಿ ಕಾಮ್ರೇಡ್ ಶಿವದಾಸ್ ಘೋಷ್ ಚಿಂತನೆಯ ಸಂಪರ್ಕಕ್ಕೆ ಬರುತ್ತಿದ್ದಂತೆ ಅದರೆಡೆಗೆ ಹೆಚ್ಚೆಚ್ಚು ಆಕರ್ಷಿತರಾಗುತ್ತಿದ್ದಾರೆ; ಹಾಗೂ ಭಾರತದ ಕ್ರಾಂತಿಯ ಹಾದಿಯನ್ನು ಸುಗಮಗೊಳಿಸಲು ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವಾದ ಎಸ್‌ಯುಸ್‌ಐ(ಸಿ) ಅನ್ನು ಸ್ಥಾಪಿಸಿದ ಕಾಮ್ರೇಡ್ ಘೋಷ್‌ರವರ ಕಠಿಣ, ಆದರೆ ದೃಢನಿಶ್ಚಯದ ಸಂಘರ್ಷದಿಂದ ಪ್ರೇರಿತರಾಗುತ್ತಿದ್ದಾರೆ. ಕಾಮ್ರೇಡ್ ಘೋಷ್‌ರವರು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗನುಸಾರವಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸುತ್ತಲೇ, ಜೀವನ ಮತ್ತು ಸಮಾಜದಲ್ಲಿ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸಿದರು ಮತ್ತು ಅವುಗಳನ್ನು ಎದುರಿಸಲು ಹಾಗೂ ಪರಿಹರಿಸಲು ಮಾರ್ಗವನ್ನು ತೋರಿಸಿಕೊಟ್ಟರು; ಹೀಗೆ, ನೈಜ ಕ್ರಾಂತಿಕಾರಿಯಾಗಿ ಹೊರಹೊಮ್ಮಲು ಜೀವನದ ಎಲ್ಲಾ ಸ್ತರಗಳಲ್ಲಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಹೇಗೆ ಅನ್ವಯಿಸಬೇಕು ಎಂಬುದನ್ನೂ ತೋರಿಸಿಕೊಟ್ಟರು. ಈ ಪ್ರಕ್ರಿಯೆಯಲ್ಲಿ ಅವರು ಈ ಉದಾತ್ತ ಸಿದ್ಧಾಂತವನ್ನು ಶ್ರೀಮಂತಗೊಳಿಸಿದರು ಮತ್ತು ಅದರ ತಿಳುವಳಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದರು.

ಇಂದು ಪ್ರತಿದಿನವೂ ನಾವು ನಮ್ಮ ಸಹೋದರರು ಕೆಟ್ಟ ಸಂಸ್ಕೃತಿಗೆ ಬಲಿಯಾಗುತ್ತಿರುವುದನ್ನು, ಸಹೋದರಿಯರು ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು, ವೃದ್ಧರು ಅವಮಾನಿತರಾಗುತ್ತಿರುವುದನ್ನು, ಅವಶ್ಯಕ ಪೌಷ್ಟಿಕಾಂಶವಿಲ್ಲದೆ ಹಸಿವಿನಿಂದ ಬಳಲುತ್ತಿರುವ ಮಕ್ಕಳನ್ನು, ಸಹ ನಾಗರಿಕರು ಹಸಿವಿನಿಂದ ಸಾಯುತ್ತಿರುವುದನ್ನು, ನಿರುದ್ಯೋಗಿ ಯುವಕರು ಅನೈತಿಕ ಜೀವನೋಪಾಯಕ್ಕೆ ಧುಮುಕುತ್ತಿರುವುದನ್ನು, ಕೆಲಸ ಕಳಕೊಂಡ ಕಾರ್ಮಿಕರು ಮತ್ತು ಸಾಲಬಾಧಿತ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು, ಲಕ್ಷಾಂತರ ವಂಚಿತ ಮತ್ತು ಕಿರುಕುಳಕ್ಕೊಳಗಾದವರ ಗೋಳಾಟ ಮತ್ತು ಸಂಕಟಗಳನ್ನು ನೋಡುತ್ತಿದ್ದೇವೆ. ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಯ ನೈಜ ಅನುಯಾಯಿಗಳಾದ ನಾವು, ಈ ಛಿದ್ರಗೊಂಡಿರುವ ಶೋಷಕ ಬಂಡವಾಳಶಾಹಿ ವ್ಯವಸ್ಥೆಯ ಹಿಡಿತಗಳಿಂದ ಜನರನ್ನು ಮುಕ್ತಗೊಳಿಸಿ ಶೋಷಣಾರಹಿತ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ನಮ್ಮೆಲ್ಲಾ ಶಕ್ತಿಯನ್ನು ವಿನಿಯೋಗಿಸುವುದು ಅತ್ಯಗತ್ಯ. ಏಪ್ರಿಲ್ 24, ಈ ಸಂಕಲ್ಪ ತೊಡಲು ನಮ್ಮನ್ನು ಮತ್ತೆಮತ್ತೆ ಪ್ರೇರೇಪಿಸುತ್ತದೆ.

**ಏಪ್ರಿಲ್ 24 ಚಿರಾಯುವಾಗಲಿ!**

**ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆ ಚಿರಾಯುವಾಗಲಿ!**

**ಎಸ್‌ಯುಸಿಐ(ಸಿ)ಚಿರಾಯುವಾಗಲಿ!**

# ಕ್ರಾಂತಿಕಾರಿ ಕಲಾವಿದರಿಗೆ ಕಾಮ್ರೇಡ್ ಪ್ರವಾಶ್ ಘೋಷ್ ಸಂದೇಶ

**"ಕ್ರಾಂತಿಕಾರಿಯಾಗಿ ತಮ್ಮ ಕಲಾಮಟ್ಟವನ್ನು ನಿರಂತರವಾಗಿ ಉತ್ತಮ ಪಡಿಸಿಕೊಳ್ಳಲು ಶ್ರದ್ಧಾಪೂರ್ವಕ ಸಮರ್ಪಣೆ, ಸಂಪೂರ್ಣ ಬದ್ಧತೆ, ಅವಿರತ ಪ್ರಯತ್ನ ಮತ್ತು ಪರಸ್ಪರ ಕಲಿಯುವ ಮುಕ್ತ ಮನಸ್ಸುಗಳ ಅವಶ್ಯಕತೆ ಇದೆ."**

(ಕೊಲ್ಕತ್ತಾದ ಜಯನಗರದಲ್ಲಿ, ಪ್ರೋಗ್ರೆಸಿವ್ ಕಲ್ಚರಲ್ ಅಸೋಸಿಯೇಷನ್ ಆಫ್ ಇಂಡಿಯಾ (PCAI) ಸಂಘಟಿಸಿದ ಅಖಿಲ ಭಾರತ ತರಬೇತಿ ಶಿಬಿರದ ಶಿಬಿರಾರ್ಥಿಗಳಿಗೆ, 17, ಮಾರ್ಚ್ 2025ರಂದು ನಮ್ಮ ಪಕ್ಷ ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ನೀಡಿರುವ ಸಂದೇಶ)

ಆತ್ಮೀಯ ಕಾಮ್ರೇಡರೇ,

ನಿಮ್ಮ ಸಾಂಸ್ಕೃತಿಕ ಕಾರ್ಯಾಗಾರದ ಕೊನೆಯ ದಿನದ ಪ್ರದರ್ಶನಕ್ಕೆ ಬರುತ್ತೇನೆ ಎಂದು ಕಾಮ್ರೇಡ್ ಪ್ರತಾಪ್ ಸಮಲ್ ಅವರಿಗೆ ಭರವಸೆ ಕೊಟ್ಟಿದ್ದೆ. ಬಹುಶಃ ಇದು ನಿಮಗೆ ತಿಳಿದಿರಬಹುದು. ಆದರೆ ಹಠಾತ್ತಾಗಿ ಬಂದ ಅನಾರೋಗ್ಯ ಮತ್ತು ವೈದ್ಯಕೀಯ ಸಲಹೆಯು ಈ ಭರವಸೆಯನ್ನು ಪೂರೈಸಲು ಬಿಡಲಿಲ್ಲ. ಇದು ನನಗೆ ತುಂಬಾ ನೋವುಂಟು ಮಾಡಿದೆ.

ಕಳೆದ ಘಾಟ್‌ಶಿಲಾ ಅಧಿವೇಶನದಲ್ಲಿ, ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಗಳ ಬಗ್ಗೆ ನನಗಿರುವ ತಿಳುವಳಿಕೆಯ ಪ್ರಕಾರ, ಕಲೆಯ ವಿವಿಧ ಪ್ರಕಾರಗಳ ಅವಶ್ಯಕತೆ, ಹುಟ್ಟು ಮತ್ತು ವಿಕಸನದ ಬಗ್ಗೆ ಚರ್ಚೆ ಮಾಡಿದ್ದೆ. ಬಹುಶಃ ನಿಮ್ಮಲ್ಲಿ ಕೆಲವರಿಗೆ ಅದರ ಪರಿಚಯವಿದೆ. ಅದನ್ನು ಮತ್ತೆ ಹೇಳಲು ಹೋಗುವುದಿಲ್ಲ. ಇಲ್ಲಿ ನಿಮ್ಮ ದೀರ್ಘಾಲೋಚನೆಗೆಂದು ಕೆಲವು ವಿಷಯಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

ಬಗೆಹರಿಯದ ವರ್ಗ ಸಂಘರ್ಷವಿರುವ ವರ್ಗ ವಿಭಜಿತ ಸಮಾಜದಲ್ಲಿ ಕಲೆಗಾರರೂ ಮತ್ತು ಕಲೆಯೂ ಸಹ ಎಂದೂ ತಟಸ್ಥವಾಗಿರಲು ಸಾಧ್ಯವಿಲ್ಲ ಅಥವಾ ತಟಸ್ಥವಾಗಿಯೂ ಇಲ್ಲ. ಎಲ್ಲರೂ ತಿಳಿದೋ ಅಥವಾ ತಿಳಿಯದೆಯೋ ಶೋಷಕ ಅಥವಾ ಶೋಷಿತ ವರ್ಗದ ಹಿತ ಕಾಪಾಡುತ್ತಾರೆ. ಸಮಾಜವು ವರ್ಗ ವಿಭಜಿತವಾದಾಗ ಈ ಪ್ರಕ್ರಿಯೆ ಆರಂಭವಾಯಿತು. ಹಿಂದಿನ ಎಲ್ಲಾ ಚಳುವಳಿಗಳಲ್ಲೂ ಕಲೆ ಮತ್ತು ಕಲಾವಿದರೂ ಸಹ ಈ ಪಾತ್ರವನ್ನು ನಿರ್ವಹಿಸಿದ್ದಾರೆ. ಅದು ಸಾಮಾಜಿಕ ಚಳುವಳಿಗಳ ಅವಿಭಾಜ್ಯ ಅಂಗವಾಗಿತ್ತು. ಧಾರ್ಮಿಕ ಚಳುವಳಿಯು ಪ್ರಗತಿಪರ ಪಾತ್ರವನ್ನು ವಹಿಸಿದ್ದಾಗ ಹೇಗೆ ಕಲೆ ಅದಕ್ಕನುಗುಣವಾಗಿ ತನ್ನ ಪಾತ್ರ ನಿರ್ವಹಿಸಿದೆ ಮತ್ತು ಅಭಿವೃದ್ಧಿಯಾಗಿದೆ ಎಂದು ನಿಮಗೆ ಇತಿಹಾಸದಿಂದ ತಿಳಿದಿದೆ. ಅಲ್ಲಿಂದಾಚೆಗೆ ಅದು ಯುರೋಪಿನಲ್ಲಿ ಪ್ರಜಾತಾಂತ್ರಿಕ ಕ್ರಾಂತಿಯನ್ನು ಅನುಸರಿಸಿ ಬಂದ ಜಮೀನ್ದಾರಿ ಪದ್ಧತಿ ವಿರೋಧಿ ನವೋದಯದ ಕಾಲಘಟ್ಟದಲ್ಲಿ ತನ್ನ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಿದೆ. ಅದಕ್ಕನುಗುಣವಾಗಿ ಕಲೆ ವಿಕಸನಗೊಂಡಿತು. ಅದೇ ರೀತಿ ಮಹಾನ್ ಸೋವಿಯತ್ ಮತ್ತು ಚೀನಾ ಕ್ರಾಂತಿಗಳಲ್ಲೂ ಕಲೆ ಮತ್ತು ಕಲಾವಿದರು ಅಮೋಘವಾದ ಪಾತ್ರ ವಹಿಸಿದರು.

ಆದ್ದರಿಂದ 'ಕಲೆಗಾಗಿ ಕಲೆ', 'ಮನರಂಜನೆಗಾಗಿ ಕಲೆ' ಎನ್ನುವ ಘೋಷಣೆಗಳು ಅಥವಾ ಕಲಾವಿದರು ಅಗ್ಗದ ಜನಪ್ರಿಯತೆ, ಸಾರ್ವಜನಿಕರ ಚಪ್ಪಾಳೆ, ಮೆಚ್ಚುಗೆ, ಹಣ–ಹೆಸರು–ಖ್ಯಾತಿಗಳ ಹಿಂದೆ ಬೀಳಬೇಕೆನ್ನುವುದು – ಇದೆಲ್ಲವೂ ಕಪಟತನ, ಸಾಮಾಜಿಕ ಪ್ರಗತಿಗೆ ತಡೆಗೋಡೆ ಮತ್ತು ಪ್ರತಿಗಾಮಿ. ಇದು ಕಲೆ ಮತ್ತು ಕಲಾವಿದರ ಬೆಳವಣಿಗೆಗೂ ಅಡ್ಡಿ ಮಾಡುತ್ತದೆ.

ನಮ್ಮ ದೇಶದಲ್ಲಿ ವಿದೇಶಿ ಸಾಮ್ರಾಜ್ಯಶಾಹಿ ಆಳ್ವಿಕೆ ಇದ್ದಾಗ ನವೋದಯ ಚಳುವಳಿ ಬೆಳೆಯಿತು; ಅದನ್ನು ಅನುಸರಿಸಿ ಬಂದ ಸ್ವಾತಂತ್ರ್ಯ ಸಂಗ್ರಾಮವು ಕೇವಲ ರಾಜಕೀಯದಲ್ಲಷ್ಟೇ ಅಲ್ಲದೆ ವಿಜ್ಞಾನ, ಸಾಹಿತ್ಯ, ವಿವಿಧ ಕಲಾ ಪ್ರಕಾರಗಳು, ಅಂದರೆ ಹಾಡುಗಾರಿಕೆ ಮತ್ತು ವಾದ್ಯ ಸಂಗೀತ, ನಾಟಕ, ಜಾನಪದ ನಾಟಕ, ಚಿತ್ರಕಲೆ, ಶಿಲ್ಪಕಲೆ, ನೃತ್ಯ, ಮುಂತಾದವುಗಳಲ್ಲಿ ಒಬ್ಬರಾದ ಮೇಲೆ ಒಬ್ಬರು ಪರಿಣಿತರನ್ನು ಸೃಷ್ಟಿ ಮಾಡಿತು. ಆ ಸಮಯದಲ್ಲಿ, ಅವರ ಮಧ್ಯೆ ಒಂದು ವಿಭಾಗವು ಸೋವಿಯತ್ ಸಮಾಜವಾದಿ ಕ್ರಾಂತಿಯಿಂದ ಸ್ಫೂರ್ತಿ ಹೊಂದಿ ಕಮ್ಯುನಿಸಂ ಕಡೆಗೆ ಆಕರ್ಷಿತವಾಯಿತು. ಅವರು ನೈಜ ಕಮ್ಯುನಿಸ್ಟ್ ಪಕ್ಷವಾಗಿರದ ಮತ್ತು ಅವರಿಗೆ ಕ್ರಾಂತಿಕಾರಿ ಸಿದ್ಧಾಂತ ಹಾಗೂ ಸೂಕ್ತ ಮಾರ್ಗದರ್ಶನ ನೀಡುವುದರಲ್ಲಿ ವಿಫಲವಾದ ಅಂದಿನ ಅವಿಭಜಿತ ಸಿಪಿಐ ಪಕ್ಷವನ್ನು ಸೇರಿದರು. ಸ್ವಾತಂತ್ರ್ಯ ಸಂಗ್ರಾಮದಿಂದ ಗಳಿಸಿಕೊಂಡ ಪ್ರತಿಭೆಗಳಿದ್ದರೂ ಸಹ ಅವರಲ್ಲಿ ಹೆಚ್ಚಿನವರು ವೈಯಕ್ತಿಕ ವೃತ್ತಿ ಬೆಳೆಸಿಕೊಳ್ಳುವ ಕಡೆಗೆ, ಅಲ್ಲಿಂದ ಹಣ–ಹೆಸರು–ಖ್ಯಾತಿಯ ಕಡೆಗೆ ಸೆಳೆಯಲ್ಪಟ್ಟರು ಮತ್ತು ಕೆಲವರು ನಿರಾಶೆ ಹೊಂದಿದರು.



ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು ಸ್ವಾತಂತ್ರ್ಯ ಚಳುವಳಿಯ ಅಲೆ ಇಳಿದು ನಿಶ್ಚಲತೆಯ ಪ್ರಕ್ರಿಯೆ ಆರಂಭವಾದ ಮೇಲೆ 1948 ರಲ್ಲಿ ನಮ್ಮ ಪಕ್ಷವನ್ನು ಸ್ಥಾಪಿಸಿದರು. ಅಷ್ಟೊತ್ತಿಗೆ ಸಮಾಜದಲ್ಲಿ ನೀತಿ, ನೈತಿಕತೆಗಳ ಅಧಃಪತನ ಆರಂಭವಾಗಿತ್ತು. ಆ ಸಮಯದಲ್ಲಿ ನಮ್ಮ ಪಕ್ಷವು ಒಂದು ಸಾಂಸ್ಕೃತಿಕ ಘಟಕವನ್ನು ಬೆಳೆಸಲು ಚಾಲನೆ ನೀಡಿತು. ಆದರೆ, ಸಮರ್ಥ ಸಂಘಟನಾಕಾರರ ಕೊರತೆಯಿಂದಾಗಿ ಅದು ಬಹಳ ಕಾಲ ಉಳಿಯಲಿಲ್ಲ. ಈಗಲೂ ಆ ಗುಂಪಿನ ಕೆಲವು ಪ್ರಾಮಾಣಿಕ ಮತ್ತು ನಿಷ್ಠಾವಂತ ಸದಸ್ಯರಿದ್ದಾರೆ. ಆದರೆ ಅವರಿಗೆ ವಯಸ್ಸಾಗಿದೆ ಮತ್ತು ದೈಹಿಕ ಸಾಮರ್ಥ್ಯ ಕಡಿಮೆಯಾಗಿದೆ. ಅವರು ನಿಮ್ಮ ಆರಂಭಶೀಲತೆಯನ್ನು ತುಂಬಾ ನಿರೀಕ್ಷೆಯಿಂದ ಸ್ವಾಗತಿಸುತ್ತಾರೆ.

ಕಾಮ್ರೇಡರೇ, ಒಂದು ವಿಷಯವನ್ನು ನಾನು ನಿಮಗೆ ನೆನಪಿಸಬೇಕು; ಸಾಯುತ್ತಿರುವ ಬಂಡವಾಳವಾದದ ಕೊಳೆತ ಹಾಗೂ ಕಲುಷಿತ ವಾತಾವರಣದ ಕಾಲಘಟ್ಟದಲ್ಲಿ ಸ್ವಕೇಂದ್ರಿಯತೆ, ವ್ಯಕ್ತಿವಾದಿ ಧೋರಣೆ, ಅನೈತಿಕತೆ, ಜೀವನದ ಕುರಿತು ಅನೈತಿಕ ಧೋರಣೆ, ಕೆಟ್ಟ ಲೈಂಗಿಕ ಪ್ರವೃತ್ತಿಗಳು ಇಡೀ ಸಮಾಜವನ್ನು ಆವರಿಸಿಕೊಂಡಿರುವಾಗ ಕ್ರಾಂತಿಕಾರಿ ಕಲೆ ಮತ್ತು ಕಲಾವಿದರನ್ನು ಬೆಳೆಸುವುದು ಬಹಳ ಕಷ್ಟ. ಆದರೆ ಅದೇ ಈ ಗಳಿಗೆಯ ತುರ್ತು ಅವಶ್ಯಕತೆಯಾಗಿದೆ. ಇದನ್ನು ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಗಳನ್ನು ಗಹನವಾಗಿ ಅಧ್ಯಯನ ಮಾಡುವ ಮತ್ತು ಅದನ್ನು ಜೀವನದ ಎಲ್ಲಾ ಅಂಶಗಳಲ್ಲೂ ಅಳವಡಿಸಿಕೊಳ್ಳುವ ಮೂಲಕ, ಶೋಷಿತ ವರ್ಗದ ದುಃಖ ದುಮ್ಮಾನಗಳ ಜೊತೆ ಗುರುತಿಸಿಕೊಂಡು, ಅವರೊಡನೆ ಹೆಜ್ಜಾಗಿ ಬೆರೆತು ಹೋಗುವ ಮೂಲಕ ಮತ್ತು ಎಲ್ಲಾ ವರ್ಗ ಹಾಗೂ ಸಮೂಹ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮಾತ್ರ ಸಾಧಿಸಬಹುದು.

ಕಾರ್ಮಿಕ ವರ್ಗದ ಕಲಾವಿದರಾಗ ಬಯಸುವವರು ತಮ್ಮನ್ನು ವ್ಯಕ್ತಿವಾದದ ಸಂಕೋಲೆಗಳಿಂದ ಬಿಡಿಸಿಕೊಳ್ಳಲೇಬೇಕಾದ ಮತ್ತು ಸಾಮೂಹಿಕತೆಯ ಜೊತೆಗೆ ಗುರುತಿಸಿಕೊಳ್ಳಲೇಬೇಕಾದ ಅವಶ್ಯಕತೆಯಿದೆ. ಕಾರ್ಮಿಕ ವರ್ಗದ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕೆಂದರೆ, ಅದು ನಿರಂತರ ಹೋರಾಟವನ್ನು ಬೇಡುತ್ತದೆ. ಕಾರ್ಮಿಕ ವರ್ಗದ ಕಲೆಯೆಂದರೆ, ಅದು ಕೇವಲ ಶೋಷಿತ ಜನತೆಯ ಮೇಲಿನ ದಮನ, ಅವರ ದುಃಖ ದುಮ್ಮಾನಗಳನ್ನು ಮಾತ್ರ ಪ್ರತಿಬಿಂಬಿಸುವುದಲ್ಲ. ಅದು ವಿಮುಕ್ತಿಯ ದಾರಿಯನ್ನೂ ತೋರಿಸುತ್ತದೆ.

ಹಿಂದೆ ಭಕ್ತಿ ಗೀತೆಗಳು, ಜಾನಪದ ಗೀತೆಗಳು, ನೃತ್ಯ, ಜಾನಪದ ನಾಟಕ, ಗೀತೆ, ಚಿತ್ರಕಲೆ, ಶಿಲ್ಪಕಲೆಗಳು ಜನರಿಗೆ ಸ್ಫೂರ್ತಿ ತುಂಬಿ ಧಾರ್ಮಿಕ ಚಳುವಳಿಗೆ ಸಹಾಯ ಮಾಡಿದವು. ಅದೇ ರೀತಿ, ನವೋದಯದ ಕಲಾ ಪ್ರಕಾರಗಳು ಸ್ವಾತಂತ್ರ್ಯ ಚಳುವಳಿಗೆ ಸಹಾಯ ಮಾಡಿದವು; ಅವುಗಳ ವಸ್ತುಗಳು ವಿಭಿನ್ನವಾಗಿದ್ದವು ಮತ್ತು ಸ್ವರೂಪ ಅಭಿವೃದ್ಧಿ ಹೊಂದಿತ್ತು ಎನ್ನುವುದು ನಿಜ. ಇವುಗಳು ಈಗಲೂ ಮನಸ್ಸಿಗೆ ತಟ್ಟುತ್ತವೆ. ಇವುಗಳನ್ನು ಕ್ರಾಂತಿಕಾರಿ ಕಲಾವಿದರು ಅಧ್ಯಯನ ಮಾಡಬೇಕು ಮತ್ತು ಅವುಗಳನ್ನು ಹೊಸ ವಸ್ತುಗಳೊಂದಿಗೆ ಮತ್ತಷ್ಟು ಅಭಿವೃದ್ಧಿಪಡಿಸಲು ಇಂದಿಗೆ ಅವಶ್ಯಕವಾದುದನ್ನು ಅವುಗಳಿಂದ ತೆಗೆದುಕೊಳ್ಳಬೇಕು.

ನನ್ನ ತಿಳುವಳಿಕೆಯ ಪ್ರಕಾರ, ಸಮಾಜದ ಬದಲಾವಣೆಯೊಂದಿಗೆ ಕಲೆಯ ವಸ್ತುವೂ ಬದಲಾಗುತ್ತದೆ; ಆದರೆ ಸ್ವರೂಪವು ತಾನೇ ತಾನಾಗಿ ಬದಲಾಗುವುದಿಲ್ಲ. ಅದಕ್ಕೆ ದಶಕಗಟ್ಟಲೆ ಸಮಯ ಬೇಕು. ಹೀಗೆ ಹಳೆಯ ಸ್ವರೂಪವು ಹೊಸ ಸಾರದೊಂದಿಗೆ ಹೊರಹೊಮ್ಮುತ್ತದೆ.

ಕ್ರಾಂತಿಕಾರಿ ಕಲಾವಿದರು ತುಳಿತಕ್ಕೊಳಗಾದ ಕಾರ್ಮಿಕ ವರ್ಗ ಮತ್ತು ಕ್ರಾಂತಿಕಾರಿ ಸಿದ್ಧಾಂತದ ಬಗ್ಗೆ ಕೇವಲ ಭಾವನಾತ್ಮಕ ಸಂಬಂಧ ಹೊಂದಿದ್ದರೆ ಸಾಕಾಗುವುದಿಲ್ಲ; ಅದೇ ಸಮಯದಲ್ಲಿ ಅವರಿಗೆ ಒಬ್ಬ ಕ್ರಾಂತಿಕಾರಿಯಾಗಿ ತಮ್ಮ ಕಲಾಮಟ್ಟವನ್ನು ನಿರಂತರವಾಗಿ ಉತ್ತಮ ಪಡಿಸಿಕೊಳ್ಳಲು ಶ್ರದ್ಧಾಪೂರ್ವಕ ಸಮರ್ಪಣೆ, ಸಂಪೂರ್ಣ ಬದ್ಧತೆ, ಅವಿರತ ಪ್ರಯತ್ನ ಮತ್ತು ಪರಸ್ಪರ ಕಲಿಯುವ ಮುಕ್ತ ಮನಸ್ಸುಗಳ ಅವಶ್ಯಕತೆ ಇದೆ. ಆಗ ಮಾತ್ರ ನೀವು ಅಗತ್ಯವಾದ ಯಶಸ್ಸನ್ನು ಗಳಿಸಬಹುದು; ಕ್ರಾಂತಿ ಹಾಗೂ ಸಮಾಜಕ್ಕೆ ಸೇವೆ ಸಲ್ಲಿಸಬಹುದು.

ನಿಮಗೆ ಯಶಸ್ಸು ಸಿಗಲೆಂದು ಹಾರೈಸುತ್ತೇನೆ.

**ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಗಳು ಚಿರಾಯುವಾಗಲಿ!**
**ಕಾರ್ಮಿಕ ವರ್ಗದ ಕ್ರಾಂತಿ ಚಿರಾಯುವಾಗಲಿ!**
**ನಿಮ್ಮೆಲ್ಲರಿಗೂ ಕ್ರಾಂತಿಕಾರಿ ಶುಭಾಶಯಗಳು.**
**ಎಲ್ಲರಿಗೂ ಕೆಂಪು ವಂದನೆಗಳು.**

# ಗಾಜಾದ ರಫಾ ಮೇಲಿನ ಇಸ್ರೇಲ್ ದಾಳಿಗೆ ಎಸ್‌ಯುಸಿಐ(ಸಿ) ತೀವ್ರ ಖಂಡನೆ!

## ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರ ಹೇಳಿಕೆ:

ಅಮೆರಿಕಾ ಸಾಮ್ರಾಜ್ಯಶಾಹಿ ಬೆಂಬಲಿತ ಜಿಯೊನಿಸ್ಟ್ ಇಸ್ರೇಲ್, 3 ಲಕ್ಷ ಪ್ಯಾಲೆಸ್ತೀನಿಯನ್ನರ ನೆಲೆಯಾದ ಗಾಜಾದ ದಕ್ಷಿಣ ನಗರವಾದ ರಫಾದ ಮೇಲೆ ಬರ್ಬರ ದಾಳಿ ಎಸಗಿ ಅದನ್ನು ಛಿದ್ರಛಿದ್ರಗೊಳಿಸಿರುವುದನ್ನು ಖಂಡಿಸಲು ಮಾತುಗಳೇ ಸಾಲವು. ಇಸ್ರೇಲ್ ಸೈನ್ಯ, ಈ ನಗರದ 90% ಜನರ ಮನೆಗಳನ್ನು ಧ್ವಂಸಗೊಳಿಸಿದ್ದು, ಇದು ಆಧುನಿಕ ಕಾಲದ ನರಮೇಧ ಮತ್ತು ಜನಾಂಗೀಯ ನಿರ್ನಾಮದ ಅತ್ಯಂತ ಹೇಯ ನಿದರ್ಶನವಾಗಿದೆ. ನಗರದ 85% ಚರಂಡಿ ವ್ಯವಸ್ಥೆ ನಾಶಗೊಂಡಿದ್ದು ಸಾಂಕ್ರಾಮಿಕ ರೋಗಗಳು ಹರಡುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ನಗರದ 12 ವೈದ್ಯಕೀಯ ಕೇಂದ್ರಗಳು ನಿಷ್ಕ್ರಿಯವಾಗಿವೆ. ಒಂದು ಶವದೊಂದಿಗಿದ್ದ ಮೊಬೈಲ್ ಫೋನಿನಲ್ಲಿ ಕಂಡು ಬಂದ ದೃಶ್ಯದಿಂದ ಆಂಬುಲೆನ್ಸ್ ಮೇಲೆ ಸಹ ದಾಳಿಯಾಗಿರುವುದು ತಿಳಿದುಬಂದಿದೆ. 8 ಶಾಲೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗಿವೆ. 100 ಕ್ಕಿಂತ ಹೆಚ್ಚು ಮಸೀದಿಗಳು ಸಂಪೂರ್ಣವಾಗಿ ನಾಶವಾಗಿವೆ ಅಥವಾ ಬಾರಿ ನಷ್ಟಕ್ಕೆ ಒಳಗಾಗಿವೆ. ನಗರದ 24 ಬಾವಿಗಳು ನಾಶವಾಗಿದ್ದು, ಸಹಸ್ರಾರು ಜನರಿಗೆ ಶುದ್ಧ ಕುಡಿಯುವ ನೀರಿನ ಲಭ್ಯತೆ ಇಲ್ಲ. ಈ ದಾಳಿಯಲ್ಲಿ ವರದಿಗಾರರೊಬ್ಬರು ಮೃತ ಪಟ್ಟಿದ್ದು ಮತ್ತಿತರ ಏಳ್ವರು ಗಾಯಗೊಂಡಿದ್ದಾರೆ. ಅತ್ಯಂತ ಮೃಗೀಯ ಸಾಮ್ರಾಜ್ಯಶಾಹಿ ಶಕ್ತಿಯ ಸಂಪೂರ್ಣ ಮಿಲಿಟರಿ ಮತ್ತು ರಾಜತಾಂತ್ರಿಕ ಬೆಂಬಲ ಪಡೆದ ಜನಾಂಗೀಯವಾದಿ ಪ್ರಭುತ್ವವೊಂದು ಹೇಗೆ ಮರಣ ಮೃದಂಗವನ್ನು ಬಾರಿಸಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ; ಇದನ್ನು ಅದು, ವಿಶ್ವದಾದ್ಯಂತದ ಜನರ ಪ್ರತಿಭಟನೆಯನ್ನೂ ಕಡೆಗಣಿಸಿ, ಕೊನೆಗೆ ವಿಶ್ವಸಂಸ್ಥೆ ಹಾಗೂ ಅಂತರರಾಷ್ಟ್ರೀಯ ನ್ಯಾಯಾಲಯದ ಆದೇಶವನ್ನೂ ಉಲ್ಲಂಘಿಸುತ್ತಾ, ಏಕ ಧ್ರುವೀಯ ವಿಶ್ವದಲ್ಲಿ ತನ್ನ ಅಧಿಪತ್ಯವನ್ನು ವಿಸ್ತರಿಸುವ ಸಲುವಾಗಿ ಮಾಡುತ್ತಿದೆ. ವಿಶ್ವದ ಸಾಮ್ರಾಜ್ಯಶಾಹಿ–ವಿರೋಧಿ, ಶಾಂತಿಪ್ರಿಯ ಜನತೆ, ಕೇವಲ ಪ್ರತಿಭಟನೆಯನ್ನು ಮಾತ್ರವೇ ಮಾಡದೆ, ವಿಶ್ವದಾದ್ಯಂತ ಒಂದು ಐಕ್ಯ, ಸಮನ್ವಯೀಕರಿಸಿದ ಪ್ರಬಲ ಸಾಮ್ರಾಜ್ಯಶಾಹಿ–ವಿರೋಧಿ ಆಂದೋಲನವನ್ನು ಕಟ್ಟಲು ಮುಂಬರಲು ಇದು ಸಕಾಲ. ಇದರಿಂದ ಮಾತ್ರವೇ ಪ್ರಬಲ ಸಮಾಜವಾದಿ ಬಣದ ಅನುಪಸ್ಥಿತಿಯಲ್ಲಿ ಈ ಮೃತ್ಯುರೂಪಿ ಶಕ್ತಿಯನ್ನು ಮಣಿಸಲು ಸಾಧ್ಯ. ತಮ್ಮೆಲ್ಲಾ ಶಕ್ತಿಯನ್ನು ಒಗ್ಗೂಡಿಸಿ, ಈ ಹೋರಾಟವನ್ನು ಕಟ್ಟಲು ಮುಂದೆ ಬರುವಂತೆ ನಾವೆಲ್ಲರಿಗೂ ಕರೆ ನೀಡುತ್ತೇವೆ.

# ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲದೊಂದಿಗೆ ಗಾಜ಼ಾದ ಮೇಲೆ ಮುಂದುವರೆದ ನರಮೇಧ



## ಜಿಯೊನಿಸ್ಟ್ ಇಸ್ರೇಲ್‌ನಿಂದ ಯುದ್ಧವಿರಾಮದ ನಿರ್ಲಜ್ಜ ಉಲ್ಲಂಘನೆ

ಗಾಜ಼ಾದಲ್ಲಿ ಧರೆಗುರುಳಿದ ಆಸ್ಪತ್ರೆ, ಶಾಲೆ ಇನ್ನಿತರ ಕಟ್ಟಡಗಳ ಅವಶೇಷದಡಿಯಲ್ಲಿ ಕಾಂಕ್ರೀಟಿನಂತೆ ಕರಗಲಾರದ ಸತ್ಯವೊಂದು ಅಡಗಿದೆ: ಅದು ಕೇವಲ ಯುದ್ಧವಲ್ಲ. ಬಂಡವಾಳಶಾಹಿ ಸಾಮ್ರಾಜ್ಯವಾದದ ಭೀಭತ್ಸತೆಯ ಸಂಕೇತ. ಮೈ ಮರಗಟ್ಟಿಸುವ ಸಾವಿನ ಸಂಖ್ಯೆಗಳು ಶೋಷಣೆಯ ಕ್ರೂರ ಕಥೆಯನ್ನು ಹೇಳುತ್ತವೆ. 50,000 ಕ್ಕೂ ಹೆಚ್ಚು ಪ್ಯಾಲೆಸ್ತೇನಿಯರನ್ನು ಕೊಲ್ಲಲಾಗಿದೆ. ಯುನಿಸೆಫ್ ಪ್ರಕಾರ, ಇಸ್ರೇಲ್‌ನ ಆಕ್ರಮಣಕಾರಿ ಯುದ್ಧ ಆರಂಭವಾದಾಗಿನಿಂದ 14,500 ಕ್ಕೂ ಹೆಚ್ಚು ಮಕ್ಕಳ ಜೀವ ಹೋಗಿದೆ; ಅದು ಪ್ರಪಂಚದೆಲ್ಲೆಡೆ ನಡೆದ ಯುದ್ಧದಲ್ಲಿ ಸತ್ತ ಮಕ್ಕಳಿಗಿಂತ ನಾಲ್ಕು ಪಟ್ಟು ಹೆಚ್ಚು. ಈ ದುರ್ಘಟನೆಗಳು ಅಧಿಕಾರ ಮತ್ತು ಲಾಭಕ್ಕಾಗಿ ಜೀವನವನ್ನೇ ಸರಕನ್ನಾಗಿಸುವ ವ್ಯವಸ್ಥೆಯ ಹೆಗ್ಗುರುತು. ಪ್ಯಾಲೆಸ್ತೇನಿನ ಗಾಜ಼ಾ ಭಾಗವು ಮಕ್ಕಳ ಕತ್ತರಿಸಿದ ಅಂಗಾಂಗಗಳ ಸ್ಮಶಾನವಾಗಿದೆ. ಅದರ ಆರ್ಥಿಕತೆಯು ಅಮೆರಿಕನ್ ತಯಾರಿಕೆಯ ಅಸಂಖ್ಯಾತ 2,000 ಪೌಂಡ್ ತೂಕದ ಬಾಂಬ್‌ಗಳಿಂದ ಸರ್ವನಾಶವಾಗಿದೆ.

ಈ ದಾಳಿಯು ಹೆಚ್ಚುಕಡಿಮೆ ಗಾಜ಼ಾದ ಇಡೀ 2.3 ಕೋಟಿ ಜನಸಂಖ್ಯೆಯನ್ನು ಆಂತರಿಕವಾಗಿ ಸ್ಥಳಾಂತರ ಮಾಡಿಸಿದೆ ಮತ್ತು ಹಸಿವಿನ ಹಾಹಾಕಾರವನ್ನು ಸೃಷ್ಟಿಸಿದೆ. ಈಗಲೂ ಅವಶೇಷಗಳಡಿಯಲ್ಲಿ ಅಸಂಖ್ಯಾತ ಜನರು ಸಿಲುಕಿದ್ದಾರೆ. ಅದು ಕೇವಲ ಆಕಸ್ಮಿಕ ನಷ್ಟವಲ್ಲ, ಬದಲಿಗೆ ಅಮೆರಿಕಾ ಮತ್ತು ಮಧ್ಯ ಪೂರ್ವದಲ್ಲಿ ಅದರ ಕಾರ್ಯಾಚರಣೆಯ ಕಚೇರಿಯಂತಿರುವ ಇಸ್ರೇಲ್ ಸಾಮ್ರಾಜ್ಯಶಾಹಿ ತಿಮಿಂಗಿಲಗಳು ನಡೆಸಿದ ಯಜಮಾನಿಕೆ, ಗೂಂಡಾಗಿರಿ ಮತ್ತು ನಗ್ನ ಯೋಜಿತ ಮಿಲಿಟರಿ ದಾಳಿ.

ಈ ವ್ಯವಸ್ಥಿತವಾಗಿ ನಡೆಸಿದ ರಕ್ತಪಾತಕ್ಕೆ ಕಾರಣಕರ್ತನಾದ ಅಮೆರಿಕನ್ ಸಾಮ್ರಾಜ್ಯವಾದವು ಸಾಮ್ರಾಜ್ಯಶಾಹಿ ದರೋಡೆಯ ಚಾಲಕಶಕ್ತಿಯಾಗಿ ಕೆಲಸ ಮಾಡತ್ತಿದೆ. ಕಳೆದ 2023 ರ ಅಕ್ಟೋಬರ್‌ನಿಂದ ಅಂದಿನ ಬಿಡೆನ್ ಆಡಳಿತವು 2,000 ಪೌಂಡ್ ಬಾಂಬ್‌ಗಳನ್ನು ಇಸ್ರೇಲಿಗೆ ತ್ವರಿತ ರವಾನೆ ಮಾಡಿತು; ಅವುಗಳು ಶಸ್ತ್ರಾಸ್ತ್ರ ತಯಾರಿಸುವ ಲಾಕ್‌ಹೀಡ್ ಮತ್ತು ರೆಥಿಯಾನ್ ಕಾರ್ಪೊರೇಟ್ ಕಂಪೆನಿಗಳು ತಯಾರಿಸಿದ್ದು. ಮಿಲಿಟರಿ ಶಸ್ತ್ರಾಸ್ತ್ರಗಳನ್ನು ಮಾರುವ ಮೂಲಕ ಅವುಗಳ ಲಾಭ ಆಕಾಶದೆತ್ತರಕ್ಕೆ ಏರಿದೆ; ಗಾಜ಼ಾದಲ್ಲಿ ಬೆಂಕಿಯ ಕೆನ್ನಾಲಿಗೆ ಮೇಲೇರಿದಷ್ಟೂ ಅವುಗಳ ಷೇರುಗಳ ಬೆಲೆ ಏರಿತು. ಅಲ್ಲಿ ಹಾಕಿದ ಪ್ರತಿ ಬಾಂಬ್‌ಗೆ ಷೇರುದಾರರು ಲಾಭ ಸ್ವೀಕರಿಸಿದರು. ಆರ್ಥಿಕತೆಯ ಮಿಲಿಟರೀಕರಣದ ಮೂಲಕ ಲಾಭಗಳಿಸುವ ಸಾಮ್ರಾಜ್ಯಶಾಹಿ ಬಯಕೆಯು ಮಾನವೀಯತೆಯ ಕುರುಹನ್ನೂ ಉಳಿಸಿಲ್ಲ.

### ಯುದ್ಧವಿರಾಮ

ಅಮೆರಿಕಾದ ಬೆಂಬಲದೊಂದಿಗೆ ಇಸ್ರೇಲ್ ನಡೆಸುತ್ತಿರುವ ಬರ್ಬರ ಮಿಲಿಟರಿ ದಾಳಿಯು ಪ್ರಪಂಚದೆಲ್ಲೆಡೆ ಉಗ್ರ ಖಂಡನೆಗೆ ಗುರಿಯಾಗಿದೆ; ಇದರಿಂದಾಗಿ ಜಿಯೋನಿಸ್ಟ್ ಇಸ್ರೇಲ್ ಒಲ್ಲದ ಮನಸಿನಿಂದ ಪ್ಯಾಲೆಸ್ತೇನಿನ ಸಶಸ್ತ್ರ ಹೋರಾಟದ ತಂಡ ಹಮಾಸ್ ಜೊತೆ ತಾತ್ಕಾಲಿಕ ಯುದ್ಧವಿರಾಮಕ್ಕೆ ಒಪ್ಪಿಗೆ ನೀಡಿತು. ಒತ್ತೆಯಾಳು ಹಾಗೂ ಬಂಧಿತರನ್ನು ವಿನಿಮಯ ಮಾಡಿಕೊಳ್ಳಲು ಒಪ್ಪಿತು. 2025 ರ ಜನವರಿ 19 ರಿಂದ ಮಾರ್ಚ್ 18 ರವರೆಗೆ ಯುದ್ಧವಿರಾಮವೆಂದು ನಿರ್ಧಾರವಾಗಿತ್ತು. ಯುದ್ಧವನ್ನು ಖಾಯಂ ಆಗಿ ನಿಲ್ಲಿಸಲು ಮತ್ತು ಹಮಾಸ್‌ನ ಒತ್ತೆಯಾಳುಗಳನ್ನು ಇಸ್ರೇಲ್ ಹಿಡಿದಿಟ್ಟುಕೊಂಡಿದ್ದ ಪ್ಯಾಲೆಸ್ತೇನ್ ಬಂಧಿಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ದಾರಿ ಮಾಡಿಕೊಟ್ಟ ಯುದ್ಧವಿರಾಮಕ್ಕಾಗಿ ಖತಾರ್ ಮತ್ತು ಈಜಿಪ್ಟ್ ದೇಶಗಳು ತಿಂಗಳುಗಟ್ಟಲೆ ಓಡಾಡಬೇಕಾಯಿತು. ಅದರಂತೆ ಒತ್ತೆಯಾಳುಗಳ ವಿನಿಮಯವು 42 ದಿನಗಳ ಕಾಲ ಮುಂದುವರೆಯಿತು. ಅದರಿಂದಾಚೆಗೆ, ಯುದ್ಧವಿರಾಮವನ್ನು ಖಾಯಂ ಮಾಡಬೇಕು; ಗಾಜ಼ಾದಲ್ಲಿ ಉಳಿದಿರುವ ಜೀವಂತ ಒತ್ತಾಯಾಳುಗಳನ್ನು ಮತ್ತಷ್ಟು ಪ್ಯಾಲೆಸ್ತೇನ್ ಬಂಧಿಗಳಿಗೊಂದಿಗೆ ವಿನಿಮಯ ಮಾಡಿಕೊಳ್ಳಬೇಕು; ಇಸ್ರೇಲ್ ಪಡೆಗಳನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕು ಎಂದು ನಿರ್ಧಾರವಾಯಿತು. ಒಂದನೇ ಘಟ್ಟ ಮುಗಿದಾಗ, ಮಾರ್ಚ್ 1 ರಿಂದ ಯುದ್ಧವಿರಾಮವು ತ್ರಿಶಂಕು ಸ್ಥಿತಿಯಲ್ಲಿತ್ತು.

### ಇಸ್ರೇಲ್ ಯುದ್ಧವಿರಾಮದ ಷರತ್ತುಗಳನ್ನು ಮುರಿಯಿತು ಮತ್ತು ಗಾಜ಼ಾ ಮೇಲೆ ಮತ್ತೆ ದಾಳಿ ನಡೆಸಿತು

ಆದರೆ ಒಪ್ಪಂದವನ್ನು ಏಕಪಕ್ಷೀಯವಾಗಿ ಉಲ್ಲಂಘಿಸಿ ಗಾಜ಼ಾದಲ್ಲಿ ನರಮೇಧ ನಡೆಸಿದ ಇಸ್ರೇಲ್ ಹೀನಕೃತ್ಯದ ಆಘಾತಕಾರಿ ಸುದ್ದಿ ಪ್ರಪಂಚವನ್ನು ಬಡಿದೆಬ್ಬಿಸಿತು. ಮತ್ತೆ ಆರಂಭಿಸಿದ ವೈಮಾನಿಕ ದಾಳಿಗಳು ಮಾಧ್ಯಮಗಳ ವರದಿಯ ಪ್ರಕಾರ ಒಂದೇ ದಿನದಲ್ಲಿ 500 ಪ್ಯಾಲೆಸ್ತೇನಿಯರನ್ನು ಕೊಂದಿವೆ. ಬಾಂಬ್ ಸುರಿಮಳೆ ಮುಂದುವರೆದು ನಿರಾಶ್ರಿತರ ಶಿಬಿರವನ್ನಷ್ಟೇ ಅಲ್ಲ, ಏಕೈಕ ಕ್ಯಾನ್ಸರ್ ಆಸ್ಪತ್ರೆಯನ್ನೂ ಸಹ ಬಿಡದೆ ಉರುಳಿಸಿತು. ಗಾಜ಼ಾದ ಪಶ್ಚಿಮ ಭಾಗದಲ್ಲಿ ವಿಶೇಷ ಅವಶ್ಯಕತೆಗಳ ಅಗತ್ಯವಿದ್ದ ಮಹಿಳೆಯೂ ಸೇರಿದಂತೆ ನಾಗರೀಕರ ಗುಂಪಿನ ಮೇಲೆ ಅಲ್–ರಂತಿಸಿ ಮಕ್ಕಳ ಆಸ್ಪತ್ರೆಯ ಮುಂದೆ ದಾಳಿ ಮಾಡಲಾಯಿತು. ಇದರ ಜೊತೆ, ನಿರಾಶ್ರಿತ ಕುಟುಂಬಗಳಿಗೆ ಆಶ್ರಯ ನೀಡಿದ್ದ ಗಾಜ಼ಾ ನಗರದ ದರಾಜ್‌ನಲ್ಲಿದ್ದ ಅಲ್–ತಬಿನ್ ಶಾಲೆ ಮತ್ತು ರಫಾ ನಗರದ ಪಶ್ಚಿಮ ವಾಯುವ್ಯ ಭಾಗದ ದರ್ ಅಲ್–ಫದಿಲ ಶಾಲೆ – ಎರಡೂ ಶಾಲೆಗಳ ಮೇಲೆ ತೀವ್ರ ಬಾಂಬ್ ದಾಳಿ ನಡೆಸಿದರು.

ನಿರಾಶ್ರಿತರ ಶಿಬಿರಗಳು ಹಮಾಸ್‌ನ ವಾಸಸ್ಥಾನವಾಗಿವೆ ಎಂದು ಇಸ್ರೇಲ್ ಹೇಳುತ್ತದೆ; ಆದರೆ ವಾಸ್ತವದಲ್ಲಿ, ಅವುಗಳು ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ನಡೆಸುತ್ತಿದ್ದ ನಿರಂತರ ಘೋರ ದಾಳಿಗಳಿಗೆ ಪ್ರತಿಯಾಗಿ 2021 ರಲ್ಲಿ ರಚನೆಯಾಗಿದ್ದ ಸಶಸ್ತ್ರ ಪಡೆಗಳು. ಅವುಗಳು ಯಾವ ರೀತಿಯಲ್ಲೂ ಇಸ್ರೇಲ್‌ಗೆ ಅಪಾಯಕಾರಿಯಲ್ಲ. ಆದರೂ ಇಸ್ರೇಲ್ ಪ್ರಭುತ್ವವು ನಿರಾಶ್ರಿತರ ಶಿಬಿರದ ಮೇಲೆ ದಾಳಿ ಮಾಡಲು ಅದನ್ನು ಕುಂಟುನೆಪವಾಗಿ ಉಪಯೋಗಿಸಿಕೊಳ್ಳುತ್ತದೆ. ದುರುಂತವೆಂದರೆ, ಹಲವಾರು ವರ್ಷಗಳಿಂದ ನೂರಾರು ಪ್ಯಾಲೆಸ್ತೇನಿಯರ ಹೆಣಗಳನ್ನು ಮುಂದಿಟ್ಟುಕೊಂಡು ಚೌಕಾಸಿ ಮಾಡುವ ಕೊಳಕು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವುದು ಇಸ್ರೇಲ್. ಈ ದಾಳಿಗಳು ಮಾನವೀಯತೆಯನ್ನು ಬಿಕ್ಕಟ್ಟಿಗೆ ತಳ್ಳಿವೆ. ಅಲ್ಲಿ ತೈಲವಿಲ್ಲದ ಕಾರಣ ಗಾಯಗೊಂಡವರು ಆಸ್ಪತ್ರೆಗೆ ತಲುಪಲು ಸಾಧ್ಯವಾಗದೆ ದಾರಿಯಲ್ಲಿ ಸಾಯುತ್ತಿದ್ದಾರೆ. ಇದಿಷ್ಟೇ ಅಲ್ಲದೆ, ಇಸ್ರೇಲ್‌ನ ಶಕ್ತಿ ಸಚಿವರು ಗಾಜ಼ಾ ನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಲು ಮಾರ್ಚ್ 9 ರಂದು ಆದೇಶ ಹೊರಡಿಸಿದರು. ಇದರಿಂದ ಇಡೀ ನಗರ ನರಳಿದ್ದಷ್ಟೇ ಅಲ್ಲದೆ, ಅಲ್ಲಿಗೆ ಕುಡಿಯುವ ನೀರನ್ನು ಉತ್ಪಾದಿಸುತ್ತಿದ್ದ ಘಟಕದ ಮೇಲೆ ತೀವ್ರ ಪರಿಣಾಮ ಬೀರಿತು. ಇಂತಹ ಕ್ರೂರ ನಡೆಗಳು ವಿಶ್ವಸಂಸ್ಥೆ ಮತ್ತು ಪ್ರಪಂಚದಾದ್ಯಂತ ದೇಶಗಳು ನ್ಯಾಯಕ್ಕಾಗಿ ಕೂಗೆಬ್ಬಿಸುವಂತೆ ಮಾಡಿವೆ.

### ಮುಂದುವರೆಯುತ್ತಿರುವ ಇಸ್ರೇಲ್‌ನ ನಿರ್ಲಜ್ಜ ಸಮರ್ಥನೆ

ಕೆಟ್ಟ ನಿರಂಕುಶಾಧಿಕಾರಿಗಳಂತೆ ಜ಼ಿಯೊನಿಸ್ಟ್ ಇಸ್ರೇಲ್ ಹೀಗೆ ಎಚ್ಚರಿಕೆ ಕೊಟ್ಟಿದೆ – ಅವರ ದಾಳಿಯು ಅವಶ್ಯಕತೆ ಇರುವವರೆಗೂ ಮುಂದುವರೆಯುತ್ತದೆ ಮತ್ತು ವೈಮಾನಿಕ ದಾಳಿಯಿಂದಾಚೆಗೂ ಹೋಗುತ್ತದೆ; ಮತ್ತೆ ಹೊಸದಾಗಿ ನೆಲದ ಮೇಲೆ ಮಿಲಿಟರಿ ದಾಳಿ ನಡೆಸುತ್ತೇವೆ ಎನ್ನುವ ಅರ್ಥ ಕೊಡುತ್ತದೆ. ಇಸ್ರೇಲ್ ಗಾಜ಼ಾಗೆ ಆಹಾರ, ತೈಲ, ಔಷಧಗಳಂತಹ ಮಾನವೀಯ ನೆರವುಗಳು ಸಿಗದಂತೆ ಗಾಜ಼ಾ ನಗರವನ್ನು ಸುತ್ತಲೂ ಬಂದ್ ಮಾಡಿದೆ. ಇಸ್ರೇಲ್ ದಾಳಿ ಮಾಡುವ ಮುನ್ನ ಅಮೆರಿಕಾದ ಸಲಹೆ ತೆಗೆದುಕೊಳ್ಳುತ್ತಿತ್ತು ಎಂದು ವರದಿಯಾಗಿದೆ. ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಾಜ಼ಾದ ಬಗ್ಗೆ ಮಾತನಾಡುವಾಗ, ಅದನ್ನು ಧ್ವಂಸ ಮಾಡಬೇಕಾದ ಜಾಗ, ಸಂಪೂರ್ಣವಾಗಿ ಸ್ವಚ್ಛ ಮಾಡಬೇಕೆಂದು ಹೇಳಿದಾಗ, ಅವರ ಬಾಯಿಂದ ಹೊರಗೆ ಬರದ ಮಾತುಗಳೇನು ಎಂದು ಯಾರಿಗೂ ಸರಿಯಾಗಿ ತಿಳಿಯಲಿಲ್ಲ. ಆದರೆ, ಅಮೆರಿಕಾಗೆ ಭೇಟಿ ನೀಡಿದ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಅವರನ್ನು ತಮ್ಮ ಶ್ವೇತ ಭವನದ 'ಓವೆಲ್ ಆಫೀಸ್' ನಲ್ಲಿ ಭೇಟಿಯಾಗುವ ಮುನ್ನ ಟ್ರಂಪ್ ಅವರು ಆಡಿದ ಮಾತುಗಳನ್ನು ಅವಲೋಕಿಸಿದರೆ ತಮ್ಮ ಪ್ರಸ್ತಾವಗಳ ಬಗ್ಗೆ ಟ್ರಂಪ್ ಬಹಳ ಗಂಭೀರವಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಟ್ರಂಪ್ ಅದೇ ರೀತಿಯ ಮಾತುಕತೆಗಳಿಂದ ಮುಂಚೆಯೂ ಸಾರ್ವಜನಿಕವಾಗಿ ಎಚ್ಚರಿಕೆ ನೀಡಿದ್ದರು: ಹಮಾಸ್ ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಬೇಕು, ಇಲ್ಲಾವದರೆ "ನರಕ ತೋರಿಸುತ್ತೇವೆ. ಇದು ನಿಮಗೆ ಕೊಡುವ ಕಡೆಯ ಎಚ್ಚರಿಕೆ! ನಿಮಗಿನ್ನೂ ಅವಕಾಶವಿದೆ, ನಾಯಕರು ಗಾಜ಼ಾ ಬಿಟ್ಟು ಹೋಗಬೇಕು... ಗಾಜ಼ಾ ಜನರೇ, ನಿಮಗೊಂದು ಸುಂದರ ಭವಿಷ್ಯ ಕಾದಿದೆ. ಆದರೆ ಒತ್ತೆಯಾಳುಗಳನ್ನು ಬಿಡದಿದ್ದರೆ ಭವಿಷ್ಯ ಸುಂದರವಾಗಿರುವುದಿಲ್ಲ. ಒತ್ತೆಯಾಳುಗಳನ್ನು ಬಿಡದಿದ್ದರೆ ನೀವು ಸತ್ತಂತೆ. ಒಳ್ಳೆಯ ನಿರ್ಧಾರಕ್ಕೆ ಬನ್ನಿ." ಟ್ರಂಪ್‌ನ ಸ್ಥಳೀಯ ಜನರನ್ನು ಗುಡಿಸಿ ಹಾಕುವ ಪ್ರಸ್ತಾಪದಡಿಯಲ್ಲಿ ಗಾಜ಼ಾ ಜನರಿಗೆ ಸುಂದರ ಭವಿಷ್ಯದ ಭರವಸೆ ನೀಡಿದ್ದು ಹೇಗೆ ಎನ್ನುವುದು ಸ್ಪಷ್ಟವಾಗಿಲ್ಲ. ತನ್ನ ಪ್ರಸ್ತಾಪದಲ್ಲಿ ಟ್ರಂಪ್ ಪ್ಯಾಲೆಸ್ತೇನ್ ಜನರು ವಾಪಸ್ ತಮ್ಮ ನೆಲೆಗೆ ಹೋಗಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಸಾವಿರಾರು ಮಕ್ಕಳನ್ನು ಬೇಕೆಂದೇ ಕೊಂದಿರುವುದು ಅವರ ಸ್ಥಳೀಯ ಜನರ ನಿರ್ನಾಮದ ಹೀನವಿನ್ಯಾಸದ ಒಂದು ಭಾಗ. ಇಡೀ ಪ್ರಪಂಚವನ್ನು ತನ್ನ ಪಾಳಯವೆಂದು ತಿಳಿದ ಮತ್ತು ಇಡೀ ಪ್ರಪಂಚದ ಜನ ತನ್ನ ಮುಂದೆ ಮಂಡಿಯೂರ ಬೇಕೆನ್ನುವ ಒಬ್ಬ ದುಷ್ಟ, ಅಮಾನುಷ ಮತ್ತು ಯುದ್ಧಪಿಪಾಸು ಟ್ರಂಪ್‌ನ ಒಳ್ಳೆಯ ಚಿತ್ರಣವಾದರೂ ಹೇಗೆ ಸಿಗಬಹುದು!

### ಹಮಾಸ್‌ನ ದೃಷ್ಟಿಕೋನ

ಇನ್ನೊಂದು ಕಡೆ ಹಮಾಸ್ ತಾವು "ಯುದ್ಧವಿರಾಮ ಒಪ್ಪಂದಕ್ಕೆ ಬದ್ಧರಾಗಿದ್ದೇವೆ ಮತ್ತು ಅದನ್ನೇ ಜಾರಿ ಮಾಡಿದ್ದೇವೆ; ಆದರೆ ಇಸ್ರೇಲ್ ಅತಿಕ್ರಮಣವು ಅದರ ಬದ್ಧತೆಯನ್ನು ಬಿಟ್ಟಿದೆ ಮತ್ತು ಆಕ್ರಮಣ, ದಾಳಿಗಳಿಂದ ಒಪ್ಪಂದಕ್ಕೆ ವಿರುದ್ಧವಾಗಿ ಹೋಗಿದೆ. ಹಮಾಸ್ ಮತ್ತು ಪ್ರತಿರೋಧ ಪಡೆಗಳು ನಿರಂತರವಾಗಿ ಮಾತುಕತೆ ನಡೆಸಿವೆ ಮತ್ತು ಆಕ್ರಮಣವನ್ನು ನಿಲ್ಲಿಸಲು ಮಧ್ಯವರ್ತಿಗಳ ಜೊತೆ ವ್ಯವಹರಿಸುತ್ತಿದ್ದೇವೆ" ಎಂದು ಹೇಳುತ್ತದೆ. ಇದಕ್ಕೆ ಸೇರಿದಂತೆ, ಇಸ್ರೇಲ್ ಯುದ್ಧವಿರಾಮವನ್ನು ಉಲ್ಲಂಘಿಸದಿದ್ದರೆ ಮಾತ್ರ ಯುದ್ಧವಿರಾಮದ ಷರತ್ತಗಳಿಗೆ ಅನುಗುಣವಾಗಿ ಒತ್ತೆಯಾಳುಗಳನ್ನು ಅಂತಿಮವಾಗಿ ವಿನಿಮಯ ಮಾಡಿಕೊಳ್ಳಬಹುದು ಎಂದು ಹೇಳಿದೆ. ಎರಡೂ ಕಡೆಗಳು ಒಪ್ಪಂದಕ್ಕೆ ಬಂದಾಗ, ಮೊದಲನೆ ಘಟ್ಟ ಮುಗಿದ ಮೇಲೆ ವೈರತ್ವವನ್ನು ಸಾಧಿಸುವುದಿಲ್ಲವೆಂದು ಬರವಣಿಗೆಯಲ್ಲಿ ಕೊಡಲು ಇಸ್ರೇಲ್ ಒಪ್ಪಲಿಲ್ಲ.

ಅಷ್ಟಾದರೂ ಸಹ, ಇಸ್ರೇಲ್ ಮತ್ತೆ ಪ್ಯಾಲೆಸ್ತೇನಿಯರ ಮೇಲೆ ನರಮೇಧವನ್ನು ಪುನಃ ಆರಂಭಿಸುವುದಿಲ್ಲ ಎನ್ನುವ ಮಧ್ಯವರ್ತಿಗಳಾದ ಈಜಿಪ್ಟ್, ಖತಾರ್ ಮತ್ತು ಅಮರಿಕಾ ದೇಶಗಳ ಬರಿಮಾತಿನ ಆಶ್ವಾಸನೆಗಳಿಗೆ ಹಮಾಸ್ ಒಪ್ಪಿಕೊಂಡಿತು. ಆದರೆ ಇಸ್ರೇಲ್ ಯುದ್ಧವನ್ನು ಖಾಯಂ ಆಗಿ ಕೊನೆಯಾಗಿಸುವ ಮಾತುಗಳಿಗೆ ಬೀಗ ಹಾಕಿತು; ಅಮೆರಿಕಾ–ಇಸ್ರೇಲ್ ಮಾತುಕತೆಗಳ ಬಗ್ಗೆ ಚೆನ್ನಾಗಿ ತಿಳಿದಿದ್ದ ವ್ಯಕ್ತಿಯು "ಯುದ್ಧ ಆರಂಭವಾದರೆ ಡೊನಾಲ್ಡ್ ಟ್ರಂಪ್ ತಲೆಕೆಡಿಸಿಕೊಳ್ಳುವುದಿಲ್ಲ" ಎಂದು ಇಂಗ್ಲೆಂಡಿನ ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಗೆ ಹೇಳಿದರು. ಮಧ್ಯವರ್ತಿಗಳಲ್ಲಿ ಒಂದಾದ ಖತಾರ್ ಸ್ಪಷ್ಟವಾಗಿ ಹೇಳಿತು: ಇಸ್ರೇಲ್ ಸ್ಪಷ್ಟವಾಗಿ ಯುದ್ಧವಿರಾಮದ ಒಪ್ಪಂದವನ್ನು ಮತ್ತು ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುತ್ತಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಭಾರತದ ಬಿಜೆಪಿ ಸರ್ಕಾರ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಅಸಮಾಧಾನವಾಗುತ್ತದೆ ಮತ್ತು ಸಾಮ್ರಾಜ್ಯಶಾಹಿ ಸೂಪರ್ ಶಕ್ತಿಯ ಸ್ಪರ್ಧೆಯಲ್ಲಿ ಹಿಂದೆ ಬೀಳಬೇಕಾಗುತ್ತದೆ ಎಂದು ತುಟಿ ಬಿಗಿಹಿಡಿದು ಕುಳಿತಿದೆ.

### ಸಾಮ್ರಾಜ್ಯಶಾಹಿ ರಕ್ತದಾಹ ಮತ್ತು ಗೂಂಡಾಗಿರಿಗಳಿಗೆ ಅಡೆತಡೆ ಇಲ್ಲ

ಇಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ, ಮನುಕುಲದ ಮಹಾವೈರಿ ರಕ್ತಪಿಪಾಸು ಜ಼ಿಯೊನಿಸ್ಟ್ ಇಸ್ರೇಲ್ ಆಳ್ವಿಕರು ಮತ್ತು ಅದರ ಪೋಷಕನಾದ ಅಮೆರಿಕನ್ ಸಾಮ್ರಾಜ್ಯವಾದ ಅಂತಹ ಅಮಾನವೀಯ ಕೃತ್ಯಗಳನ್ನು ಅಡೆತಡೆಯಿಲ್ಲದೆ ನಡೆಸಲು ಅವಕಾಶ ನೀಡಬೇಕೆ? ವಿಶ್ವಶಾಂತಿ ಬಯಸುವವರಾಗಿ ನಾವು ಸಾಮ್ರಾಜ್ಯವಾದಿ ಕಟುಕರು ನಮ್ಮ ಸೋದರರ, ತಾಯಂದಿರ, ಸೋದರಿಯರ, ಮುದ್ದು ಮಕ್ಕಳ ವಧೆ ಮಾಡುವುದನ್ನು ನೋಡಿಕೊಂಡು ಮೂಕಪ್ರೇಕ್ಷಕರಾಗಬೇಕೆ? ಹಾಗೆ ಮಾಡಲು ನಮ್ಮ ಆತ್ಮಸಾಕ್ಷಿ ಬಿಡುತ್ತದೆಯೇ? ಖಂಡಿತ ಇಲ್ಲ. ತಮ್ಮ ರಕ್ತದಾಹದಿಂದ ಮತ್ತು ತೆರೆದ ಬಂದೂಕುಗಳಿಂದ ಕಟುಕರು ಅಟ್ಟಹಾಸದಿಂದ ಮೆರೆಯಬಹುದು; ಆದರೆ ಸಾಮ್ರಾಜ್ಯಶಾಹಿ–ಬಂಡವಾಳಶಾಹಿಯ ನಿರ್ದಯ ದಮನಕ್ಕೊಳಗಾದ ಇಡೀ ಮನುಕುಲವೇ ಎದ್ದು ನಿಲ್ಲುತ್ತದೆ, ಅಂತಿಮವಾಗಿ ಜನರ ಮಾತೇ ನಡೆಯುವುದು ಎಂದು ಸಾಬೀತುಪಡಿಸುತ್ತದೆ.

ಒಮ್ಮೆ ಯುದ್ಧಪಿಪಾಸು ಸಾಮ್ರಾಜ್ಯಶಾಹಿ ವಿರುದ್ಧ ಭದ್ರಕೋಟೆಯಾಗಿದ್ದ ಶಕ್ತಿಶಾಲಿ ಸಮಾಜವಾದಿ ಶಿಬಿರ ಇದ್ದಾಗ ಸಾಮ್ರಾಜ್ಯಶಾಹಿಗಳಿಗೆ ಅಂತಹ ಘೋರ ಕೃತ್ಯಗಳನ್ನು ನಡೆಸುವ ಧೈರ್ಯ ಬರುತ್ತಿರಲಿಲ್ಲ. ಸುಯೆಜ಼್ ಕಾಲುವೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು 1956 ರಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿ ಶಕ್ತಿಗಳು ಈಜಿಪ್ಟ್ ಮೇಲೆ ಯುದ್ಧ ಆರಂಭಿಸಿದವು. ಆಗ ಸೋವಿಯತ್ ಒಕ್ಕೂಟ 48 ಗಂಟೆಗಳಲ್ಲಿ ತಮ್ಮ ಪಡೆಗಳನ್ನು ವಾಪಸ್ ತೆಗೆದುಕೊಳ್ಳದಿದ್ದರೆ ಲಂಡನ್ ಮತ್ತು ಪ್ಯಾರಿಸ್ ನಗರಗಳ ಮೇಲೆ ಬಾಂಬ್ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿತು. ತಕ್ಷಣವೇ ಸಾಮ್ರಾಜ್ಯಶಾಹಿ ಮಹಾಶಕ್ತಿಗಳು ಬಾಲಮುದುರಿಕೊಂಡು ವಾಪಸ್ ಹೋದವು. ಸೋವಿಯತ್ ಒಕ್ಕೂಟದಲ್ಲಿ ಪ್ರತಿಕ್ರಾಂತಿ ಸಂಭವಿಸಿದ್ದರಿಂದ ಆಗಿರುವ ತಾತ್ಕಾಲಿಕ ಹಿನ್ನಡೆಯಿಂದಾಗಿ ಈಗ ಸೋವಿಯತ್ ಮಹಾಶಕ್ತಿ ಅಸ್ತಿತ್ವದಲ್ಲಿ ಇಲ್ಲದಿರುವುದೊಂದು ದುರಂತ!

ಸಮಾಜವಾದ ಮತ್ತೆ ಹೊಸಶಕ್ತಿಯೊಂದಿಗೆ ಬರುವವರೆಗೂ, ಯುದ್ಧಪಿಪಾಸು, ಕೊಲೆಗಾರ ಸಾಮ್ರಾಜ್ಯಶಾಹಿ ರಕ್ಕಸರ ಕುಕೃತ್ಯಗಳನ್ನು ವಿಶ್ವದ ಎಲ್ಲಾ ಸಾಮ್ರಾಜ್ಯವಾದ ವಿರೋಧಿ, ಯುದ್ಧ ವಿರೋಧಿ, ಶಾಂತಿಪ್ರಿಯ ಜನರು ಒಂದಾಗಿ ಮುನ್ನುಗ್ಗುವ ಮೂಲಕ ಮಾತ್ರವೇ ತಡೆಯಲು ಸಾಧ್ಯ. ಹಾಗಾಗಿ ಅಮೆರಿಕಾ ಬೆಂಬಲಿತ ಯುದ್ಧಕೋರ ಇಸ್ರೇಲ್ ದಾಳಿಯ ವಿರುದ್ಧದ ಚಳುವಳಿಯು ತಮ್ಮ ತಾಯ್ನಾಡಿಗಾಗಿ ನ್ಯಾಯಬದ್ಧವಾಗಿ ಹೋರಾಡುತ್ತಿರುವ ಪ್ಯಾಲೆಸ್ತೇನರ ಜೊತೆ ಒಂದಾಗಿ ನಿಲ್ಲಬೇಕು. ಇಸ್ರೇಲ್ ಕೂಡಲೇ ಆಕ್ರಮಿಸಿಕೊಂಡಿರುವ ಪ್ಯಾಲೆಸ್ತೇನ್ ನೆಲೆಯಿಂದ ಹೊರಬರಬೇಕು ಮತ್ತು ಪ್ಯಾಲೆಸ್ತೇನ್ ಅನ್ನು ಸ್ವತಂತ್ರ ಸಾರ್ವಭೌಮ ರಾಷ್ಟ್ರವೆಂದು ಒಪ್ಪಿಕೊಳ್ಳಬೇಕು.

### 6,000 ಸರಕಾರಿ ಶಾಲೆಗಳನ್ನು ಮುಚ್ಚುವ ನಿರ್ಧಾರದ ವಿರುದ್ಧ

# ರಾಜ್ಯಮಟ್ಟದ ಸಮಾವೇಶ




ಕರ್ನಾಟಕ ರಾಜ್ಯ ಸರ್ಕಾರ ಹಬ್ ಅಂಡ್ ಸ್ಪೋಕ್ / ಸಂಯೋಜನೆ ಹೆಸರಿನಲ್ಲಿ 6,000 ಕ್ಕೂ ಹೆಚ್ಚು ಸರಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವುದನ್ನು ಖಂಡಿಸಿ, ಸಾರ್ವಜನಿಕ ಶಿಕ್ಷಣ ಉಳಿಸಲು, ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸುವಂತೆ ಹೋರಾಟದ ರೂಪುರೇಷೆ ನಿರ್ಧರಿಸಲು ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿ ವತಿಯಿಂದ 4 ಮೇ 2025ರಂದು ನಗರದ ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಹಾಲ್‌ನಲ್ಲಿ ರಾಜ್ಯಮಟ್ಟದ ಕಾರ್ಯಕರ್ತರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಭಾಷಣಕಾರರಾಗಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿಗಳಾದ ಅಜಯ್ ಕಾಮತ್ ರವರು ಮಾತನಾಡಿ, ಸರ್ಕಾರಿ ಶಾಲೆ ಮುಚ್ಚುವುದರಿಂದ ಯಾರಿಗೆ ಲಾಭ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಿದೆ. ಸರ್ಕಾರಿ ಶಾಲೆಗಳಲ್ಲಿರುವ ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಮಕ್ಕಳ ಭವಿಷ್ಯದ ಕುರಿತು ಪೋಷಕರಲ್ಲಿರುವ ಭಯವನ್ನು ಬಳಸಿಕೊಂಡು ಖಾಸಗಿ ಶಾಲೆಗಳು ಲಾಭ ಮಾಡಿಕೊಳ್ಳುತ್ತಿವೆ. ಇದಕ್ಕೆ ಸರ್ಕಾರಗಳು ಕುಮ್ಮಕ್ಕು ನೀಡುತ್ತಿವೆ. ಕೆಲವರ ಲಾಭಕ್ಕೋಸ್ಕರ, ಸರಕಾರಿ ಶಾಲೆಗಳ ಪತನವಾಗುತ್ತಿದೆ. ಒಂದು ಕುಟುಂಬ ತಮ್ಮ ಮನೆಯ ಆದಾಯದಲ್ಲಿ 82% ದುಡ್ಡು ಅವರ ಶಿಕ್ಷಣ ಹಾಗೂ ಆರೋಗ್ಯಕ್ಕೆ ಬಳಸುತ್ತಿದ್ದಾರೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ನಾಯಕರಾದ ನೇತಾಜಿ ಹಾಗೂ ಭಗತ್ ಸಿಂಗ್ ರವರ ಕನಸು ಈಡೇರಿಲ್ಲ. ಅವರು ವ್ಯಕ್ತಪಡಿಸಿದ ಆತಂಕದಂತೆ ನಮ್ಮ ದೇಶದ ಸ್ವಾತಂತ್ರ್ಯವು ಶ್ರೀಮಂತರ ಪಾಲಾಗಿದೆ. ಹೀಗಿರುವಾಗ ಶಿಕ್ಷಣವು ಜನಸಾಮಾನ್ಯರಿಗೆ ಸಿಗಲು ಸಾಧ್ಯವಿಲ್ಲ. ಕಳೆದ 10 ವರ್ಷದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಮೇಲೆ ಈ ದೇಶದ ಶ್ರೀಮಂತರು ಮಾಡಿದ 16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಕಳೆದ 20 ವರ್ಷದಲ್ಲಿ ದೇಶದ ಕಾರ್ಪೊರೇಟ್ ಮನೆತನಗಳ 30 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಲಾಗಿದೆ. ಇದರಿಂದ ಸರಕಾರ ಶ್ರೀಮಂತ ವರ್ಗದ ಕೈಯಲ್ಲಿದೆ ಎನ್ನುವುದು ಸುಸ್ಪಷ್ಟ.

ಈ ವ್ಯವಸ್ಥೆ ಬದಲಾಗಬೇಕು. ನೇತಾಜಿ–ಭಗತ್ ಸಿಂಗ್‌ರ ಕನಸನ್ನು ನಾವು ನನಸು ಮಾಡಬೇಕಿದೆ. ಹೀಗಾಗಿ ಈ ಸಾರ್ವಜನಿಕ ಶಿಕ್ಷಣ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಮತ್ತು ಶಾಲೆಯನ್ನು ಮುಚ್ಚದಂತೆ ಪ್ರಬಲ ಹೋರಾಟವನ್ನು ಬೆಳೆಸಲು ಕರೆ ನೀಡಿದರು.

ಈ ಸಮಾವೇಶದ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯ ಖಜಾಂಚಿಗಳಾದ ಸುಭಾಷ್ ಬಿ. ಜೆ ಅವರು ಮಾತನಾಡಿ, ಸರಕಾರಿ ಶಿಕ್ಷಣ ಈ ದೇಶದ ಪ್ರತಿಯೊಬ್ಬ ಮಗುವಿನ ಹಕ್ಕು, ಹೀಗಾಗಿ ಈ ಶಾಲೆಗಳನ್ನು ಉಳಿಸುವ ಹೋರಾಟಕ್ಕೆ ಎಲ್ಲರೂ ಧುಮುಕಬೇಕು ಎಂದರು.

ಈ ಸಂದರ್ಭದಲ್ಲಿ ಎಐಡಿಎಸ್‌ಓ ರಾಜ್ಯ ಅಧ್ಯಕ್ಷರಾದ ಅಶ್ವಿನಿ ಕೆ. ಎಸ್, ಉಪಾಧ್ಯಕ್ಷರುಗಳಾದ ಅಭಯ ದಿವಾಕರ್, ಹಣಮಂತ ಹೆಚ್. ಎಸ್, ಚಂದ್ರಕಲಾ, ಅಪೂರ್ವ, ಕಚೇರಿ ಕಾರ್ಯದರ್ಶಿಗಳಾದ ಮಹಾಂತೇಶ್ ಬಿಳೂರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಲ್ಯಾಣ್, ವಿನಯ್ ಚಂದ್ರ ಹಾಗೂ ವಿವಿಧ ಜಿಲ್ಲೆಗಳಿಂದ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಹಲವು ಮಹತ್ವದ ಸಲಹೆಗಳನ್ನು ನೀಡಿದರು.




## ಸರ್ಕಾರಿ ಆರ್.ಸಿ ಮತ್ತು ಕಲಾ ಕಾಲೇಜುಗಳು ಉಳಿಯಲಿ!

ಬೆಂಗಳೂರು ನಗರ ವಿಶ್ವ–ವಿದ್ಯಾಲಯದ ಘಟಕ ಕಾಲೇಜುಗಳಾಗಿ ಆರ್.ಸಿ ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಪರಿವರ್ತಿಸುವ ಸರ್ಕಾರದ ನಿರ್ಧಾರವನ್ನು ಖಂಡಿಸಿ, ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಏಪ್ರಿಲ್ 29 ರಂದು ಪ್ರತಿಭಟನೆ ನಡೆಯಿತು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬಿ.ಜೆ., ಮಾತನಾಡಿ, 'ಘಟಕ ಕಾಲೇಜುಗಳಾದರೆ, ಶುಲ್ಕ ಹೆಚ್ಚಳವಾಗುತ್ತದೆ. ಬಡ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆ ಆಗಲಿದೆ. ಈಗಾಗಲೇ ಮಹಾರಾಣಿ ಪದವಿ ಕಾಲೇಜು, ಕ್ಲಸ್ಟರ್ ವಿಶ್ವವಿದ್ಯಾಲಯವಾದ ಕಾರಣ, ಕಾಲೇಜಿನ ಶುಲ್ಕ ಏರಿಕೆಯಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಸರ್ಕಾರದ ಅನುದಾನ ಸ್ಥಗಿತಗೊಳ್ಳಲಿದೆ. ಶಿಕ್ಷಣ ಮತ್ತಷ್ಟು ವ್ಯಾಪಾರೀಕರಣವಾಗುತ್ತದೆ' ಎಂದರು.

## ರಾಜ್ಯದಾದ್ಯಂತ ವಿದ್ಯಾರ್ಥಿ ಶಿಬಿರಗಳು: ಎಐಡಿಎಸ್‌ಓ

### ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳು ಹಾಗೂ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಕರೆ!



ವಿದ್ಯಾರ್ಥಿ ಶಿಬಿರ – ಬಳ್ಳಾರಿ




## ತುಮಕೂರು: ಎಐಎಂಎಸ್‌ಎಸ್ ಸಂಘಟಿತ ಜಿಲ್ಲಾ ಮಹಿಳಾ ಸಮ್ಮೇಳನ



'ಮಹಿಳೆಯರ ಮತ್ತು ಮಕ್ಕಳ ಜೀವಿಸುವ ಹಕ್ಕಿಗಾಗಿ ಧ್ವನಿ ಎತ್ತಿ', ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಆರ್ಥಿಕ ಭದ್ರತೆಯನ್ನು ಖಾತ್ರಿ ಪಡಿಸಿ' ಎಂಬ ಘೋಷಣೆಯೊಂದಿಗೆ ತುಮಕೂರಿನಲ್ಲಿ, ಎಐಎಂಎಸ್‌ಎಸ್ ಸಂಘಟಿತ ಜಿಲ್ಲಾ ಮಹಿಳಾ ಸಮ್ಮೇಳನವು ಜರುಗಿತು.

## ಸಂಸದರ ವೇತನ ಮತ್ತು ಸವಲತ್ತುಗಳ ಭಾರಿ ಹೆಚ್ಚಳಕ್ಕೆ ಎಸ್‌ಯುಸಿಐ(ಸಿ) ತೀವ್ರ ಖಂಡನೆ!

ಸಂಸದರ ವೇತನ ಮತ್ತು ಸವಲತ್ತುಗಳ ಭಾರಿ ಹೆಚ್ಚಳವನ್ನು ತೀವ್ರ ಖಂಡಿಸುತ್ತಾ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ 23–03–25ರಂದು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

2023ರ ಏಪ್ರಿಲ್ 1 ರಿಂದ ಪೂರ್ವಾನ್ವಯವಾಗುವಂತೆ ಸಂಸದರ ವೇತನ ಮತ್ತು ಪಿಂಚಣಿಯಲ್ಲಿ ಮಾಡಿರುವ 24% ಹೆಚ್ಚಳವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಈಗ, ಒಟ್ಟು 788 ಸಂಸದರೊಂದಿಗೆ (ಲೋಕಸಭೆಯಲ್ಲಿ 543 ಮತ್ತು ರಾಜ್ಯಸಭೆಯಲ್ಲಿ 245), ಎಲ್ಲಾ ಸಂಸದರ ಒಟ್ಟು ವೆಚ್ಚವು ವರ್ಷಕ್ಕೆ ಸುಮಾರು 3,400 ಕೋಟಿ ರೂಪಾಯಿಗಳನ್ನು ತಲುಪಿದೆ. ದೇಶದ ದುಡಿಯುವ ಜನತೆ ಹೆಚ್ಚುತ್ತಿರುವ ಆರ್ಥಿಕ ಸಂಕಷ್ಟದ ಕಾರಣದಿಂದ ತಲ್ಲಣಿಸುತ್ತಿರುವಾಗ, ಪ್ರತಿ ಕ್ಷಣವೂ ದಿವಾಳಿಯಾಗುತ್ತಿರುವಾಗ, ಹಲವಾರು ಕ್ಷೇತ್ರಗಳಲ್ಲಿ, ವಿಶೇಷವಾಗಿ ಅಸಂಘಟಿತ ಕ್ಷೇತ್ರದ ಕಾರ್ಮಿಕರ ವೇತನದ ಹೆಚ್ಚಳವು, ಹೆಚ್ಚುತ್ತಿರುವ ಜೀವನದ ವೆಚ್ಚಕ್ಕೆ ಯಾವುದೇ ರೀತಿಯಲ್ಲಿಯೂ ಹೊಂದಿಕೆಯಾಗದೆ ಇರುವಾಗ ಮತ್ತು ಆಹಾರ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳಿಗೆ ಸರ್ಕಾರ ನೀಡುವ ಅನುದಾನಗಳು ಕ್ರಮೇಣವಾಗಿ ಕಡಿತಗೊಳ್ಳುತ್ತಿರುವಾಗ, ಈ ಭಾರಿ ಹೆಚ್ಚಳವು ಸಂಪೂರ್ಣವಾಗಿ ಅನೈತಿಕವಾಗಿದೆ. ಜನ ಪ್ರತಿನಿಧಿಗಳಾಗಿರಬೇಕಾದ ಸಂಸದರು, ನಿಜವಾಗಿಯೂ ಜನರಿಗೆ ಸೇವೆ ಸಲ್ಲಿಸುತ್ತಿದ್ದಾರೆಯೇ ಅಥವಾ ಜನರ ಹಣವನ್ನು ಹೆಚ್ಚುಹೆಚ್ಚಾಗಿ ಕಬಳಿಸುತ್ತಾ, ಐಷಾರಾಮಿ ಜೀವನ ನಡೆಸಲು ಹೊರಟಿದ್ದಾರೆಯೇ? ವಾಸ್ತವದಲ್ಲಿ ಜನರೇ ಈ ಪ್ರತಿನಿಧಿಗಳನ್ನು ನೋಡಿಕೊಳ್ಳಬೇಕು ಎಂದಿರಬೇಕಾದರೆ, ಬದಲಿಗೆ ಅವರು ಸಾರ್ವಜನಿಕ ಖಜಾನೆಯಿಂದ ಹಣವನ್ನು ಪಡೆದು ತಮ್ಮ ಜೇಬನ್ನು ನಾಚಿಕೆಯಿಲ್ಲದೆ ತುಂಬಿಸಿಕೊಳ್ಳುತ್ತಿದ್ದಾರೆ.

ಸಂಸದರಿಗೆ ಸಿಗುವ ಇಂತಹ ಅನಗತ್ಯ ಹಾಗೂ ಅನ್ಯಾಯದ ಸೌಲಭ್ಯದ ವಿರುದ್ಧ ಸದನದಲ್ಲಿ ಎದ್ದ ಏಕೈಕ ಧ್ವನಿಯು, 2009ರಿಂದ 2014ರವರೆಗೆ ಎಸ್‌ಯುಸಿಐ(ಸಿ) ಸಂಸದರಾಗಿದ್ದ ಕಾಮ್ರೇಡ್ ತರುಣ್ ಮಂಡಲ್‌ರವರದ್ದು ಎಂದು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ. ಸಂಸದರ ವೇತನವನ್ನು ನಿಯಮಿತವಾಗಿ ಹೆಚ್ಚಿಸುವ ಹಿಂದಿನ ನಿಜವಾದ ಉದ್ದೇಶವು ಅವರನ್ನು ಸರ್ಕಾರ ಮತ್ತು ಆಡಳಿತ ವರ್ಗದ ಕೈಗೊಂಬೆಗಳನ್ನಾಗಿ ಮಾಡುವುದಾಗಿದೆ ಎಂಬುದನ್ನು ನಾವು ಹೇಳದೆ ವಿಧಿಯಿಲ್ಲ.




# 139ನೇ ಮೇ ದಿನಾಚರಣೆ



1886ರಲ್ಲಿ 8 ಘಂಟೆಗಳ ದುಡಿಮೆಯ ಅವಧಿಗಾಗಿ ಹೋರಾಡಿ, ಸುಳ್ಳು ಮೊಕದ್ದಮೆಯಲ್ಲಿ ನ್ಯಾಯದ ವಿಡಂಬನೆಗೆ ಸಿಲುಕಿದ ಧೀರೋದಾತ್ತವಾಗಿ ಮಡಿದ ಕಾರ್ಮಿಕ ನಾಯಕರು: (ಮೇಲೆ) ಆಲ್ಬರ್ಟ್ ಪಾರ್ಸನ್ಸ್, ಸಾಮ್ಯುಯೆಲ್ ಫೀಲ್ಡೆನ್, ಲೂಯಿ ಲಿಂಗ್, (ಮಧ್ಯೆ) ಆಗಸ್ಟ್ ಸ್ಪೈಸ್, (ಕೆಳಗೆ) ಮೈಕೆಲ್ ಷ್ವಾಬ್, ಜಾರ್ಜ್ ಎಂಗೆಲ್, ಅಡಾಲ್ಫ್ ಫಿಷರ್.
ಇವರ ಪೈಕಿ ನಾಲ್ಕು ಜನ ಕಾರ್ಮಿಕ ಮುಖಂಡರಾದ ಜಾರ್ಜ್ ಎಂಗಲ್, ಅಡಾಲ್ಫ್ ಫಿಷರ್ , ಆಲ್ಬರ್ಟ್ ಪಾರ್ಸನ್ಸ್ ಹಾಗೂ ಆಗಸ್ಟ್ ಸ್ಪೈನ್ಸ್ ಅವರುಗಳನ್ನು ಗಲ್ಲಿಗೇರಿಸಲಾಗಿತ್ತು.

ನವ ಗುಲಾಮಗಿರಿಗೆ ತಳ್ಳುವ ಲೇಬರ್‌ಕೋಡ್ ಹಾಗೂ ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಯ ವಿರುದ್ಧ ಸಮರಶೀಲ ಹೋರಾಟ ಬೆಳೆಸಲು ಮೇ ದಿನದಂದು ಎಐಯುಟಿಯುಸಿ ಕರೆ ನೀಡಿದೆ.

ಪ್ರಪಂಚದಾದ್ಯಂತ ಭಾಷೆ–ಗಡಿಗಳನ್ನು ಮೀರಿ, ಜಾತಿ–ಮತಗಳನ್ನು ಮರೆತು 'ವಿಶ್ವದ ಕಾರ್ಮಿಕರೆಲ್ಲ ಒಂದು' ಎಂಬ ಭಾವನೆಯಿಂದ ದೇಶ ವಿದೇಶಗಳ ಸಮಸ್ತ ಕಾರ್ಮಿಕರು ಮೇ 1ರಂದು ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ಎಲ್ಲೆಡೆ ಲಕ್ಷೋಪಾಧಿಯಲ್ಲಿ ಅಣಿನೆರೆದು ಆಚರಿಸಿದರು. ಫ್ರಾನ್ಸ್‌ನಲ್ಲಂತೂ ವೇತನ ಹೆಚ್ಚಳ ಹಾಗೂ ಉತ್ತಮ ಪರಿಸ್ಥಿತಿಗಾಗಿ ಬೀದಿಗಿಳಿದ ಕಾರ್ಮಿಕರು ಪೊಲೀಸ್ ಜೊತೆ ಬೀದಿ ಕಾಳಗ ನಡೆಸಿದ್ದು ಸ್ಫೂರ್ತಿದಾಯಕವಾಗಿತ್ತು!

ಆಧುನಿಕ ಕೈಗಾರಿಕಾ ಪದ್ಧತಿಯ ಬೆಳವಣಿಗೆಯೊಂದಿಗೆ ಲಾಭಬಡುಕ ಬಂಡವಾಳಶಾಹಿ ವ್ಯವಸ್ಥೆಯು ಅಮಾನುಷ ಬಾಲ ಕಾರ್ಮಿಕ ಪದ್ಧತಿಯನ್ನು, ಬಡತನವನ್ನು, ವೇಶ್ಯಾವಾಟಿಕೆಯನ್ನು, ನಿರುದ್ಯೋಗವನ್ನು ಹುಟ್ಟುಹಾಕಿತು. ಗಣಿಗಳು, ಕೈಗಾರಿಕೆಗಳು, ಫ್ಯಾಕ್ಟರಿಗಳಲ್ಲಿ ಕೆಲಸದ ಪರಿಸ್ಥಿತಿಗಳಂತೂ ನರಕವನ್ನೂ ನಾಚಿಸುವಂತಿದ್ದವು. ಅಲ್ಲಿ ದಿನಕ್ಕೆ 12 ರಿಂದ 18 ತಾಸು ದುಡಿಸಿಕೊಳ್ಳುವುದು ಸರ್ವೇ ಸಾಮಾನ್ಯವಾಗಿತ್ತು. ಇದರ ವಿರುದ್ಧ 'ದಿನವೊಂದಕ್ಕೆ ಕೇವಲ 8 ಗಂಟೆ ಮಾತ್ರ ದುಡಿಮೆ' ಎಂಬ ಐತಿಹಾಸಿಕ ಘೋಷಣೆಯೊಂದಿಗೆ ಅಮೇರಿಕಾದ ಧೀರ ಕಾರ್ಮಿಕರು ಮೇ ಒಂದರಂದು ಬೃಹತ್ ಆಂದೋಲನದ ಕಿಡಿ ಹಚ್ಚಿದರು. ಅದು ವಿಶ್ವದಾದ್ಯಂತ ಹರಡಿ 8 ಗಂಟೆ ದುಡಿಮೆ ಜಗತ್ತಿನ ಎಲ್ಲಾ ದೇಶಗಳ ಕಾನೂನಾಯಿತು. ಜಗತ್ತಿನಾದ್ಯಂತ ದುಡಿಯುವ ಜನರಿಗೆ ಸ್ಫೂರ್ತಿಯಾಯಿತು.

### ರಾಜ್ಯಾದ್ಯಂತ ಮೇ ದಿನಾಚರಣೆ:

ಈ ಬಾರಿ ಮೇ 1 ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಬೆಂಗಳೂರು, ನಂಜನಗೂಡು, ಚಾಮರಾಜನಗರ, ದಾವಣಗೆರೆ, ಧಾರವಾಡ, ಹುಬ್ಬಳ್ಳಿ, ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಗದಗ, ಗುಲ್ಬರ್ಗ, ಯಾದಗಿರಿ, ರಾಯಚೂರು, ಬಳ್ಳಾರಿ ಹೊಸಪೇಟೆ ಮುಂತಾದ ಕಡೆಗಳಲ್ಲಿ ಕಾರ್ಮಿಕರು ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯಾದ ಎಐಯುಟಿಯುಸಿ ನೇತೃತ್ವದಲ್ಲಿ ಸಮರೋತ್ಸಾಹದಿಂದ ಮೇ ದಿನ ಆಚರಿಸಿದರು. ಉರಿವ ಬಿಸಿಲನ್ನು ಲೆಕ್ಕಿಸದೆ ಹಾರಾಡುವ ಕೆಂಪು ಧ್ವಜಗಳನ್ನು ಹೆಗಲಿಗೇರಿಸಿಕೊಂಡು ಬಿಗಿ ಹಿಡಿದ ಮುಷ್ಟಿಯೊಂದಿಗೆ ಕೈಗಳನ್ನು ಮೇಲಕ್ಕೆತ್ತಿ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸ್ಫೂರ್ತಿದಾಯಕ ಮೆರವಣಿಗೆ ನಡೆಸಿದರು.

ಬಳ್ಳಾರಿ ಜಿಲ್ಲೆಯ ಸಂಡೂರು ನಗರದ ಎಪಿಎಂಸಿಯಲ್ಲಿ ಮೇ ದಿನದ ಪ್ರಯುಕ್ತ ಸಭೆಯನ್ನು ಸಂಘಟಿಸಲಾಗಿತ್ತು. ಅಲ್ಲಿ ಎಐಯುಟಿಯುಸಿ ರಾಜ್ಯಾಧ್ಯಕ್ಷರಾದ ಕಾ. ಕೆ ಸೋಮಶೇಖರ್‌ರವರು ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಅವರು, "ಇಂದು ಹೋರಾಟದಿಂದ ಗಳಿಸಿಕೊಂಡ 8 ಗಂಟೆ ದುಡಿಮೆ ಸೇರಿದಂತೆ ಎಲ್ಲಾ ಕಾರ್ಮಿಕ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಬಂಡವಾಳಶಾಹಿಗಳ ಲಾಭಕ್ಕಾಗಿ ಬಲಿ ಕೊಡಲಾಗುತ್ತಿದೆ. ಲೇಬರ್ ಕೋಡ್ ಹೆಸರಲ್ಲಿ 29 ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ, 4 ಸಂಹಿತೆಗಳನ್ನಾಗಿ ಕೇಂದ್ರದ ಮೋದಿ ಸರ್ಕಾರ ಪರಿವರ್ತನೆ ಮಾಡಿದೆ. ಹಿಂದಿನ ಕಾಂಗ್ರೆಸ್ ಸರ್ಕಾರ ಕೂಡ ಕಾರ್ಮಿಕ ವಿರೋಧಿ ಜಾಗತೀಕರಣ–ಉದಾರೀಕರಣ ನೀತಿಗಳನ್ನು ಜಾರಿಗೆ ತಂದಿತು. ಈ ಮೂಲಕ ಖಾಯಂ ಉದ್ಯೋಗಗಳನ್ನು ಸರ್ವನಾಶ ಮಾಡಿ ಗುತ್ತಿಗೆ ಪದ್ಧತಿಗೆ ಬುನಾದಿ ಹಾಕಿತು. ಇಂದು ಎಲ್ಲಾ ಪಕ್ಷಗಳು ಬಂಡವಾಳಶಾಹಿಗಳ ಪರವಾಗಿವೆ. ಕಾರ್ಮಿಕರ ಸಂಬಳ ಕೊಂಚ ಹೆಚ್ಚಳವಾಗುವಂತೆ ಕಂಡರೂ ಜೀವನ ವೆಚ್ಚ ವಿಪರೀತವಾಗಿ ಹೆಚ್ಚಾಗುತ್ತಿದೆ. ಹೀಗಾಗಿ ಕಾರ್ಮಿಕರು ಸಂಬಳದ ಹೆಚ್ಚಳಕ್ಕಾಗಿ ಮಾತ್ರವಲ್ಲದೆ ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗೊಳಿಸುವ ಹೋರಾಟವನ್ನು ಕಟ್ಟಬೇಕು. ಈ ನಿಟ್ಟಿನಲ್ಲಿ ಜಾತಿ ಧರ್ಮದ ಹೆಸರಲ್ಲಿ ಕಾರ್ಮಿಕರನ್ನು ಒಡೆದಾಳುವ ಪಿತೂರಿಗಳನ್ನು ಸೋಲಿಸಬೇಕು" ಎಂದು ಕರೆ ನೀಡಿದರು.

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ (ಜೆಸಿಟಿಯು) ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಉಚ್ಚ ನ್ಯಾಯಾಲಯವು ಮೆರವಣಿಗೆ ಮಾಡಲು ಹಾಕಿದ ನಿರ್ಬಂಧವನ್ನು ಮೀರಿ ಕಾರ್ಮಿಕ ಸಂಘಟನೆಗಳು ನಗರದ ಟೌನ್ ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೆ ಮೆರವಣಿಗೆ ನಡೆಸಿದವು. ಎಐಯುಟಿಯುಸಿ ರಾಜ್ಯ ಸೆಕ್ರೇಟೇರಿಯಟ್ ಸದಸ್ಯರಾದ ಕಾ. ಟಿ.ಸಿ ರಮಾ ಸಭೆಯನ್ನುದ್ಧೇಶಿಸಿ ಮಾತನಾಡಿದರು. ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷರು ಹಾಗೂ ಜೆಸಿಟಿಯು ರಾಜ್ಯ ಸಂಚಾಲಕರಾದ ಕಾ. ಕೆ.ವಿ.ಭಟ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನಮ್ಮ ಸಂಘಟನೆ ಎಐಯುಟಿಯುಸಿ ಮುಖಂಡರು ಸೇರಿದಂತೆ ಎಐಟಿಯುಸಿ, ಐಎನ್‌ಟಿಯುಸಿ, ಸಿಐಟಿಯು, ಟಿಯುಸಿಸಿ, ಎಐಸಿಸಿಟಿಯು, ಹೆಚ್‌ಎಂಕೆಪಿ ಹಾಗೂ ಬ್ಯಾಂಕ್ ಮತ್ತು ವಿಮಾ ಸಂಘಗಳ ಸಹಸ್ರಾರು ಕಾರ್ಮಿಕರು, ಅದರಲ್ಲೂ ಬೆಂಗಳೂರಿನ ಸಂಘಟಿತ

11ನೇ ಪುಟಕ್ಕೆ....

### ಜೆಸಿಟಿಯು ಆಶ್ರಯದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮೇ ದಿನ



ಎಐಯುಟಿಯುಸಿ ರಾಜ್ಯ ಸೆಕ್ರೇಟೇರಿಯಟ್ ಸದಸ್ಯರಾದ ಕಾಮ್ರೇಡ್ ಟಿಸಿ ರಮಾ



ಜೆಸಿಟಿಯು ರಾಜ್ಯ ಸಂಚಾಲಕರಾದ ಕಾಮ್ರೇಡ್ ಕೆ ವಿ.ಭಟ್

## ಪ್ರಜಾತಂತ್ರದ ರಕ್ಷಣೆಗಾಗಿ ನೇಪಾಳದ ಜನತೆ ನಡೆಸುತ್ತಿರುವ ಸಮರಶೀಲ ಹೋರಾಟ ಬೆಂಬಲಿಸಿ!

### ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ನೀಡಿರುವ ಪತ್ರಿಕಾ ಹೇಳಿಕೆ:

ನೇಪಾಳದ ಜನತೆ, ಸುದೀರ್ಘಕಾಲದ ಕಠಿಣ ಸಂಘರ್ಷದಲ್ಲಿ ಯುವಜನರು, ವಿದ್ಯಾರ್ಥಿಗಳು ಮತ್ತು ಮಹಿಳೆಯರ ಜೀವ ಬಲಿದಾನದಿಂದ, ರಾಜ ಪ್ರಭುತ್ವವನ್ನು ಕಿತ್ತೊಗೆದು ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ ಆಳ್ವಿಕೆಯನ್ನು ಸ್ಥಾಪಿಸಿದರು. ಆದರೆ, ಇತ್ತೀಚಿನ ದಿನಗಳಲ್ಲಿ, ಜನಜೀವನದ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವಲ್ಲಿನ ಆಳುವ ಎಡ ಒಕ್ಕೂಟ ಸರ್ಕಾರದ ವೈಫಲ್ಯತೆಯಿಂದಾಗಿ, ಮತ್ತೆ ರಾಜ ಪ್ರಭುತ್ವವನ್ನು ಮರುಸ್ಥಾಪಿಸಲು, ಪ್ರತಿಗಾಮಿ ಕೋಮುವಾದಿ, ಬಲಪಂಥೀಯ ಫ್ಯಾಸೀವಾದಿ ಶಕ್ತಿಗಳು ಸಶಸ್ತ್ರ ದಾಳಿ ನಡೆಸುತ್ತಿವೆ; ಇದು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಭಾರತದ ಬಲಪಂಥೀಯ, ಕೋಮುವಾದಿ ಶಕ್ತಿಗಳ ಬೆಂಬಲದಿಂದ ನಡೆಯುತ್ತಿದೆ.

ನೇಪಾಳದ ಜನರು ಎಡ–ಪ್ರಜಾತಾಂತ್ರಿಕ ಶಕ್ತಿಗಳ ನೇತೃತ್ವದಲ್ಲಿ ಈ ದಾಳಿಗೆ ಪ್ರತಿರೋಧವನ್ನು ಒಡ್ಡುತ್ತಿದ್ದಾರೆ. ಅವರ ಈ ಸಮರಶೀಲ ಹೋರಾಟವನ್ನು ಪ್ರಜಾತಾಂತ್ರಿಕ–ಧರ್ಮ ನಿರಪೇಕ್ಷ ಮನಸ್ಸುಳ್ಳವರೆಲ್ಲರೂ ಬೆಂಬಲಿಸುವುದು ಅತ್ಯವಶ್ಯ. ಮರಣೋನ್ಮುಖಿ ಬಂಡವಾಳವಾದದ ಈ ಕಾಲಘಟ್ಟದಲ್ಲಿ ಬಂಡವಾಳವಾದವನ್ನು ಕಿತ್ತೊಗೆದು ಸಮಾಜವಾದವನ್ನು ಸ್ಥಾಪಿಸದ ವಿನ: ಜನತೆಯ ವಿಮುಕ್ತಿಯನ್ನು ಸಾಧಿಸಲಾಗದು ಎಂದು ನಾವು ಈ ಸಂದರ್ಭದಲ್ಲಿ ಹೇಳ ಬಯಸುತ್ತೇವೆ. ಹಾಗಾಗಿ, ಜನರ ಈ ಸಮರಶೀಲ ಹೋರಾಟ ತನ್ನ ಅಂತಿಮ ಗುರಿಯಾದ ಸಮಾಜವಾದವನ್ನು ಸ್ಥಾಪಿಸುವ ತನಕ ಮುಂದುವರಿಯಬೇಕಾಗುತ್ತದೆ. ನೇಪಾಳದಲ್ಲಿ ರಾಜ ಪ್ರಭುತ್ವವನ್ನು ಮರುಸ್ಥಾಪಿಸುವ ಷಡ್ಯಂತ್ರಕ್ಕೆ ಕೊನೆಹಾಕಿ ಪ್ರಜಾತಂತ್ರವನ್ನು ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ರಕ್ಷಿಸುವ ನೇಪಾಳದ ಜನರ ಹೋರಾಟಕ್ಕೆ ನಾವು ಭಾರತದ ಜನರ ಪರವಾಗಿ ಸಂಪೂರ್ಣ ಬೆಂಬಲ ನೀಡುತ್ತೇವೆ. ಜೊತೆಗೆ, ನಾವು ವಿಶ್ವದ ಪ್ರಜಾತಾಂತ್ರಿಕ ಮನಸಿನ ಜನರು ಅವರ ಹೋರಾಟವನ್ನು ಬೆಂಬಲಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

( 10ನೇ ಪುಟದಿಂದ... )

## ಮೇ ದಿನಾಚರಣೆ

ವಲಯಗಳಿಗೆ ಸೇರಿದ ವಿವಿಧ ಉದ್ಯಮಗಳ ಕಾರ್ಮಿಕರು ಈ ಮೇ ದಿನದಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು.

ಒಟ್ಟಾರೆ ಈ ಬಾರಿಯ ಮೇ ದಿನದ ಕಾರ್ಯಕ್ರಮಗಳಲ್ಲಿ ಮುಖಂಡರು 'ಕಾರ್ಮಿಕ ವಿರೋಧಿ ಲೇಬರ್ ಕೋಡ್'ಗಳನ್ನು ಅನುಷ್ಠಾನಕ್ಕೆ ತರಲು ಮುಂದಾದ ಸರ್ಕಾರಗಳ ನಡೆಯನ್ನು ಖಂಡಿಸಿ, ಅದರ ವಿರುದ್ಧ ಮುಂಬರುವ ದಿನಗಳಲ್ಲಿ ಸಮರಶೀಲ ಹೋರಾಟಕ್ಕೆ ಮುಂದಾಗಲು ಕರೆ ನೀಡಿದ್ದು ಅತ್ಯಂತ ಸಮಯೋಚಿತವಾಗಿತ್ತು. ಜುಲೈ 9, 2025 ರಂದು ರಾಷ್ಟ್ರವ್ಯಾಪಿಯಾಗಿ ಜರುಗುವ ಸಾರ್ವತ್ರಿಕ ಮುಷ್ಕರಕ್ಕೆ ಮೇ ದಿನಾಚರಣೆಗಳು ಸ್ಫೂರ್ತಿಯನ್ನೀಯಲಿ ಎಂದು ಹಾರೈಸೋಣ!

**1896ರ ಮೇ 1ರಂದು ಕಾರ್ಮಿಕ ವರ್ಗದ ವಿಮುಕ್ತಿಗಾಗಿಯ ಹೋರಾಟದ ಸಂಘದ ಕರಪತ್ರದಲ್ಲಿ ಕಾಮ್ರೇಡ್ ವಿ.ಐ.ಲೆನಿನ್ ಬರೆದದ್ದು.....**

"ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ಇತರ ದೇಶಗಳಲ್ಲಿ ಕಾರ್ಮಿಕರು ಬಲಶಾಲಿ ಕಾರ್ಮಿಕ ಸಂಘಗಳಲ್ಲಿ ಒಂದಾಗಿದ್ದಾರೆ ಮತ್ತು ಹಲವಾರು ಹಕ್ಕುಗಳನ್ನು ಗಳಿಸಿಕೊಂಡು ಮೇ 1ನ್ನು ದುಡಿಮೆಗೆ ಸಾರ್ವತ್ರಿಕ ವಿರಾಮದ ದಿನವನ್ನಾಗಿಸಿಕೊಂಡಿದ್ದಾರೆ. ಉಸಿರುಗಟ್ಟಿಸುವ ಕಾರ್ಖಾನೆಗಳನ್ನು ಹಿಂದೆ ಬಿಟ್ಟು, ಬಲಿಷ್ಠವಾದ ತುಕಡಿಗಳಲ್ಲಿ, ನಗರಗಳ ಮುಖ್ಯ ರಸ್ತೆಗಳಲ್ಲಿ ಭಿತ್ತಿಪತ್ರಗಳನ್ನು ಹಿಡಿದುಕೊಂಡು ಅವರು ಸಾಗುತ್ತಿದ್ದಾರೆ. ಬೆಳೆಯುತ್ತಿರುವ ತಮ್ಮ ಅಪಾರ ಶಕ್ತಿಯ ಪ್ರದರ್ಶನವನ್ನು ಮಾಡುತ್ತಿದ್ದಾರೆ.........8 ಘಂಟೆ ದುಡಿಮೆ, 8 ಘಂಟೆ ವಿರಾಮ ಮತ್ತು 8 ಘಂಟೆ ವಿನೋದ ಎಂಬ ತಮ್ಮ ಮೂಲ ಆಗ್ರಹವನ್ನು ಮಾಲೀಕರಿಗೆ ನೆನಪಿಸುತ್ತಿದ್ದಾರೆ. ಇದನ್ನೇ ಇಂದು ಇತರ ದೇಶಗಳ ಕಾರ್ಮಿಕರು ಆಗ್ರಹಿಸುತ್ತಿರುವುದು."







## ವಸತಿನಿಲಯ ಕಾರ್ಮಿಕರ ಪ್ರತಿಭಟನೆ




ಏಪ್ರಿಲ್ 23, 2025: ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ವಿದ್ಯಾರ್ಥಿ ನಿಲಯಗಳು, ವಸತಿ ಶಾಲೆ/ಕಾಲೇಜ್, ಆಶ್ರಮ ಶಾಲೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ 'ಡಿ' ಗ್ರೂಪ್ ಹುದ್ದೆಗಳಾದ ಅಡಿಗೆ, ಅಡಿಗೆ ಸಹಾಯಕ, ಕಾವಲುಗಾರರು, ಸ್ವಚ್ಛತೆ, ಜವಾನರ ಹುದ್ದೆಗಳಲ್ಲಿ ಹಲವು ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ಕನಿಷ್ಠ ವೇತನ ಮಾಸಿಕ ರೂ.35,950ಗೆ ಪರಿಷ್ಕರಣೆ ಮಾಡಬೇಕು, ಸೇವೆ ಖಾಯಂಗೊಳಿಸಬೇಕು, ಗುತ್ತಿಗೆ ಪದ್ಧತಿ ರದ್ದುಪಡಿಸಿ ಇಲಾಖೆಯಿಂದಲೇ ನೇರವಾಗಿ ವೇತನ ಪಾವತಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ರಾಜ್ಯ ಮಟ್ಟದ ಬೃಹತ್ ಹೋರಾಟವನ್ನು ಎಐಯುಟಿಯುಸಿಗೆ ಸಂಯೋಜಿತವಾದ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘ(ರಿ)ದ ರಾಜ್ಯ ಸಮಿತಿ ನೇತೃತ್ವದಲ್ಲಿ ಸಂಘಟಿಸಲಾಯಿತು. ಪ್ರತಿಭಟನೆಯಲ್ಲಿ ಎಡದಿಂದ: ರಾಜ್ಯ ನಾಯಕರಾದ ಕಾ. ಡಿ. ನಾಗಲಕ್ಷ್ಮಿ, ಕಾ. ಸೋಮಶೇಖರ್ ಯಾದಗಿರಿ, ಕಾ. ಕೆ.ವಿ.ಭಟ್, ಕಾ. ಮಹೇಶ್ ಚಿಕಲಪರ್ವಿ, ಕಾ. ರಾಘವೇಂದ್ರ, ಡಾ. ಎನ್ ಪ್ರಮೋದ್.

### ಎಐಡಿವೈಓ, ಎಐಡಿಎಸ್ಓ, ಎಐಎಂಎಸ್ಎಸ್ ನೇತೃತ್ವದಲ್ಲಿ

## ಜನ ಮನ ಸೆಳೆದ ಸಾಂಸ್ಕೃತಿಕ ಜನೋತ್ಸವಗಳು

**ರಾಯಚೂರು:** 04.04.2025: ಎಐಕೆಕೆಎಂಎಸ್ ರಾಜ್ಯಾಧ್ಯಕ್ಷರಾದ ಕಾ.ಶಶಿಧರ್ ಎಂ. ಚಾಲನೆ ನೀಡಿದ ಜನೋತ್ಸವದ ಕಲಾ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು, ಯುವಜನರು, ನಾಗರಿಕರು ಬಹಳ ಉತ್ಸಾಹದಿಂದ ಭಾಗವಹಿಸಿದರು. ಸಿಂಧನೂರಿನ ಸ್ಫೂರ್ತಿ ಮಹಿಳಾ ಡೊಳ್ಳಿನ ಸಂಘದ ತಂಡದಿಂದ ಡೊಳ್ಳು ಕುಣಿತ ಹಾಗೂ ಅರಕಲಗುಡ್ಡದ ದುರುಗೇಶ್ ನೇತೃತ್ವದಲ್ಲಿ ಹಲಿಗೆ ಬಡಿತ ನಡೆದವು. ಒಂದು ಟ್ರ್ಯಾಕ್ಟರ್‌ನಲ್ಲಿ ಭಗತ್ ಸಿಂಗ್, ನೇತಾಜಿ, ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ, ಪಂಡಿತ್ ತಾರಾನಾಥರು, ಚಾರ್ಲಿ ಚಾಪ್ಲಿನ್, ಇನ್ನಿತರ ಮಹಾನ್ ವ್ಯಕ್ತಿಗಳ ಛದ್ಮವೇಷವನ್ನು ಧರಿಸಿದ್ದ ಮಕ್ಕಳಿದ್ದರು. ಇನ್ನೊಂದು ಟ್ರ್ಯಾಕ್ಟರ್‌ನಲ್ಲಿ ಶಿಲ್ಪ ಬಿ.ಕೆ ನೇತೃತ್ವದ ಸಂಗೀತ ತಂಡದಿಂದ ಪ್ರಗತಿಪರ ಗೀತೆಗಳು, ಭಾವಗೀತೆಗಳು ಹಾಗೂ ಭಜನಾ ಪದಗಳನ್ನು ಪ್ರಸ್ತುತಗೊಳಿಸಲಾಯಿತು. ಕಲಾ ಮೆರವಣಿಗೆಯುದ್ದಕ್ಕೂ, 'ಕಲೆ ಕಲೆಗಾಗಿ ಅಲ್ಲ, ಜನರಿಗಾಗಿ ಕಲೆ', 'ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ ಬಡತನವ ಬುಡಮಟ್ಟ ಕೀಳ ಬನ್ನಿ', 'ನಾವು ಮನುಜರು ಒಂದೇ ಜಾತಿ ಒಂದೇ ಮತ' ಎಂಬ ಭಾವೈಕ್ಯತೆಯ ಹಾಡುಗಳು ಮತ್ತು ಘೋಷಣೆಗಳು ಜನರ ಮನಸ್ಸನ್ನು ತಟ್ಟಿದವು. ಸಂಜೆ ರಂಗಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ವಿಜಯಪುರ:** ಎಐಯುಟಿಯುಸಿ ಜಿಲ್ಲಾಧ್ಯಕ್ಷರಾದ ಕಾ. ಸೋಮಶೇಖರ್ ಎಸ್., 14ನೇ ವಿಜಯಪುರ ಜನೋತ್ಸವಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮವನ್ನು ನವೋದಯದ ಹರಿಕಾರ ಜ್ಯೋತಿಬಾ ಫುಲೆಯವರ ಜನ್ಮ ದಿನಾಚರಣೆಗೆ ಸಮರ್ಪಿಸಲಾಗಿತ್ತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿವಿಧ ಕಲಾ ತಂಡಗಳು ನಡೆಸಿಕೊಟ್ಟು ಜನರ ಮೆಚ್ಚುಗೆ ಗಳಿಸಿದವು.




ವಿಜಯಪುರ



ರಾಯಚೂರು

**Registered Newspaper**

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ರಾಜ್ಯಾದ್ಯಂತ ಪಕ್ಷದ ಸಂಸ್ಥಾಪನಾ ದಿನಾಚರಣೆ



ಕೊಪ್ಪಳ



ಬಳ್ಳಾರಿ



ಕಲಬುರಗಿ


ಬೆಂಗಳೂರು

ಬೆಂಗಳೂರು ನಗರದ ಗಾಂಧೀ ಭವನದಲ್ಲಿ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ 78ನೇ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾ.ಸುಭಾಷ್ ದಾಸ್‌ಗುಪ್ತರವರು ಮಾತನಾಡುತ್ತಾ "ಜಾಗತಿಕ ಮಟ್ಟದಲ್ಲಿ ಮಾನವ ಸಮಾಜ, ಸಾಮ್ರಾಜ್ಯವಾದ ಮತ್ತು ಬಂಡವಾಶಾಹಿ ಪದ್ಧತಿಯಿಂದ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಲುಗುತ್ತಿದೆ, ಇನ್ನೊಂದೆಡೆ ಕೆಲವು ವರ್ಷಗಳಿಂದ ಸಾಂಸ್ಕೃತಿಕವಾಗಿಯೂ ಅಧ:ಪತನಕ್ಕೆ ಒಳಗಾಗಿದೆ. ಹೀಗಾಗಿ ನಮ್ಮ ಮುಂದೆ ಇರುವ ಏಕೈಕ ಪರ್ಯಾಯವೆಂದರೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸುವುದು. ಧರ್ಮವು ಮನುಷ್ಯನ ವೈಯಕ್ತಿಕ ನಂಬಿಕೆ ಆಗಿರಬೇಕೆ ಹೊರತು ಅದಕ್ಕೆ ರಾಜಕೀಯದಲ್ಲಿ ಯಾವ ಪಾತ್ರವೂ ಇಲ್ಲ ಎಂದು ನಾವು ನಂಬುತ್ತೇವೆ. ನಮ್ಮ ಹೋರಾಟ ಧರ್ಮದ ವಿರುದ್ಧವಲ್ಲ, ಬದಲಿಗೆ ನಮ್ಮ ಹೋರಾಟ ಕೋಮುವಾದದ ವಿರುದ್ಧ ಮಾತ್ರ, ಎಂದು ನುಡಿದರು. ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ, "ದೇಶದ ಆರ್ಥಿಕ ಪರಿಸ್ಥಿತಿ ಬಹಳ ಭೀಕರವಾಗಿದೆ. ಬೆಲೆ ಏರಿಕೆ, ನಿರುದ್ಯೋಗ, ಮಿತಿ ಮೀರಿದೆ. ಕೆಲವು ವರ್ಷಗಳ ಹಿಂದೆ ಹಲವಾರು ಕೈಗಾರಿಕಾ ಕಾನೂನುಗಳನ್ನು 4 ಕೋಡ್‌ಗಳನ್ನಾಗಿ ಮಾರ್ಪಾಡು ಮಾಡಿ ಕಾರ್ಮಿಕರ ಜೀವನವನ್ನು ಅಭದ್ರತೆಯೆಡೆಗೆ ನೂಕಿದ್ದಾರೆ. ಕಳೆದ ಮೂರು ವರ್ಷದಲ್ಲಿ ಮಧ್ಯಮ ವರ್ಗದ ಸಂಖ್ಯೆಯು 9 ಕೋಟಿಯಿಂದ 6 ಕೋಟಿಗೆ ಕ್ಷೀಣಿಸಿದೆ. 12 ಕೋಟಿಯಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ. ಇದು ನಮ್ಮ ದೇಶದ ಭೀಕರ ವಾಸ್ತವತೆಯನ್ನು ಬಿಂಬಿಸುತ್ತದೆ. ಇನ್ನೊಂದೆಡೆ, ನಮ್ಮ ದೇಶದ ರಾಜಕೀಯ ಪರಿಸ್ಥಿತಿಯೂ ಕೂಡ ಬಿಕ್ಕಟ್ಟಿಗೆ ಸಿಲುಕಿದೆ. ಕೇಂದ್ರದಲ್ಲಿರುವ ಬಿಜೆಪಿಯು ಬಹಿರಂಗವಾಗಿ ಹಿಂದೂ ಕೋಮುವಾದವನ್ನು ಬಳಸಿಕೊಂಡರೆ, ಕಾಂಗ್ರೆಸ್ ಪಕ್ಷವು ಮೃದು ಹಿಂದೂ ಕೋಮುವಾದದ ಧೋರಣೆಯನ್ನು ಬಳಸುತ್ತದೆ. ಎಲ್ಲಾ ಪಕ್ಷಗಳೂ ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಜನಗಳನ್ನು ಒಡೆದು ಅವರನ್ನು ಚುನಾವಣಾ ರಾಜಕೀಯದಲ್ಲಿ ಮುಳುಗಿಸಿ ಅವರನ್ನು ನಿಜವಾದ ಸಮಸ್ಯೆಗಳು ಹಾಗೂ ನೋವುಗಳಿಂದ ಮರೆಸಲು ಪ್ರಯತ್ನಿಸುತ್ತಿವೆ" ಎಂದರು. ಈ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಏಕೈಕ ಪಕ್ಷ ಎಸ್‌ಯುಸಿಐ(ಸಿ) ಒಂದೇ, ಜನಗಳಿಗೆ ದಾರಿದೀಪವಾಗಿದೆ. ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಶಿವದಾಸ್ ಘೋಷರವರ ಚಿಂತನೆಗಳನ್ನು ಆಧರಿಸಿ ಉನ್ನತ ನೀತಿ ನೈತಿಕೆಯನ್ನು ಮೈಗೂಡಿಸಿಕೊಳ್ಳುತ್ತಾ ಹೊಸ ಸಮಾಜವನ್ನು ಕಟ್ಟಲು ಮುಂಬನ್ನಿ ಎಂದು ಅವರು ಕರೆ ನೀಡಿದರು. ಭಾಷಣಕಾರರಾಗಿ ಬಂದಿದ್ದ ರಾಜ್ಯಸಮಿತಿ ಸದಸ್ಯರಾದ ಅಪರ್ಣ ರವರು ಮಾತನಾಡಿ ನಮ್ಮ ಪಕ್ಷವು ಕಾಮ್ರೇಡ್ ಶಿವದಾಸ್ ಘೋಷ್ ರವರ ಚಿಂತನೆಯ ಆಧಾರದ ಮೇಲೆ ಬಲಿಷ್ಠವಾಗಿ ಬೆಳೆಯುತ್ತಿದೆ. ಶಿವದಾಸ್ ಘೋಷ್‌ರವರು ತಮ್ಮ 13–14ನೇ ವಯಸ್ಸಿಯಲ್ಲಿಯೆ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅವರು ಅನುಶೀಲನ್ ಸಮಿತಿಯ ಸದಸ್ಯರಾದರು, ಈ ಹೋರಾಟದಲ್ಲಿ ಜೈಲು ವಾಸವನ್ನು ಅನುಭವಿಸಿದರು. ಮಾರ್ಕ್ಸ್‌ವಾದ ಎಂದರೆ ಕೇವಲ ಅರ್ಥಿಕ ಬೇಡಿಕೆಗಳ ಮೇಲೆ ಹೋರಾಟಗಳನ್ನು ಕಟ್ಟುವ ತತ್ವಶಾಸ್ತ್ರವಲ್ಲ, ಬದಲಿಗೆ ಜೀವನದ ಎಲ್ಲಾ ಸ್ತರದಲ್ಲಿ ವಿಶೇಷವಾಗಿ ಸಾಂಸ್ಕೃತಿಕ ಸ್ತರದಲ್ಲೂ ಸಹ ಅನ್ವಯವಾಗುವ ಸಿದ್ಧಾಂತ ಎಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾ.ಜ್ಞಾನಮೂರ್ತಿ ವಿ. ಯವರು ವಹಿಸಿಕೊಂಡು ಪ್ರಸ್ತಾವಿಕವಾಗಿ ಮಾತನಾಡಿ, ಈ ಕಾರ್ಯಕ್ರಮದ ಮಹತ್ವವನ್ನು ಪರಿಚಯಿಸಿದರು. ವೇದಿಕೆಯ ಮೇಲೆ ಪಕ್ಷದ ರಾಜ್ಯ ಸಮಿತಿ ಸದಸ್ಯರುಗಳಾದ ಕಾ. ಎಮ್. ಎನ್. ಶ್ರೀರಾಮ್, ಕಾ.ವಿ.ಎನ್. ರಾಜಶೇಖರ್, ಕಾ.ಬಿ.ರವಿ ಉಪಸ್ಥಿತರಿದ್ದರು. ರಾಜ್ಯದ ದಕ್ಷಿಣ ವಲಯದ ಜಿಲ್ಲೆಗಳಿಂದ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಭಾಗವಹಿಸಿದ್ದರು.

## ಭಾರತ-ಪಾಕಿಸ್ತಾನ ನಡುವಿನ ಯುದ್ಧವಿರಾಮ - ಎಸ್‌ಯುಸಿಐ(ಸಿ) ಹೇಳಿಕೆ

"ಭಾರತ–ಪಾಕಿಸ್ತಾನ ನಡುವಿನ ಯುದ್ಧವಿರಾಮದ ಸುದ್ದಿಯಿಂದ ಎರಡೂ ದೇಶಗಳ ಸಾಮಾನ್ಯ ಜನರಿಗೆ ನಿಟ್ಟುಸಿರು ಬಿಡುವಂತಾಗಿದೆ. ಯುದ್ಧವು ಆಸ್ತಿಪಾಸ್ತಿಗಳನ್ನು ನಾಶಮಾಡುವುದಷ್ಟೇ ಅಲ್ಲ, ಮಕ್ಕಳು ಸೇರಿದಂತೆ ಅನೇಕ ನಿರಪರಾಧಿಗಳನ್ನು ಕೊಲ್ಲುತ್ತದೆ. ಆದರೆ, ಕಾಶ್ಮೀರದ ಪಹಲ್‌ಗಾಮ್‌ನಲ್ಲಿ ನಿರಪರಾಧಿ ಪ್ರವಾಸಿಗರ ಮೇಲೆ ಕ್ರೌರ್ಯ ಎಸಗಿದವರನ್ನು ಇನ್ನೂ ಹಿಡಿಯಲಾಗಿಲ್ಲ, ಶಿಕ್ಷಿಸಲಾಗಿಲ್ಲ. ಹಿಂದಿನ ಸೈನಿಕ ದಾಳಿಗಳು ಭಯೋತ್ಪಾದಕ ಚಟುವಟಿಕೆಗಳನ್ನು ನಿಲ್ಲಿಸಲು ವಿಫಲವಾಗಿವೆ. ಈ ಸೈನಿಕ ಕಾರ್ಯಾಚರಣೆಯಿಂದ ಭಯೋತ್ಪಾದನೆಯ ಚಟುವಟಿಕೆಗಳು ಶಾಶ್ವತವಾಗಿ ನಿಂತೀತೆಂಬ ಭರವಸೆ ಏನಾದರೂ ಇದೆಯೇ? ಎರಡೂ ದೇಶಗಳ ಪಟ್ಟಭದ್ರ ಹಿತಾಸಕ್ತಿಗಳು ವಿವಾದ ಮತ್ತು ಯುದ್ಧದ ಉದ್ವಿಗ್ನತೆಯನ್ನು ಬಯಸುತ್ತವೆ. ಆದರೆ, ಯುದ್ಧದಲ್ಲಿ ಅತ್ಯಂತ ನೋವು ಅನುಭವಿಸುವ ಸಾಮಾನ್ಯ ಜನರು ಇದನ್ನು ಬಯಸುವುದಿಲ್ಲ. ನಾವು ಎರಡೂ ದೇಶಗಳ ಸಾಮಾನ್ಯ ಜನತೆ ಭಯೋತ್ಪಾದನೆ ಮತ್ತು ಯುದ್ಧದ ಸಂಚುಗಳ ವಿರುದ್ಧ ಚಳುವಳಿ ಬೆಳೆಸಲು ಮುಂದಾಗಲು ಕರೆ ನೀಡುತ್ತೇವೆ."




**ಸರ್ಕಾರದ ಆದೇಶವಾಗಿದ್ದರೂ ಸಹ ಬಳ್ಳಾರಿ ಜಿಲ್ಲಾಡಳಿತವು ಹಿಂಗಾರು ಜೋಳ ಖರೀದಿ ಮಾಡದಿರುವುದನ್ನು ಖಂಡಿಸಿ ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ 08.04.2025 ರಂದು ಆಹಾರ ಇಲಾಖೆಯ ಜಿಲ್ಲಾ ಕಚೇರಿ ಬಳಿ ಪ್ರತಿಭಟನೆ ಮಾಡಿ, ಇಲಾಖೆಯ ಉಪ ನಿರ್ದೇಶಕರಿಗೆ ಮೂರನೇ ಬಾರಿ ಮನವಿ ಸಲ್ಲಿಸಲಾಯಿತು.**

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA